3. ಆಲಿ ಇಮ್‌ರಾನ್

ಸೂ. 200 ರು. 20

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಅಲಿಫ್ ಲಾಮ್ಮೀಮ್.

الٓمّٓ ۝١

2. ಅಲ್ಲಾಹ್- ಅವನ ಅಸ್ತಿತ್ವವು ಚಿರಂತನವಾಗಿದ್ದು, ವಿಶ್ವ ವ್ಯವಸ್ಥಾಪನೆ ಮಾಡುತ್ತಲಿದೆ. ವಸ್ತುತಃ ಅವನ ಹೊರತು ಅನ್ಯ ಆರಾಧ್ಯನಿಲ್ಲ.

اللّٰهُ لَآ اِلٰهَ اِلَّا هُوَ الْحَيُّ الْقَيُّوْمُ ۝٢

3. ಓ ಪೈಗಂಬರರೇ, ಅವನು ನಿಮ್ಮ ಮೇಲೆ ಈ ಗ್ರಂಥವನ್ನು ಅವತೀರ್ಣಗೊಳಿಸಿದನು. ಇದು ಸತ್ಯವನ್ನು ತಂದಿದೆ. ಇದು ಈ ಹಿಂದೆ ಬಂದಿದ್ದ ಗ್ರಂಥಗಳನ್ನು ದೃಢೀಕರಿಸುತ್ತದೆ. ಇದಕ್ಕಿಂತ ಮುಂಚೆ ಅವನು ಮಾನವನ ಸನ್ಮಾರ್ಗದರ್ಶನಕ್ಕಾಗಿ ತೌರಾತ್ ಮತ್ತು ಇಂಜೀಲನ್ನು ಅವತೀರ್ಣಗೊಳಿಸಿದ್ದನು ಮತ್ತು ಅವನು (ಸತ್ಯಾಸತ್ಯತೆಗಳ ತಾರತಮ್ಯ ತೋರಿಸುವ) ಒರೆಗಲ್ಲನ್ನೂ ಅವತೀರ್ಣಗೊಳಿಸಿರುತ್ತಾನೆ.

نَزَّلَ عَلَيْكَ الْكِتٰبَ بِالْحَقِّ مُصَدِّقًا لِّمَا
بَيْنَ يَدَيْهِ وَاَنْزَلَ التَّوْرٰىةَ وَالْاِنْجِيْلَ ۝٣
مِنْ قَبْلُ هُدًى لِّلنَّاسِ وَاَنْزَلَ الْفُرْقَانَ ؕ

4. ಇನ್ನು ಅಲ್ಲಾಹನ ಆದೇಶಗಳನ್ನು ನಿರಾಕರಿಸುವವರಿಗೆ ನಿಶ್ಚಯವಾಗಿಯೂ ಘೋರ ಶಿಕ್ಷೆ ಸಿಗುವುದು. ಅಲ್ಲಾಹನು ಅತ್ಯಂತ ಶಕ್ತಿಯುಳ್ಳವನು ಮತ್ತು ಪಾಪಕಾರ್ಯಗಳಿಗೆ ತಕ್ಕ ಪ್ರತೀಕಾರ (ಶಿಕ್ಷೆ) ಮಾಡುವವನಾಗಿರುವನು.

اِنَّ الَّذِيْنَ كَفَرُوْا بِاٰيٰتِ اللّٰهِ لَهُمْ عَذَابٌ
شَدِيْدٌ ؕ وَاللّٰهُ عَزِيْزٌ ذُو انْتِقَامٍ ۝٤

5. ಭೂಮಿಯ ಮತ್ತು ಆಕಾಶದ ಯಾವ ವಸ್ತುವೂ ಅಲ್ಲಾಹನಿಂದ ಮರೆಯಾಗಿರುವುದಿಲ್ಲ.

اِنَّ اللّٰهَ لَا يَخْفٰى عَلَيْهِ شَيْءٌ فِى الْاَرْضِ
وَلَا فِى السَّمَآءِ ۝٥

6. ನಿಮ್ಮ ಮಾತೆಯರ ಗರ್ಭಗಳಲ್ಲಿ ತನಗಿಷ್ಟ ಬಂದ ರೂಪವನ್ನು ನಿಮಗೆ ಕೊಡುವಾತನು ಅವನೇ. ಪ್ರಬಲನೂ ಯುಕ್ತಿಪೂರ್ಣನೂ ಆಗಿರುವ ಅವನ ಹೊರತು ಅನ್ಯ ಆರಾಧ್ಯನಿಲ್ಲ.

هُوَ الَّذِىْ يُصَوِّرُكُمْ فِى الْاَرْحَامِ كَيْفَ
يَشَآءُ ؕ لَآ اِلٰهَ اِلَّا هُوَ الْعَزِيْزُ الْحَكِيْمُ ۝٦

7. (ಓ ಪೈಗಂಬರರೇ) ಅವನೇ ಈ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿದನು. ಈ ಗ್ರಂಥದಲ್ಲಿ ಎರಡು ಬಗೆಯ ಸೂಕ್ತಗಳಿವೆ. ಒಂದು, ಗ್ರಂಥದ ಮೂಲಾಧಾರವಾಗಿರುವ ಮುಹ್ಕಮಾತ್[1] ಇನ್ನೊಂದು ಮುತಶಾಬಿಹಾತ್.[2] ಹೃದಯಗಳಲ್ಲಿ ಕೊಂಕುಳ್ಳವರು ಕ್ಷೋಭೆ ಎಬ್ಬಿಸಲಿಕ್ಕಾಗಿ 'ಮುತಶಾಬಿಹಾತ್'ಗಳ ಬೆನ್ನು ಹತ್ತುತ್ತಾರೆ ಮತ್ತು ಅವುಗಳ ದುರ್ವ್ಯಾಖ್ಯಾನ ಮಾಡಲು ಪ್ರಯತ್ನಿಸುತ್ತಾರೆ. ವಸ್ತುತಃ ಅವುಗಳ ನಿಜಾರ್ಥವನ್ನು ಅಲ್ಲಾಹನ ಹೊರತು ಇನ್ನಾರೂ ಬಲ್ಲವರಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಜ್ಞಾನದಲ್ಲಿ ಪರಿಪಕ್ವತೆ ಹೊಂದಿದವರು, "ನಾವು ಇವುಗಳ ಬಗ್ಗೆ ವಿಶ್ವಾಸ ತಳೆದಿದ್ದೇವೆ- ಇವೆಲ್ಲ ನಮ್ಮ ಪ್ರಭುವಿನ ವತಿಯಿಂದಲೇ ಆಗಿರುತ್ತವೆ" ಎನ್ನುತ್ತಾರೆ.[3] ಯಾವುದರಿಂದಲೇ ಆದರೂ ಬುದ್ಧಿಜೀವಿಗಳು ಮಾತ್ರ ಸರಿಯಾದ ಪಾಠ ಪಡೆಯುತ್ತಾರೆ.

هُوَ الَّذِيْٓ اَنْزَلَ عَلَيْكَ الْكِتٰبَ مِنْهُ اٰيٰتٌ مُّحْكَمٰتٌ هُنَّ اُمُّ الْكِتٰبِ وَ اُخَرُ مُتَشٰبِهٰتٌ ؕ فَاَمَّا الَّذِيْنَ فِيْ قُلُوْبِهِمْ زَيْغٌ فَيَتَّبِعُوْنَ مَا تَشَابَهَ مِنْهُ ابْتِغَآءَ الْفِتْنَةِ وَ ابْتِغَآءَ تَاْوِيْلِهٖ ۚ وَمَا يَعْلَمُ تَاْوِيْلَهٗٓ اِلَّا اللّٰهُ ۘ وَ الرّٰسِخُوْنَ فِي الْعِلْمِ يَقُوْلُوْنَ اٰمَنَّا بِهٖ ۙ كُلٌّ مِّنْ عِنْدِ رَبِّنَا ۚ وَمَا يَذَّكَّرُ اِلَّآ اُولُوا الْاَلْبَابِ ۝٧

8. ಅವರು ಅಲ್ಲಾಹನೊಡನೆ, (ಹೀಗೆ ಪ್ರಾರ್ಥಿಸುತ್ತಿರುತ್ತಾರೆ) "ಓ ನಮ್ಮ ಪ್ರಭೂ, ನೀನು ನಮ್ಮನ್ನು ನೇರಮಾರ್ಗದಲ್ಲಿ ಹಾಕಿರುತ್ತ ಪುನಃ ನಮ್ಮ ಮನಸ್ಸುಗಳನ್ನು ದೋಷಗಳಲ್ಲಿ ಸಿಲುಕಿಸಿಬಿಡಬೇಡ. ನೀನು ನಿನ್ನ ಅನುಗ್ರಹ ಭಂಡಾರದಿಂದ ಕೃಪೆಯನ್ನು ನೀಡು. ನೀನೇ ನೈಜ ಮಹಾದಾನಿಯಾಗಿರುತ್ತೀ.

رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۚ اِنَّكَ اَنْتَ الْوَهَّابُ ۝٨

9. ಓ ನಮ್ಮ ಪ್ರಭೂ, ನೀನು ನಿಶ್ಚಯವಾಗಿಯೂ ಅದೊಂದು ದಿನ

رَبَّنَآ اِنَّكَ جَامِعُ النَّاسِ لِيَوْمٍ لَّا رَيْبَ

1. 'ಮುಹ್ಕಮಾತ್' ಎಂದರೆ ಸ್ಪಷ್ಟೋಕ್ತಿ ಇರುವ ಸೂಕ್ತಗಳು. ಇದರ ಅರ್ಥ ವಿವರಣೆಯನ್ನು ಗೊತ್ತುಪಡಿಸಲು ಯಾವುದೇ ರೀತಿಯ ತೊಡಕಿಲ್ಲ. ಈ ಸೂಕ್ತಗಳು ಗ್ರಂಥದ ನೈಜ ಬುನಾದಿಯಾಗಿವೆ. ಅರ್ಥಾತ್ ಪವಿತ್ರ ಕುರ್‌ಆನ್ ಯಾವ ಉದ್ದೇಶಕ್ಕಾಗಿ ಅವತೀರ್ಣಗೊಂಡಿದೆಯೋ ಅದನ್ನು ಈ ಸೂಕ್ತಗಳೇ ಈಡೇರಿಸುತ್ತವೆ. ಈ ಸೂಕ್ತಗಳ ಮೂಲಕವೇ ಜಗತ್ತಿಗೆ ಇಸ್ಲಾಮಿನ ಸಂದೇಶ ನೀಡಲಾಗಿದೆ. ಪಾಠಬೋಧಕವಾದ ಉಪದೇಶಗಳನ್ನು ನೀಡಲಾಗಿದೆ. ಪಥಭ್ರಷ್ಟತೆಯ ನಿರಾಕರಣೆ ಮತ್ತು ಸನ್ಮಾರ್ಗದ ಸ್ಪಷ್ಟೀಕರಣ ಮಾಡಲಾಗಿದೆ. ಅದರಲ್ಲಿ ಧರ್ಮದ ಮೂಲಭೂತ ತತ್ವಗಳನ್ನು ವಿವರಿಸಲಾಗಿದೆ. ಮೂಲವಿಶ್ವಾಸ, ಆರಾಧನೆ, ಚಾರಿತ್ರ್ಯ, ಕರ್ತವ್ಯ ಮತ್ತು ವಿಧಿ ನಿಷೇಧಗಳ ಆದೇಶಗಳನ್ನೂ ಅದರ ಮೂಲಕವೇ ನೀಡಲಾಗಿದೆ.

2. 'ಮುತಶಾಬಿಹಾತ್' ಎಂದರೆ ಅರ್ಥ ವಿವರಣೆಯಲ್ಲಿ ಅಸ್ಪಷ್ಟತೆಗೆ ಆಸ್ಪದವಿರುವಂತಹ ಸೂಕ್ತಗಳು. ಕಣ್ಣಿಗೆ ಕಾಣದ ವಾಸ್ತವಿಕತೆಗಳ ಕುರಿತು ಅಗತ್ಯ ಮಾಹಿತಿಗಳನ್ನು ಒದಗಿಸದೆ ಮಾನವನಿಗೆ ಜೀವನದ ಯಾವುದೇ ದಿಸೆಯನ್ನು ತಿಳಿಸಲು ಸಾಧ್ಯವಿಲ್ಲವೆಂಬುದು ವ್ಯಕ್ತ. ಅದೇ ರೀತಿ ಮಾನವನ ಇಂದ್ರಿಯಗಳಿಗೆ ಅತೀತವಾದ, ನೋಡಲು, ಸ್ಪರ್ಶಿಸಲು ಮತ್ತು ಸವಿಯಲು ಸಾಧ್ಯವಿಲ್ಲದಂತಹ ವಿಷಯಗಳನ್ನು ವಿವರಿಸಲು ಅದಕ್ಕೆಂದೇ ಮೀಸಲಾಗಿರುವಂತಹ ಯಾವುದೇ ಪದಗಳು ಮಾನವರ ಭಾಷೆಯಲ್ಲಿ ದೊರೆಯುವುದಿಲ್ಲವೆಂಬುದೂ ಸ್ಪಷ್ಟ. ಕೇಳುವವರ ಮನಸ್ಸಿನಲ್ಲಿ ಅದರ ನೈಜ ಚಿತ್ರಣವನ್ನು ಮೂಡಿಸುವಂತಹ ವಿವರಣಾ ಶೈಲಿಯೂ ಪ್ರಚಲಿತದಲ್ಲಿಲ್ಲ. ಆದ್ದರಿಂದ ಅಂತಹ ವಿಷಯಗಳನ್ನು ಪ್ರಸ್ತಾಪಿಸಲು, ಸ್ವರೂಪದಲ್ಲಿ ಅವುಗಳಿಗೆ ಹತ್ತಿರವಿರುವಂತಹ ಮತ್ತು ಇಂದ್ರಿಯಗಳಿಗೆ ನಿಲುಕುವಂತಹ ವಸ್ತುಗಳಿಗೆ ಮಾನವ ಭಾಷೆಯಲ್ಲಿ ಲಭ್ಯವಿರುವ ಪದ ಮತ್ತು ವಿವರಣಾಶೈಲಿಯನ್ನು ಬಳಸುವುದು ಅನಿವಾರ್ಯ. ಕುರ್‌ಆನಿನಲ್ಲೂ ಇಂತಹ ವಾಸ್ತವಿಕತೆಗಳ ವಿವರಣೆಗೆ ಪ್ರಸ್ತುತ ಭಾಷಾಶೈಲಿಯನ್ನೇ ಉಪಯೋಗಿಸಲಾಗಿದೆ. 'ಮುತಶಾಬಿಹಾತ್' ಎಂದರೆ ಇಂತಹ ಭಾಷಾ ಶೈಲಿಯನ್ನು ಅಳವಡಿಸಲಾದ ಸೂಕ್ತಗಳೇ ಆಗಿವೆ.

3. ಜನರಿಗೆ 'ಮುತಶಾಬಿಹಾತ್'ಗಳ ಸರಿಯಾದ ಅರ್ಥವೇ ತಿಳಿದಿರದಿದ್ದರೆ ಅವರು ಅದರ ಮೇಲೆ ಹೇಗೆ ವಿಶ್ವಾಸವಿಡುತ್ತಾರೆಂದು ಯಾರೂ

فِيهِ ۚ إِنَّ اللّٰهَ لَا يُخْلِفُ الْمِيعَادَ ﴿٩﴾

ಎಲ್ಲ ಜನರನ್ನು ಒಟ್ಟುಗೂಡಿಸಲಿರುವೆ. ಆ ದಿನ ಬಂದೊದಗುವುದರಲ್ಲಿ ಏನೇನೂ ಸಂಶಯವಿಲ್ಲ. ನೀನು ಎಷ್ಟು ಮಾತ್ರಕ್ಕೂ ವಚನಭಂಗ ಮಾಡುವವನಲ್ಲ.

إِنَّ الَّذِينَ كَفَرُوا لَنْ تُغْنِيَ عَنْهُمْ أَمْوَالُهُمْ وَلَا أَوْلَادُهُمْ مِنَ اللّٰهِ شَيْئًا ۖ وَأُولٰئِكَ هُمْ وَقُودُ النَّارِ ﴿١٠﴾

10. ಧರ್ಮಾಧಿಕ್ಕಾರ ನೀತಿಯನ್ನನುಸರಿಸಿದವರಿಗೆ ಅಲ್ಲಾಹನ ಎದುರು ಅವರ ಸಂಪತ್ತಾಗಲಿ ಸಂತತಿಯಾಗಲಿ ಯಾವ ಕೆಲಸಕ್ಕೂ ಬರಲಾರದು. ಅವರು ನರಕಾಗ್ನಿಯ ಇಂಧನವಾಗಿಯೇ ತೀರುವರು.

كَدَأْبِ آلِ فِرْعَوْنَ ۙ وَالَّذِينَ مِنْ قَبْلِهِمْ ۚ كَذَّبُوا بِآيَاتِنَا فَأَخَذَهُمُ اللّٰهُ بِذُنُوبِهِمْ ۗ وَاللّٰهُ شَدِيدُ الْعِقَابِ ﴿١١﴾

11. ಅವರ ಅಂತಿಮ ಪರಿಣಾಮವು ಫಿರ್‌ಔನನ ಸಂಗಡಿಗರ ಮತ್ತು ಅವರಿಗಿಂತ ಮುಂಚಿನ ಆಜ್ಞೋಲ್ಲಂಘಕರಂತೆಯೇ ಆಗುವುದು. ಅವರು ದೇವನಿದರ್ಶನಗಳನ್ನು ಸುಳ್ಳಾಗಿಸಿದರು. ತತ್ಪರಿಣಾಮವಾಗಿ ಅಲ್ಲಾಹನು ಅವರ ಪಾಪಕರ್ಮಗಳಿಗಾಗಿ ಅವರನ್ನು ಹಿಡಿದುಕೊಂಡನು ಮತ್ತು ನಿಜಕ್ಕೂ ಅಲ್ಲಾಹನು ಉಗ್ರವಾಗಿ ಶಿಕ್ಷಿಸುವವನಾಗಿದ್ದಾನೆ.

قُلْ لِلَّذِينَ كَفَرُوا سَتُغْلَبُونَ وَتُحْشَرُونَ إِلَىٰ جَهَنَّمَ ۚ وَبِئْسَ الْمِهَادُ ﴿١٢﴾

12. ಆದುದರಿಂದ ಓ ಮುಹಮ್ಮದ್‌ರವರೇ, ನಿಮ್ಮ ಆಹ್ವಾನವನ್ನು ಸ್ವೀಕರಿಸಲು ನಿರಾಕರಿಸಿದವರೊಡನೆ, "ನೀವು ಪರಾಜಿತರಾಗುವ ಮತ್ತು ನರಕಾಗ್ನಿಯ ಕಡೆಗೆ ಅಟ್ಟಲ್ಪಡುವ ಕಾಲ ಸನ್ನಿಹಿತವಾಗಿದೆ ಮತ್ತು ನರಕವು ಅತ್ಯಂತ ಕೆಟ್ಟ ತಂಗುದಾಣ" ಎಂದು ಹೇಳಿರಿ.

قَدْ كَانَ لَكُمْ آيَةٌ فِي فِئَتَيْنِ الْتَقَتَا ۖ فِئَةٌ تُقَاتِلُ فِي سَبِيلِ اللّٰهِ وَأُخْرَىٰ كَافِرَةٌ يَرَوْنَهُمْ مِثْلَيْهِمْ رَأْيَ الْعَيْنِ ۚ وَاللّٰهُ يُؤَيِّدُ بِنَصْرِهِ مَنْ يَشَاءُ ۗ إِنَّ فِي ذٰلِكَ لَعِبْرَةً لِأُولِي الْأَبْصَارِ ﴿١٣﴾

13. (ಬದ್ರ್ ಯುದ್ಧದಲ್ಲಿ) ಪರಸ್ಪರ ಕಾದಾಡಿದ ಆ ಎರಡು ತಂಡಗಳಲ್ಲಿ ನಿಮಗೊಂದು ನಿದರ್ಶನವಿತ್ತು. ಒಂದು ತಂಡವು ಅಲ್ಲಾಹನ ಮಾರ್ಗದಲ್ಲಿ ಕಾದಾಡುತ್ತಿದ್ದಿತು ಮತ್ತು ಇನ್ನೊಂದು ಸತ್ಯನಿಷೇಧಿ ಆಗಿತ್ತು. ಸತ್ಯನಿಷೇಧಿಗಳ ತಂಡವು ವಿಶ್ವಾಸಿಗಳ ತಂಡಕ್ಕಿಂತ ಇಮ್ಮಡಿ ಇದ್ದುದನ್ನು ನೋಡುವವರು ಕಣ್ಣಾರೆ ನೋಡುತ್ತಿದ್ದರು.[4] ಆದರೆ ಅಲ್ಲಾಹನು ತನಗಿಷ್ಟ ಬಂದವರಿಗೆ ವಿಜಯ ನೀಡಿ ಸಹಕರಿಸುತ್ತಾನೆ (ಎಂಬುದನ್ನು ಪರಿಣಾಮವು ಸಿದ್ಧಪಡಿಸಿತು.) ಜ್ಞಾನಚಕ್ಷು ಹೊಂದಿದವರಿಗೆ ಇದರಲ್ಲಿ ಬಹುದೊಡ್ಡ ಪಾಠ ಅಡಗಿದೆ.

ಸಂಶಯ ತಾಳಬೇಕಾಗಿಲ್ಲ. ವಿಚಾರವಂತನೊಬ್ಬನಿಗೆ ಕುರ್‌ಆನ್ ಅಲ್ಲಾಹನ ಗ್ರಂಥವಾಗಿದೆ ಎಂಬ ವಿಶ್ವಾಸ ಮೂಡುವುದು 'ಮುಹ್ಕಮಾತ್'ಗಳ ಅಧ್ಯಯನದಿಂದಲೇ ಹೊರತು 'ಮುತಶಾಬಿಹಾತ್'ಗಳ ಅರ್ಥ ವಿವರಣೆಯಿಂದಲ್ಲ. 'ಮುಹ್ಕಮಾತ್' ಎನಿಸಿಕೊಂಡಿರುವ ಸೂಕ್ತಗಳ ಬಗ್ಗೆ ಚಿಂತನೆ ನಡೆಸಿದಾಗ ಕುರ್‌ಆನ್ ಅಲ್ಲಾಹನ ಗ್ರಂಥವೇ ಆಗಿದೆ ಎಂಬ ಸಮಾಧಾನ ಆತನಲ್ಲಿ ಮೂಡುವುದರಿಂದ, 'ಮುತಶಾಬಿಹಾತ್'ಗಳಿಂದಾಗಿ ಅವನ ಮನಸ್ಸಿನಲ್ಲಿ ಸಂಶಯಗಳು ಹುಟ್ಟುವ ಪ್ರಮೇಯವೇ ಇಲ್ಲ.

4. ನಿಜವಾಗಿ ಅವರ ನಡುವೆ ಮೂರ್ಮಡಿ ವ್ಯತ್ಯಾಸವಿತ್ತು. ಆದರೆ ಸ್ಥೂಲ ನೋಟ ಬೀರುವವನಿಗೂ ಸತ್ಯನಿಷೇಧಿಗಳ ಸೇನೆ ಮುಸ್ಲಿಮರಿಗಿಂತ ಇಮ್ಮಡಿ ಇದೆ ಎನಿಸದೆ ಇರುತ್ತಿರಲಿಲ್ಲ.

14. ಜನರಿಗೆ ಇಂದ್ರಿಯಾಸಕ್ತಿಗಳಾದ- ಸ್ತ್ರೀಯರು, ಮಕ್ಕಳು, ಚಿನ್ನ -ಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿ ಭೂಮಿ- ಇವುಗಳನ್ನು ಅತ್ಯಾಕರ್ಷಕವಾಗಿ ಮಾಡಲಾಗಿದೆ. ಆದರೆ, ಇವೆಲ್ಲ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳು. ಯಥಾರ್ಥದಲ್ಲಿ ಅತ್ಯುತ್ತಮ ವಾಸಸ್ಥಳವಂತು ಅಲ್ಲಾಹನ ಬಳಿಯಲ್ಲಿದೆ.

زُيِّنَ لِلنَّاسِ حُبُّ الشَّهَوٰتِ مِنَ النِّسَآءِ
وَالْبَنِيْنَ وَالْقَنَاطِيْرِ الْمُقَنْطَرَةِ مِنَ
الذَّهَبِ وَالْفِضَّةِ وَالْخَيْلِ الْمُسَوَّمَةِ
وَالْاَنْعَامِ وَالْحَرْثِ ؕ ذٰلِكَ مَتَاعُ
الْحَيٰوةِ الدُّنْيَا ۚ وَاللّٰهُ عِنْدَهٗ حُسْنُ الْمَاٰبِ ﴿۱۴﴾

15. ಹೇಳಿರಿ- ನಾನು ಇವುಗಳಿಗಿಂತಲೂ ಹೆಚ್ಚು ಉತ್ತಮವಾದುದೇನೆಂದು ನಿಮಗೆ ತಿಳಿಸಲೇ? ಧರ್ಮನಿಷ್ಠೆಯ ನಿಲುಮೆಯನ್ನು ಕೈಗೊಂಡವರಿಗೆ ಅವರ ಪ್ರಭುವಿನ ಬಳಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳು ಇವೆ. ಅಲ್ಲಿ ಅವರಿಗೆ ಶಾಶ್ವತ ಜೀವನ ಪ್ರಾಪ್ತವಾಗುವುದು. ಪರಿಶುದ್ಧ ಮಡದಿಯರ ಒಡನಾಟವಿರುವುದು ಮತ್ತು ಅವರು ಅಲ್ಲಾಹನ ಸಂಪ್ರೀತಿಗೆ ಪಾತ್ರರಾಗುವರು. ಅಲ್ಲಾಹನು ತನ್ನ ದಾಸರ ರೀತಿ-ನೀತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ.

قُلْ اَؤُنَبِّئُكُمْ بِخَيْرٍ مِّنْ ذٰلِكُمْ ؕ لِلَّذِيْنَ
اتَّقَوْا عِنْدَ رَبِّهِمْ جَنّٰتٌ تَجْرِيْ مِنْ تَحْتِهَا
الْاَنْهٰرُ خٰلِدِيْنَ فِيْهَا وَاَزْوَاجٌ مُّطَهَّرَةٌ وَّ
رِضْوَانٌ مِّنَ اللّٰهِ ؕ وَاللّٰهُ بَصِيْرٌۢ بِالْعِبَادِ ۚ ﴿۱۵﴾

16. ಅವರು, "ಓ ನಮ್ಮ ಪ್ರಭೂ, ನಾವು ವಿಶ್ವಾಸವಿರಿಸಿದೆವು; ನಮ್ಮ ಅಪರಾಧಗಳನ್ನು ಕ್ಷಮಿಸು ಮತ್ತು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು" ಎಂದು ಹೇಳುವರು.

اَلَّذِيْنَ يَقُوْلُوْنَ رَبَّنَاۤ اِنَّنَاۤ اٰمَنَّا فَاغْفِرْ لَنَا
ذُنُوْبَنَا وَقِنَا عَذَابَ النَّارِ ۚ ﴿۱۶﴾

17. ಇವರು ಸಹನೆಯುಳ್ಳವರೂ ಸತ್ಯಸಂಧರೂ ವಿಧೇಯರೂ ಉದಾರಿಗಳೂ ಆಗಿರುತ್ತಾರೆ ಮತ್ತು ರಾತ್ರೆಯ ಕೊನೆಯ ಘಳಿಗೆಗಳಲ್ಲಿ ಅಲ್ಲಾಹನೊಡನೆ ಪಾಪವಿಮೋಚನೆಗಾಗಿ ಪ್ರಾರ್ಥಿಸುತ್ತಿರುತ್ತಾರೆ.

اَلصّٰبِرِيْنَ وَالصّٰدِقِيْنَ وَالْقٰنِتِيْنَ وَ
الْمُنْفِقِيْنَ وَالْمُسْتَغْفِرِيْنَ بِالْاَسْحَارِ ﴿۱۷﴾

18. ಅಲ್ಲಾಹನು ತನ್ನ ಹೊರತು ಇತರ ಆರಾಧ್ಯನಿಲ್ಲವೆಂದು ಸ್ವತಃ ಸಾಕ್ಷ್ಯ ನುಡಿಯುತ್ತಾನೆ ಮತ್ತು ದೇವಚರರೂ ಎಲ್ಲಾ ಜ್ಞಾನವಂತರೂ ಆ ಪ್ರಬಲ ಯುಕ್ತಿಪೂರ್ಣನ ಹೊರತು ವಾಸ್ತವದಲ್ಲಿ ಅನ್ಯ ಆರಾಧ್ಯನಿಲ್ಲವೆಂದು ಸತ್ಯ ಮತ್ತು ನ್ಯಾಯದೊಂದಿಗೆ ಸಾಕ್ಷಿ ನುಡಿಯುತ್ತಾರೆ.

شَهِدَ اللّٰهُ اَنَّهٗ لَاۤ اِلٰهَ اِلَّا هُوَ ۙ وَالْمَلٰٓئِكَةُ
وَاُولُوا الْعِلْمِ قَآئِمًۢا بِالْقِسْطِ ؕ لَاۤ اِلٰهَ اِلَّا
هُوَ الْعَزِيْزُ الْحَكِيْمُ ۚ ﴿۱۸﴾

19. ಅಲ್ಲಾಹನ ಬಳಿ ಧರ್ಮವು ಇಸ್ಲಾಮ್ ಮಾತ್ರ. ಗ್ರಂಥ ಕೊಡಲ್ಪಟ್ಟವರು ಈ ಧರ್ಮದಿಂದ ಸರಿದು ವಿವಿಧ ಸಂಪ್ರದಾಯಗಳನ್ನು ಕೈಗೊಂಡರು. ಅವರು ಜ್ಞಾನ ಬಂದ ನಂತರ ಪರಸ್ಪರರ ಮೇಲೆ ಅತಿರೇಕವೆಸಗಬಯಸಿದರೆಂದಲ್ಲದೆ ಹೀಗೆ ಮಾಡಲು ಬೇರಾವ

اِنَّ الدِّيْنَ عِنْدَ اللّٰهِ الْاِسْلَامُ ۫ وَمَا
اخْتَلَفَ الَّذِيْنَ اُوْتُوا الْكِتٰبَ اِلَّا مِنْۢ بَعْدِ
مَا جَآءَهُمُ الْعِلْمُ بَغْيًۢا بَيْنَهُمْ ؕ وَمَنْ يَّكْفُرْ

ಕಾರಣವೂ ಇರಲಿಲ್ಲ ಮತ್ತು ಅಲ್ಲಾಹನ ಆದೇಶಗಳ ಅನುಸರಣೆಯನ್ನು ನಿರಾಕರಿಸುವವರ ವಿಚಾರಣೆ ಮಾಡುವುದರಲ್ಲಿ ಅಲ್ಲಾಹನು ಅತಿ ಶೀಘ್ರನು.

بِاٰيٰتِ اللّٰهِ فَاِنَّ اللّٰهَ سَرِيْعُ الْحِسَابِ ﴿١٩﴾

20. ಇನ್ನು ಓ ಪ್ರವಾದಿಯವರೇ, ಅವರು ನಿಮ್ಮೊಂದಿಗೆ ಜಗಳಾಡಿದರೆ ಅವರೊಡನೆ,- "ನಾನು ಮತ್ತು ನನ್ನ ಅನುಯಾಯಿಗಳಂತು ಅಲ್ಲಾಹನಿಗೆ ಶರಣಾಗತರಾಗಿದ್ದೇವೆ" ಎಂದು ಹೇಳಿರಿ. ಗ್ರಂಥದವರೊಡನೆಯೂ ಗ್ರಂಥದವರಲ್ಲದವರೊಡನೆಯೂ, "ನೀವೂ ಆತನ ಅನುಸರಣೆಯನ್ನು ಸ್ವೀಕರಿಸಿದಿರಾ?" ಎಂದು ಕೇಳಿರಿ. ಸ್ವೀಕರಿಸಿದರೆ, ಅವರು ಸನ್ಮಾರ್ಗ ಪಡೆದರು ಮತ್ತು ಉಪೇಕ್ಷಿಸಿದರೆ, ನಿಮ್ಮ ಮೇಲಂತೂ ಸಂದೇಶವನ್ನು ಮುಟ್ಟಿಸುವ ಹೊಣೆ ಮಾತ್ರವಿತ್ತು. ಮುಂದೆ ಅಲ್ಲಾಹನು ತನ್ನ ದಾಸರೊಂದಿಗೆ ಸ್ವತಃ ವ್ಯವಹರಿಸುವವನಿದ್ದಾನೆ.

فَاِنْ حَآجُّوْكَ فَقُلْ اَسْلَمْتُ وَجْهِيَ لِلّٰهِ وَ
مَنِ اتَّبَعَنِ ؕ وَقُلْ لِّلَّذِيْنَ اُوْتُوا الْكِتٰبَ
وَالْاُمِّيّٖنَ ءَاَسْلَمْتُمْ ؕ فَاِنْ اَسْلَمُوْا فَقَدِ
اهْتَدَوْا ۚ وَاِنْ تَوَلَّوْا فَاِنَّمَا عَلَيْكَ الْبَلٰغُ ؕ
وَاللّٰهُ بَصِيْرٌۢ بِالْعِبَادِ ﴿٢٠﴾

21. ಅಲ್ಲಾಹನ ಆದೇಶಗಳ ಅನುಸರಣೆಯನ್ನು ನಿರಾಕರಿಸುವವರಿಗೂ ಅವನ ಸಂದೇಶವಾಹಕರನ್ನು ಅನ್ಯಾಯವಾಗಿ ವಧಿಸುವವರಿಗೂ ಮಾನವರ ವರ್ಗದಲ್ಲಿ ನ್ಯಾಯ ನೀತಿಗಳನ್ನು ನಿರ್ದೇಶಿಸಲುದ್ಯುಕ್ತರಾದವರ ಪ್ರಾಣಾಪಹಾರಗೈಯುವವರಿಗೂ ವೇದನಾತ್ಮಕ ಶಿಕ್ಷೆಯ ಶುಭವಾರ್ತೆ ನೀಡಿರಿ.

اِنَّ الَّذِيْنَ يَكْفُرُوْنَ بِاٰيٰتِ اللّٰهِ وَيَقْتُلُوْنَ
النَّبِيّٖنَ بِغَيْرِ حَقٍّ ۙ وَّيَقْتُلُوْنَ الَّذِيْنَ يَاْمُرُوْنَ
بِالْقِسْطِ مِنَ النَّاسِ ۙ فَبَشِّرْهُمْ
بِعَذَابٍ اَلِيْمٍ ﴿٢١﴾

22. ಇಹ-ಪರಗಳೆರಡರಲ್ಲೂ ಅವರ ಕರ್ಮಫಲಗಳು ನಾಶಗೊಂಡವು ಮತ್ತು ಅವರಿಗೆ ಸಹಾಯಕರು ಯಾರೂ ಇಲ್ಲ.

اُولٰٓئِكَ الَّذِيْنَ حَبِطَتْ اَعْمَالُهُمْ فِي الدُّنْيَا
وَالْاٰخِرَةِ ۡ وَمَا لَهُمْ مِّنْ نّٰصِرِيْنَ ﴿٢٢﴾

23. ಗ್ರಂಥಜ್ಞಾನದ ಒಂದಂಶವನ್ನು ಪಡೆದವರ ಸ್ಥಿತಿ ಏನೆಂದು ನೀವು ವಿವೇಚಿಸಲಿಲ್ಲವೇ? ಅವರ ನಡುವೆ ತೀರ್ಮಾನ ಕೈಗೊಳ್ಳಲಿಕ್ಕಾಗಿ ಅವರನ್ನು ದೇವಗ್ರಂಥದ ಕಡೆಗೆ ಕರೆದಾಗ ಅವರಲ್ಲೊಂದು ಪಂಗಡವು ಅದರಿಂದ ತಪ್ಪಿಸಿಕೊಳ್ಳುತ್ತದೆ ಮತ್ತು ಆ ತೀರ್ಮಾನದ ಕಡೆಗೆ ಬರಲು ನಿರಾಕರಿಸುತ್ತದೆ.

اَلَمْ تَرَ اِلَى الَّذِيْنَ اُوْتُوْا نَصِيْبًا مِّنَ الْكِتٰبِ
يُدْعَوْنَ اِلٰى كِتٰبِ اللّٰهِ لِيَحْكُمَ بَيْنَهُمْ ثُمَّ
يَتَوَلّٰى فَرِيْقٌ مِّنْهُمْ وَهُمْ مُّعْرِضُوْنَ ﴿٢٣﴾

24. "ನರಕಾಗ್ನಿಯು ನಮಗೆ ಸೋಂಕದು. ಒಂದು ವೇಳೆ ನರಕಯಾತನೆ ನಮಗೆ ಸಿಕ್ಕಿದರೂ ಅದು ಕೆಲವೇ ದಿನಗಳು ಮಾತ್ರ" ಎಂದು ಅವರು ಹೇಳುತ್ತಿರುವುದೇ ಅವರು ಹೀಗೆ ವರ್ತಿಸಲು ಕಾರಣ. ಅವರ ಸ್ವಯಂ ಕಲ್ಪಿತ ವಿಶ್ವಾಸಗಳು ಅವರನ್ನು ತಮ್ಮ ಧರ್ಮದ ಬಗ್ಗೆ ಅತ್ಯಂತ ತಪ್ಪುಧಾರಣೆಯಲ್ಲಿ ಸಿಲುಕಿಸಿವೆ.

ذٰلِكَ بِاَنَّهُمْ قَالُوْا لَنْ تَمَسَّنَا النَّارُ اِلَّآ
اَيَّامًا مَّعْدُوْدٰتٍ ۪ وَغَرَّهُمْ فِيْ دِيْنِهِمْ
مَّا كَانُوْا يَفْتَرُوْنَ ﴿٢٤﴾

25. ಆದರೆ ನಿಸ್ಸಂದೇಹವಾಗಿಯೂ ಬರಲಿರುವ ಅದೊಂದು ದಿನ

فَكَيْفَ اِذَا جَمَعْنٰهُمْ لِيَوْمٍ لَّا رَيْبَ فِيْهِ ۟

ನಾವು ಅವರನ್ನು ಒಟ್ಟುಗೂಡಿಸಿದಾಗ ಅವರ ಅವಸ್ಥೆ ಏನಾದೀತು? ಅಂದು ಪ್ರತಿಯೊಬ್ಬನಿಗೂ ಅವನ ದುಡಿಮೆಯ ಸಂಪೂರ್ಣ ಪ್ರತಿಫಲ ಕೊಡಲಾಗುವುದು ಮತ್ತು ಯಾರ ಮೇಲೂ ಅನ್ಯಾಯವಾಗದು.

وَوُفِّيَتْ كُلُّ نَفْسٍ مَّا كَسَبَتْ وَهُمْ
لَا يُظْلَمُونَ ﴿٢٥﴾

26. ಹೇಳಿರಿ- ಓ ಅಲ್ಲಾಹ್, ಸಕಲ ವಿಶ್ವಾಧಿಪತ್ಯದ ಒಡೆಯನೇ, ನೀನು ನಿನಗಿಷ್ಟ ಬಂದವರಿಗೆ ರಾಜ್ಯಾಧಿಕಾರ ನೀಡುವೆ ಮತ್ತು ನಿನಗಿಷ್ಟ ಬಂದವರಿಂದ ಕಸಿದುಕೊಳ್ಳುವೆ. ನಿನಗಿಷ್ಟ ಬಂದವರಿಗೆ ಪ್ರತಿಷ್ಠೆ ಪ್ರದಾನ ಮಾಡುವೆ. ನಿನಗಿಷ್ಟ ಬಂದವರನ್ನು ಅವಮಾನಪಡಿಸುವೆ. ಒಳಿತುಗಳು ನಿನ್ನ ಅಧಿಕಾರ ಹಸ್ತದಲ್ಲಿವೆ. ನಿಶ್ಚಯವಾಗಿಯೂ ನೀನು ಸರ್ವಶಕ್ತನಾಗಿರುವೆ.

قُلِ اللّٰهُمَّ مٰلِكَ الْمُلْكِ تُؤْتِي الْمُلْكَ
مَنْ تَشَآءُ وَتَنْزِعُ الْمُلْكَ مِمَّنْ تَشَآءُ وَ
تُعِزُّ مَنْ تَشَآءُ وَتُذِلُّ مَنْ تَشَآءُ بِيَدِكَ
الْخَيْرُ إِنَّكَ عَلٰى كُلِّ شَيْءٍ قَدِيْرٌ ﴿٢٦﴾

27. ನೀನು ಇರುಳನ್ನು ಹಗಲಿನೊಳಗೆ ಪೋಣಿಸುತ್ತಲೂ ಹಗಲನ್ನು ಇರುಳಿನೊಳಗೆ ಪೋಣಿಸುತ್ತಲೂ ತರುವೆ. ಜೀವಿಗಳಿಂದ ನಿರ್ಜೀವಿಗಳನ್ನು ನಿರ್ಜೀವಿಗಳಿಂದ ಜೀವಿಗಳನ್ನೂ ಹೊರಗೆ ತೆಗೆಯುವೆ ಮತ್ತು ನಿನಗಿಷ್ಟ ಬಂದವರಿಗೆ ಅಸಂಖ್ಯಾತ ಜೀವನಾಧಾರ ನೀಡುವೆ.

تُوْلِجُ الَّيْلَ فِي النَّهَارِ وَتُوْلِجُ النَّهَارَ فِي
الَّيْلِ وَتُخْرِجُ الْحَيَّ مِنَ الْمَيِّتِ وَتُخْرِجُ
الْمَيِّتَ مِنَ الْحَيِّ وَتَرْزُقُ مَنْ تَشَآءُ
بِغَيْرِ حِسَابٍ ﴿٢٧﴾

28. ಸತ್ಯವಿಶ್ವಾಸಿಗಳು ಸತ್ಯವಿಶ್ವಾಸಿಗಳನ್ನು ಬಿಟ್ಟು ಸತ್ಯನಿಷೇಧಿಗಳನ್ನು ತಮ್ಮ ಆತ್ಮೀಯ ಸ್ನೇಹಿತರನ್ನಾಗಿ ಎಂದಿಗೂ ಮಾಡಬಾರದು. ಹಾಗೆ ಮಾಡುವವನ ಸಂಬಂಧ ಅಲ್ಲಾಹನೊಂದಿಗೆ ಏನೂ ಇರುವುದಿಲ್ಲ. ನೀವು ಅವರ ಮರ್ದನದಿಂದ ತಪ್ಪಿಸಿಕೊಳ್ಳಲು ತೋರಿಕೆಗಾಗಿ ಈ ವಿಧಾನವನ್ನನುಸರಿಸಿದರೆ, ಅದಕ್ಕೆ ಕ್ಷಮೆ ಇದೆ.[5] ಆದರೆ ಅಲ್ಲಾಹನು ಸ್ವತಃ ತನ್ನ ಬಗ್ಗೆ (ಭಯಪಡಬೇಕೆಂದು) ನಿಮಗೆ ಎಚ್ಚರಿಕೆ ನೀಡುತ್ತಿದ್ದಾನೆ ಮತ್ತು ನಿಮಗೆ ಆತನ ಕಡೆಗೇ ಮರಳಿ ಹೋಗಲಿಕ್ಕಿದೆ.[6]

لَا يَتَّخِذِ الْمُؤْمِنُوْنَ الْكٰفِرِيْنَ أَوْلِيَآءَ مِنْ
دُوْنِ الْمُؤْمِنِيْنَ وَمَنْ يَّفْعَلْ ذٰلِكَ فَلَيْسَ
مِنَ اللّٰهِ فِيْ شَيْءٍ إِلَّآ أَنْ تَتَّقُوْا مِنْهُمْ
تُقٰىةً وَيُحَذِّرُكُمُ اللّٰهُ نَفْسَهُ وَ
إِلَى اللّٰهِ الْمَصِيْرُ ﴿٢٨﴾

5. ಅರ್ಥಾತ್- ಸತ್ಯವಿಶ್ವಾಸಿಯೊಬ್ಬ ಇಸ್ಲಾಮಿನ ಶತ್ರು ಕೂಟದ ಜಾಲದಲ್ಲಿ ಸಿಕ್ಕಿಬಿದ್ದಿದ್ದು ಅವರಿಂದ ಹಿಂಸೆ ಮತ್ತು ದಬ್ಬಾಳಿಕೆಯ ಭಯವನ್ನೆದುರಿಸುತ್ತಿದ್ದರೆ, ಅವನಿಗೆ ತನ್ನ ವಿಶ್ವಾಸವನ್ನು ಗೋಪ್ಯವಾಗಿರಿಸುವ ಅನುಮತಿ ಇದೆ. ಸತ್ಯನಿಷೇಧಿಗಳೊಂದಿಗೆ ಅವನು ತೋರಿಕೆಗಾಗಿ ಅವರ ಪೈಕಿಯ ಒಬ್ಬನಂತೆ ಇರಬಹುದು. ಹಾಗೆಯೇ ತಾನು ಮುಸ್ಲಿಮನಾಗಿರುವುದು ಬಹಿರಂಗವಾದಾಗ ಪ್ರಾಣ ಉಳಿಸಲಿಕ್ಕಾಗಿ ಅವನು ಸತ್ಯನಿಷೇಧಿಗಳೊಂದಿಗೆ ಮೈತ್ರಿಯನ್ನು ಪ್ರಕಟಿಸಬಹುದು. ಎಷ್ಟರವರೆಗೆಂದರೆ ತೀವ್ರ ಭಯದ ಸಂದರ್ಭದಲ್ಲಿ ಅದನ್ನು ಎದುರಿಸುವ ಶಕ್ತಿ ಇಲ್ಲದವರಿಗೆ ಬಾಯಿಯಿಂದ ಸತ್ಯನಿಷೇಧದ ವಚನ ಹೇಳಲಿಕ್ಕೂ ಅನುಮತಿ ಇದೆ.

6. ಅರ್ಥಾತ್- ನಿಮ್ಮ ಪ್ರಾಣ ಉಳಿಸಲಿಕ್ಕಾಗಿ ನೀವು ಇಸ್ಲಾಮ್ ಮತ್ತು ಇಸ್ಲಾಮೀ ಸಂಘಟನೆಯ ಹಿತಕ್ಕೆ ಅಥವಾ ಯಾವುದೇ ಮುಸ್ಲಿಮನ ಸೊತ್ತುವಿತ್ತಗಳಿಗೆ ಹಾನಿಯಾಗದಂತೆ ತನ್ನ ಪ್ರಾಣ ಉಳಿಸಿಕೊಳ್ಳುವ ಉಪಾಯವನ್ನು ಕೈಗೊಳ್ಳಬಹುದು. ಆದರೆ ಇಸ್ಲಾಮಿನ ವಿರುದ್ಧ ಸತ್ಯನಿಷೇಧದ ಬೆಳವಣಿಗೆ ಸಾಧ್ಯವಾಗುವಂತಹ ಅಥವಾ ಮುಸ್ಲಿಮರನ್ನು ಸತ್ಯನಿಷೇಧಿಗಳು ಗೆಲ್ಲಲು ಅವಕಾಶ ನೀಡುವಂತಹ ರೀತಿಯಲ್ಲಿ ನೀವು ಸತ್ಯನಿಷೇಧಿಗಳಿಗೆ ನೆರವಾಗದಂತೆ ಎಚ್ಚರ ವಹಿಸಬೇಕು.

29. ಓ ಪೈಗಂಬರರೇ, ನಿಮ್ಮ ಹೃದಯದಲ್ಲಿರುವುದನ್ನು ಬಚ್ಚಿಟ್ಟರೂ ಪ್ರಕಟಪಡಿಸಿದರೂ ಅಲ್ಲಾಹನು ಅದನ್ನು ಅರಿಯುತ್ತಾನೆಂದೂ ಭೂಮಿ-ಆಕಾಶಗಳ ಯಾವ ವಸ್ತುವೂ ಅವನ ತಿಳುವಳಿಕೆಗೆ ಹೊರತಾಗಿರುವುದಿಲ್ಲವೆಂದೂ ಅವನ ಅಧಿಕಾರವು ಸಮಸ್ತ ವಸ್ತುಗಳ ಮೇಲೂ ವ್ಯಾಪಿಸಿದೆ ಎಂದೂ ಜನರಿಗೆ ಎಚ್ಚರಿಕೆ ಹೇಳಿರಿ.

قُلْ إِنْ تُخْفُوْا مَا فِيْ صُدُوْرِكُمْ أَوْ تُبْدُوْهُ
يَعْلَمْهُ اللّٰهُ ۗ وَيَعْلَمُ مَا فِي السَّمٰوٰتِ وَمَا
فِي الْأَرْضِ ۗ وَاللّٰهُ عَلٰى كُلِّ شَيْءٍ قَدِيْرٌ ﴿٢٩﴾

30. ಪುಣ್ಯ ಮಾಡಿರಲಿ ಅಥವಾ ಪಾಪವೆಸಗಿರಲಿ ಪ್ರತಿಯೊಬ್ಬನೂ ತನ್ನ ಕರ್ಮಫಲವನ್ನು ಪ್ರತ್ಯಕ್ಷ ಪಡೆಯುವ ಆ ದಿನ ಬರಲಿದೆ. ಅಂದು ಮಾನವನು, ಅಕಟ! ಈ ದಿನವು ತನ್ನಿಂದ ಇನ್ನೂ ಬಹಳ ದೂರವಿರುತ್ತಿದ್ದರೆ! ಎಂದು ಆಶಿಸುವನು. ಅಲ್ಲಾಹನು ಸ್ವತಃ ತನ್ನ ಬಗ್ಗೆ (ಭಯಪಡಬೇಕೆಂದು) ನಿಮಗೆ ಎಚ್ಚರಿಕೆ ನೀಡುತ್ತಿದ್ದಾನೆ ಮತ್ತು ಅವನು ತನ್ನ ದಾಸರ ಪರಮ ಹಿತಚಿಂತಕನಾಗಿರುತ್ತಾನೆ.

يَوْمَ تَجِدُ كُلُّ نَفْسٍ مَّا عَمِلَتْ مِنْ خَيْرٍ
مُّحْضَرًا ۖ وَّمَا عَمِلَتْ مِنْ سُوْٓءٍ ۚ تَوَدُّ لَوْ
أَنَّ بَيْنَهَا وَبَيْنَهٗٓ أَمَدًا ۢ بَعِيْدًا ۗ وَيُحَذِّرُكُمُ
اللّٰهُ نَفْسَهٗ ۗ وَاللّٰهُ رَءُوْفٌ ۢ بِالْعِبَادِ ﴿٣٠﴾

31. ಓ ಪೈಗಂಬರರೇ, ನೀವು ಜನರೊಡನೆ ಹೀಗೆ ಹೇಳಿಬಿಡಿರಿ,- "ನೀವು ನಿಜವಾಗಿಯೂ ಅಲ್ಲಾಹನನ್ನು ಪ್ರೀತಿಸುತ್ತೀರೆಂದಾದರೆ ನನ್ನ ಅನುಕರಣೆ ಮಾಡಿರಿ. ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅವನು ಮಹಾ ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ."

قُلْ إِنْ كُنْتُمْ تُحِبُّوْنَ اللّٰهَ فَاتَّبِعُوْنِيْ
يُحْبِبْكُمُ اللّٰهُ وَيَغْفِرْ لَكُمْ ذُنُوْبَكُمْ ۗ
وَاللّٰهُ غَفُوْرٌ رَّحِيْمٌ ﴿٣١﴾

32. "ಅಲ್ಲಾಹ್ ಮತ್ತು ಸಂದೇಶವಾಹಕರ ಅನುಸರಣೆ ಮಾಡಿರಿ" ಎಂದು ಅವರೊಡನೆ ಹೇಳಿರಿ. ಅವರು ನಿಮ್ಮ ಆಹ್ವಾನವನ್ನು ಸ್ವೀಕರಿಸದಿದ್ದರೆ ಅಲ್ಲಾಹನು ತನ್ನ ಮತ್ತು ತನ್ನ ಸಂದೇಶವಾಹಕರ ಅನುಸರಣೆಯನ್ನು ನಿರಾಕರಿಸುವವರನ್ನು ಪ್ರೀತಿಸುವುದು ಖಂಡಿತ ವಾಗಿಯೂ ಅಸಂಭವ.

قُلْ أَطِيْعُوا اللّٰهَ وَالرَّسُوْلَ ۚ فَإِنْ تَوَلَّوْا
فَإِنَّ اللّٰهَ لَا يُحِبُّ الْكٰفِرِيْنَ ﴿٣٢﴾

33. ಅಲ್ಲಾಹನು ಆದಮ್, ನೂಹ್, ಇಬ್‌ರಾಹೀಮ್‌ರ ವಂಶ ಮತ್ತು ಇಮ್‌ರಾನರ[7] ವಂಶಗಳನ್ನು ಸಕಲ ಜಗತ್ತಿನವರ ಮೇಲೆ ಮಹತ್ವ ನೀಡಿ (ತನ್ನ ಸಂದೇಶವಾಹಕತ್ವಕ್ಕಾಗಿ) ಆಯ್ದುಕೊಂಡಿದ್ದನು.

إِنَّ اللّٰهَ اصْطَفٰٓى اٰدَمَ وَنُوْحًا وَّاٰلَ إِبْرٰهِيْمَ
وَاٰلَ عِمْرٰنَ عَلَى الْعٰلَمِيْنَ ﴿٣٣﴾

34. ಇವರು ಪರಸ್ಪರರ ವಂಶದವರೂ ಒಂದೇ ಪರಂಪರೆಯವರೂ ಆಗಿದ್ದರು. ಅಲ್ಲಾಹನು ಎಲ್ಲವನ್ನೂ ಆಲಿಸುತ್ತಾನೆ ಮತ್ತು ಅರಿಯುತ್ತಾನೆ.

ذُرِّيَّةً ۢ بَعْضُهَا مِنْ ۢ بَعْضٍ ۗ وَاللّٰهُ سَمِيْعٌ عَلِيْمٌ ﴿٣٤﴾

7. ಇಮ್ರಾನ್ ಎಂಬುದು ಹ.ಮೂಸಾ ಮತ್ತು ಹ. ಹಾರೂನ್‌ರ(ಅ) ತಂದೆಯ ಹೆಸರಾಗಿದೆ. ಬೈಬಲ್‌ನಲ್ಲಿ ಅವರನ್ನು 'ಅಮ್ರಾಮ್' ಎಂದು ಉಲ್ಲೇಖಿಸಲಾಗಿದೆ.

35. ಇಮ್‍ರಾನನ ಸ್ತ್ರೀಯು,[8] "ಓ ನನ್ನ ಪ್ರಭೂ, ನಾನು ನನ್ನ ಗರ್ಭದಲ್ಲಿರುವ ಶಿಶುವನ್ನು ನಿನಗೆ ಹರಕೆಯಾಗಿ ಒಪ್ಪಿಸುತ್ತೇನೆ. ಅದು ನಿನ್ನ ಕಾರ್ಯಕ್ಕಾಗಿಯೇ ಸಮರ್ಪಿತವಿರುವುದು. ನನ್ನ ಈ ಕಾಣಿಕೆಯನ್ನು ಸ್ವೀಕರಿಸು. ನಿಶ್ಚಯವಾಗಿಯೂ ನೀನು ಸರ್ವಶ್ರುತನೂ ಸರ್ವಜ್ಞನೂ ಆಗಿರುವೆ, ಎಂದು ಹೇಳುತ್ತಿದ್ದಳು.

إِذْ قَالَتِ امْرَأَتُ عِمْرَانَ رَبِّ إِنِّي نَذَرْتُ
لَكَ مَا فِي بَطْنِي مُحَرَّرًا فَتَقَبَّلْ مِنِّي ۖ إِنَّكَ
أَنْتَ السَّمِيعُ الْعَلِيمُ ٣٥

36. (ಆಗ ಅವನು ಅದನ್ನು ಆಲಿಸುತ್ತಿದ್ದನು) ಅನಂತರ ಅವಳಲ್ಲಿ ಆ ಹೆಣ್ಣು ಶಿಶು ಜನಿಸಿದಾಗ ಅವಳು, "ಓ ನನ್ನ ಪ್ರಭೂ, ನನ್ನಲ್ಲಿ ಹೆಣ್ಣು ಶಿಶು ಜನಿಸಿಬಿಟ್ಟಿದೆ" ಎಂದಳು - ವಸ್ತುತಃ ಅವಳು ಏನು ಪಡೆದಿದ್ದಳೆಂಬುದರ ಸಮಾಚಾರ ಅಲ್ಲಾಹನಿಗೆ ತಿಳಿದಿತ್ತು ಮತ್ತು ಗಂಡು ಶಿಶು ಹೆಣ್ಣು ಶಿಶುವಿನಂತಿರುವುದಿಲ್ಲ. "ಸರಿ, ನಾನು ಅದಕ್ಕೆ ಮರ್ಯಮ್ ಎಂದು ನಾಮಕರಣ ಮಾಡಿಬಿಟ್ಟೆ ಮತ್ತು ನಾನು ಆಕೆಯನ್ನೂ ಆಕೆಯ ಭಾವೀ ಸಂತತಿಯನ್ನೂ ಬಹಿಷ್ಕೃತ ಶೈತಾನನ ಕೇಡಿನಿಂದ (ತಪ್ಪಿಸಲು) ನಿನ್ನ ರಕ್ಷಣೆಗೆ ಒಪ್ಪಿಸುತ್ತೇನೆ" ಎಂದು ಹೇಳಿದಳು.

فَلَمَّا وَضَعَتْهَا قَالَتْ رَبِّ إِنِّي وَضَعْتُهَا
أُنْثَىٰ وَاللَّهُ أَعْلَمُ بِمَا وَضَعَتْ وَلَيْسَ
الذَّكَرُ كَالْأُنْثَىٰ ۖ وَإِنِّي سَمَّيْتُهَا مَرْيَمَ
وَإِنِّي أُعِيذُهَا بِكَ وَذُرِّيَّتَهَا مِنَ
الشَّيْطَانِ الرَّجِيمِ ٣٦

37. ಕೊನೆಗೆ ಅವಳ ಪ್ರಭುವು ಆ ಬಾಲಕಿಯನ್ನು ಸಂತೋಷದಿಂದ ಸ್ವೀಕರಿಸಿಕೊಂಡನು. ಅವಳನ್ನು ಅತ್ಯುತ್ತಮ ಬಾಲಕಿಯನ್ನಾಗಿ ಬೆಳೆಸಿದನು ಮತ್ತು ಝುಕರಿಯ್ಯಾರನ್ನು ಅವಳ ರಕ್ಷಕನನ್ನಾಗಿ ಮಾಡಿದನು. ಝುಕರಿಯ್ಯಾರವರು ಅವಳ ಕೊಠಡಿಗೆ ಬಂದಾಗಲೆಲ್ಲಾ ಅವಳ ಬಳಿ ಒಂದಲ್ಲೊಂದು ಭಕ್ಷ್ಯ ಪದಾರ್ಥವನ್ನು ಕಂಡು, "ಓ ಮರ್ಯಮ್, ಇದು ನಿನ್ನ ಬಳಿಗೆ ಎಲ್ಲಿಂದ ಬಂತು?' ಎಂದು ಕೇಳುತ್ತಿದ್ದರು. ಆಗ ಅವಳು, "ಅಲ್ಲಾಹನ ಕಡೆಯಿಂದ ಬಂದಿದೆ. ಅಲ್ಲಾಹನು ತನಗಿಷ್ಟ ಬಂದವರಿಗೆ ಎಣಿಸಲಾಗದಷ್ಟು ಅನ್ನಾಧಾರ ನೀಡುತ್ತಾನೆ" ಎಂದು ಉತ್ತರಿಸುತ್ತಿದ್ದಳು.

فَتَقَبَّلَهَا رَبُّهَا بِقَبُولٍ حَسَنٍ وَأَنْبَتَهَا
نَبَاتًا حَسَنًا وَكَفَّلَهَا زَكَرِيَّا ۖ كُلَّمَا دَخَلَ
عَلَيْهَا زَكَرِيَّا الْمِحْرَابَ وَجَدَ عِنْدَهَا رِزْقًا ۖ
قَالَ يَا مَرْيَمُ أَنَّىٰ لَكِ هَٰذَا ۖ قَالَتْ هُوَ
مِنْ عِنْدِ اللَّهِ ۖ إِنَّ اللَّهَ يَرْزُقُ مَنْ
يَشَاءُ بِغَيْرِ حِسَابٍ ٣٧

38. ಇದನ್ನು ಕಂಡು ಝುಕರಿಯ್ಯಾರವರು ತಮ್ಮ ಪ್ರಭುವನ್ನು ಪ್ರಾರ್ಥಿಸಿದರು, "ಪ್ರಭೂ, ನಿನ್ನ ಮಹಿಮೆಯಿಂದ ನನಗೆ ಸುನೀತ ಸಂತತಿ ದಯಪಾಲಿಸು. ನೀನೇ ಪ್ರಾರ್ಥನೆಯನ್ನಾಲಿಸುವವನಾಗಿರುತ್ತಿ."

هُنَالِكَ دَعَا زَكَرِيَّا رَبَّهُ ۖ قَالَ رَبِّ هَبْ
لِي مِنْ لَدُنْكَ ذُرِّيَّةً طَيِّبَةً ۖ إِنَّكَ
سَمِيعُ الدُّعَاءِ ٣٨

8. 'ಇಮ್ರಾನನ ಸ್ತ್ರೀ' ಎಂಬುದನ್ನು 'ಇಮ್ರಾನನ ಪತ್ನಿ' ಎಂದು ಗ್ರಹಿಸುವುದಾದರೆ ಇಲ್ಲಿ ಪ್ರಸ್ತಾಪಿಸಲಾಗಿರುವ ಇಮ್ರಾನ್ ಮೇಲೆ ಪ್ರಸ್ತಾಪಿಸಿದ ವ್ಯಕ್ತಿಯಲ್ಲವೆಂದಾಗುತ್ತದೆ. ಅವರು ಹ.ಮರ್ಯಮರ ತಂದೆಯಾಗಿದ್ದು, ಪ್ರಾಯಶಃ ಅವರ ಹೆಸರೂ ಇಮ್ರಾನ್ ಎಂದಾಗಿರಬಹುದು. ಇಮ್ರಾನನ ಸ್ತ್ರೀ ಎಂದರೆ 'ಆಲೆ ಇಮ್ರಾನ್'ನ ಸ್ತ್ರೀ ಎಂದು ಅರ್ಥೈಸುವುದಾದರೆ ಹ.ಮರ್ಯಮರ ತಾಯಿ ಇಮ್ರಾನ್ ಮನೆತನದವರಾಗಿದ್ದರೆಂದು ಭಾವಿಸಬೇಕಾಗುತ್ತದೆ.

39. ಅವರು ಮಿಹ್ರಾಬಿನಲ್ಲಿ ನಿಂತು ನಮಾಝ್ ಮಾಡುತ್ತಿದ್ದಾಗ ಪ್ರತ್ಯುತ್ತರವಾಗಿ ದೇವಚರರು ಕರೆದು ಹೀಗೆ ಹೇಳಿದರು, "ಅಲ್ಲಾಹ್ ನಿನಗೆ ಯಹ್ಯಾರ ಸುವಾರ್ತೆ ನೀಡುತ್ತಿದ್ದಾನೆ. ಅವನು ಅಲ್ಲಾಹನ ವತಿಯಿಂದ ಒಂದು 'ಫರಮಾನನ್ನು'[9](ಆಜ್ಞೆಯನ್ನು) ದೃಢ ಪಡಿಸುವವನಾಗಿ ಬರುವನು. ಅವನಲ್ಲಿ ನಾಯಕತ್ವ ಮತ್ತು ಹಿರಿತನವಿರುವುದು. ಅತ್ಯುನ್ನತ ವ್ಯವಸ್ಥಾಪನಾ ಸಾಮರ್ಥ್ಯವಿರುವುದು. ಅವನು ಪ್ರವಾದಿತ್ವವನ್ನು ಹೊಂದುವನು ಮತ್ತು ಸಜ್ಜನರಲ್ಲಿ ಗಣಿಸಲ್ಪಡುವನು."

فَنَادَتْهُ الْمَلٰٓئِكَةُ وَهُوَ قَآئِمٌ يُّصَلِّيْ فِي
الْمِحْرَابِ ۙ اَنَّ اللّٰهَ يُبَشِّرُكَ بِيَحْيٰى مُصَدِّقًۢا
بِكَلِمَةٍ مِّنَ اللّٰهِ وَسَيِّدًا وَّحَصُوْرًا وَّنَبِيًّا
مِّنَ الصّٰلِحِيْنَ ﴿٣٩﴾

40. ಆಗ ಝಕರಿಯ್ಯಾರವರು, "ಓ ನನ್ನ ಪ್ರಭೂ, ನನ್ನಲ್ಲಿ ಪುತ್ರ ಸಂತತಿ ಉಂಟಾಗುವುದೆಲ್ಲಿಂದ? ನಾನು ಅತಿವೃದ್ಧನಾಗಿದ್ದೇನೆ ಮತ್ತು ನನ್ನ ಪತ್ನಿ ಬಂಜೆಯಾಗಿದ್ದಾಳೆ" ಎಂದರು. ಉತ್ತರ ಸಿಕ್ಕಿತು- "ಹಾಗೆಯೇ ಆಗುವುದು.[10] ಅಲ್ಲಾಹನು ತಾನಿಚ್ಛಿಸುವುದನ್ನು ಮಾಡುತ್ತಾನೆ."

قَالَ رَبِّ اَنّٰى يَكُوْنُ لِيْ غُلٰمٌ وَّقَدْ بَلَغَنِيَ
الْكِبَرُ وَامْرَاَتِيْ عَاقِرٌ ؕ قَالَ كَذٰلِكَ
اللّٰهُ يَفْعَلُ مَا يَشَآءُ ﴿٤٠﴾

41. ಆಗ ಅವರು ಹೀಗೆ ನಿವೇದಿಸಿದರು, "ನನ್ನ ಪ್ರಭೂ, ಹಾಗಾದರೆ ನನಗೊಂದು ಕುರುಹನ್ನು ನಿರ್ಧರಿಸಿಬಿಡು." ಉತ್ತರ (ಹೀಗೆ) ಬಂತು- "ನೀವು ಮೂರು ದಿನಗಳ ತನಕ ಜನರೊಡನೆ ಸನ್ನೆಗಳ ಮೂಲಕ ವಿನಾ ಏನೂ ಮಾತನಾಡಲಿಕ್ಕಿಲ್ಲ (ಅಥವಾ ನಿಮ್ಮಿಂದ ಮಾತಾಡಲಿಕ್ಕಾಗದು). ಇದೇ ನಿಮಗೆ ಕುರುಹು. ಈ ಅವಧಿಯಲ್ಲಿ ನಿಮ್ಮ ಪ್ರಭುವನ್ನು ಅತಿ ಹೆಚ್ಚಾಗಿ ಸ್ಮರಿಸಬೇಕು ಮತ್ತು ಪ್ರಭಾತ, ಪ್ರದೋಷಗಳಲ್ಲಿ ಅವನ ಸ್ತುತಿಗೈಯುತ್ತಿರಬೇಕು."

قَالَ رَبِّ اجْعَلْ لِّيْٓ اٰيَةً ؕ قَالَ اٰيَتُكَ اَلَّا
تُكَلِّمَ النَّاسَ ثَلٰثَةَ اَيَّامٍ اِلَّا رَمْزًا ؕ وَاذْكُرْ
رَّبَّكَ كَثِيْرًا وَّسَبِّحْ بِالْعَشِيِّ وَالْاِبْكَارِ ﴿٤١﴾

42. ಅನಂತರ ದೇವಚರರು ಮರ್ಯಮರ ಬಳಿಗೆ ಬಂದು (ಹೀಗೆ) ಹೇಳಿದ ಸಂದರ್ಭ ಬಂತು- "ಓ ಮರ್ಯಮ್, ಅಲ್ಲಾಹನು ನಿನ್ನನ್ನು ಪುನೀತಳನ್ನಾಗಿ ಮಾಡಿದನು ಮತ್ತು ನಿನಗೆ ಪರಿಶುದ್ಧತೆ ನೀಡಿದನು ಮತ್ತು ಸಮಸ್ತ ಲೋಕದ ಸ್ತ್ರೀಯರ ಮೇಲೆ ನಿನಗೆ ಶ್ರೇಷ್ಠತೆ ದಯಪಾಲಿಸಿ ತನ್ನ ಸೇವೆಗಾಗಿ ಆಯ್ದುಕೊಂಡನು.

وَاِذْ قَالَتِ الْمَلٰٓئِكَةُ يٰمَرْيَمُ اِنَّ اللّٰهَ
اصْطَفٰىكِ وَطَهَّرَكِ وَاصْطَفٰىكِ عَلٰى
نِسَآءِ الْعٰلَمِيْنَ ﴿٤٢﴾

43. ಓ ಮರ್ಯಮ್, ನಿನ್ನ ಪ್ರಭುವಿನ ಆಜ್ಞಾಪಾಲಕಿಯಾಗಿರು, ಅವನ ಮುಂದೆ ಸಾಷ್ಟಾಂಗವೆರಗು, ಅವನ ಮುಂದೆ ಬಾಗುವವರೊಂದಿಗೆ ನೀನೂ ಬಾಗು."

يٰمَرْيَمُ اقْنُتِيْ لِرَبِّكِ وَاسْجُدِيْ وَ
ارْكَعِيْ مَعَ الرّٰكِعِيْنَ ﴿٤٣﴾

9. ಅಲ್ಲಾಹನ 'ಫರಮಾನು' (ಆಜ್ಞೆ) ಎಂದರೆ ಪ್ರವಾದಿ ಈಸಾ(ಅ) ಆಗಿದ್ದಾರೆ. ಅವರ ಜನನ ಅಲ್ಲಾಹನ ಅಸಾಮಾನ್ಯ ಆಜ್ಞೆಯ ಮೂಲಕ ಅಸ್ವಾಭಾವಿಕ ರೀತಿಯಿಂದಾದುದರಿಂದ ಅವರನ್ನು ಪವಿತ್ರ ಕುರ್‌ಆನಿನಲ್ಲಿ "ಕಲಿಮತುಮ್ಮಿನಲ್ಲಾಹ್" ಅರ್ಥಾತ್ 'ಅಲ್ಲಾಹನ ಆಜ್ಞೆ' ಎನ್ನಲಾಗಿದೆ.

10. ಅರ್ಥಾತ್- ನಿನ್ನ ವೃದ್ಧಾಪ್ಯ ಮತ್ತು ನಿನ್ನ ಪತ್ನಿಯ ಬಂಜೆತನದ ಹೊರತಾಗಿಯೂ ಅಲ್ಲಾಹನು ನಿನಗೆ ಪುತ್ರನನ್ನು ದಯಪಾಲಿಸುವನು.

44. ಓ ಪೈಗಂಬರರೇ, ಇವು ನಿಮಗೆ ದಿವ್ಯವಾಣಿಯ ಮೂಲಕ ನಾವು ನೀಡುತ್ತಿರುವ ಅಗೋಚರ ವೃತ್ತಾಂತಗಳು. ಅನ್ಯಥಾ ಹೈಕಲ್ (ಮಹಾ ಆರಾಧನಾಲಯದ)ನ ಸೇವಕರು ಮರ್ಯಮರ ಪಾಲಕ ಯಾರಾಗಬೇಕೆಂಬ ಬಗ್ಗೆ ಲೇಖನಿಗಳನ್ನೆಸೆಯುತ್ತಿದ್ದಾಗ[11] ನೀವು ಅಲ್ಲಿ ಉಪಸ್ಥಿತರಿದ್ದಿಲ್ಲ ಮತ್ತು ಅವರೊಳಗೆ ಜಗಳವಾಗುತ್ತಿದ್ದಾಗಲೂ ನೀವು ಅಲ್ಲಿರಲಿಲ್ಲ.

ذٰلِكَ مِنْ اَنْۢبَآءِ الْغَيْبِ نُوْحِيْهِ اِلَيْكَ ؕ وَ
مَا كُنْتَ لَدَيْهِمْ اِذْ يُلْقُوْنَ اَقْلَامَهُمْ
اَيُّهُمْ يَكْفُلُ مَرْيَمَ ۪ وَمَا كُنْتَ
لَدَيْهِمْ اِذْ يَخْتَصِمُوْنَ ﴿۴۴﴾

45. ದೇವಚರರು ಹೀಗೆಂದರು - "ಓ ಮರ್ಯಮ್, ಅಲ್ಲಾಹನು ನಿನಗೆ ತನ್ನ ಒಂದು 'ಫರಮಾನಿನ' (ಆಜ್ಞೆಯ) ಸುವಾರ್ತೆ ನೀಡುತ್ತಾನೆ. ಅವನ ಹೆಸರು ಮರ್ಯಮಳ ಪುತ್ರ ಮಸೀಹ್ ಈಸಾ ಎಂದಿರುವುದು. ಅವನು ಇಹ ಮತ್ತು ಪರಗಳಲ್ಲಿ ಪ್ರತಿಷ್ಠಿತನಾಗುವನು. ಅಲ್ಲಾಹನ ನಿಕಟ ದಾಸರಲ್ಲಿ ಗಣಿಸಲ್ಪಡುವನು.

اِذْ قَالَتِ الْمَلٰٓئِكَةُ يٰمَرْيَمُ اِنَّ اللّٰهَ
يُبَشِّرُكِ بِكَلِمَةٍ مِّنْهُ ۖ اسْمُهُ الْمَسِيْحُ
عِيْسَى ابْنُ مَرْيَمَ وَجِيْهًا فِى الدُّنْيَا
وَ الْاٰخِرَةِ وَ مِنَ الْمُقَرَّبِيْنَ ﴿۴۵﴾

46. ತೊಟ್ಟಿಲಲ್ಲಿಯೂ ಅತಿ ವೃದ್ಧಾಪ್ಯಕ್ಕೆ ತಲುಪಿದಾಗಲೂ ಜನರೊಡನೆ ಮಾತನಾಡುವನು ಮತ್ತು ಅವನೊಬ್ಬ ಸಜ್ಜನನಾಗಿರುವನು."

وَ يُكَلِّمُ النَّاسَ فِى الْمَهْدِ وَكَهْلًا
وَّ مِنَ الصّٰلِحِيْنَ ﴿۴۶﴾

47. ಇದನ್ನು ಕೇಳಿ ಮರ್ಯಮ್ ಹೇಳಿದರು, "ಓ ನನ್ನ ಪ್ರಭೂ, ನನ್ನಲ್ಲಿ ಮಗುವಾಗುವುದೆಲ್ಲಿಂದ? ನನ್ನನ್ನಂತು ಪುರುಷನಾರೂ ಸ್ಪರ್ಶಿಸಿಲ್ಲ." ಉತ್ತರ ಸಿಕ್ಕಿತು, -"ಹಾಗೆಯೇ ಸಂಭವಿಸುವುದು."[12] ಅಲ್ಲಾಹನು ತಾನಿಚ್ಛಿಸಿದುದನ್ನು ಸೃಷ್ಟಿಸುತ್ತಾನೆ. ಅವನು ಯಾವುದಾದರೊಂದು ಕಾರ್ಯವನ್ನು ಮಾಡಲು ನಿರ್ಧರಿಸಿದಾಗ, 'ಆಗು' ಎನ್ನುತ್ತಾನೆ ಮತ್ತು ಅದು ಆಗಿ ಬಿಡುತ್ತದೆ.

قَالَتْ رَبِّ اَنّٰى يَكُوْنُ لِىْ وَلَدٌ وَّلَمْ
يَمْسَسْنِىْ بَشَرٌ ؕ قَالَ كَذٰلِكِ اللّٰهُ يَخْلُقُ
مَا يَشَآءُ ؕ اِذَا قَضٰٓى اَمْرًا فَاِنَّمَا يَقُوْلُ
لَهٗ كُنْ فَيَكُوْنُ ﴿۴۷﴾

48. (ದೇವಚರರು ತಮ್ಮ ಮಾತು ಮುಂದುವರಿಸುತ್ತ ಹೇಳಿದರು)- "ಅಲ್ಲಾಹನು ಅವನಿಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣ ನೀಡುವನು. ತೌರಾತ್ ಮತ್ತು ಇಂಜೀಲಿನ ವಿದ್ಯೆ ಕಲಿಸುವನು.

وَ يُعَلِّمُهُ الْكِتٰبَ وَ الْحِكْمَةَ وَ التَّوْرٰىةَ
وَ الْاِنْجِيْلَ ﴿۴۸﴾

49. ಮತ್ತು ಅವನನ್ನು ಬನೀಇಸ್ರಾಈಲರ ಕಡೆಗೆ ಸಂದೇಶವಾಹಕನನ್ನಾಗಿ ನೇಮಕ ಮಾಡುವನು." (ಅವನು ಸಂದೇಶವಾಹಕನ ನೆಲೆಯಲ್ಲಿ ಬನೀಇಸ್ರಾಈಲರ ಬಳಿಗೆ ಬಂದಾಗ ಹೀಗೆ ಹೇಳಿದನು) "ನಾನು ನಿಮ್ಮ ಪ್ರಭುವಿನ ವತಿಯಿಂದ ನಿಮ್ಮ ಬಳಿಗೆ

وَ رَسُوْلًا اِلٰى بَنِىْٓ اِسْرَآءِيْلَ ۙ۬ اَنِّىْ قَدْ
جِئْتُكُمْ بِاٰيَةٍ مِّنْ رَّبِّكُمْ ۙ اَنِّىْۤ اَخْلُقُ
لَكُمْ مِّنَ الطِّيْنِ كَهَيْـَٔةِ الطَّيْرِ فَاَنْفُخُ فِيْهِ

11. ಅರ್ಥಾತ್- ಅದೃಷ್ಟ ಚೀಟಿಯನ್ನೆಸೆಯುತ್ತಿದ್ದರು.

12. ಅರ್ಥಾತ್- ಯಾವುದೇ ಪುರುಷ ನಿನ್ನನ್ನು ಸ್ಪರ್ಶಿಸಿರದಿದ್ದರೂ ನಿನಗೆ ಮಗು ಜನಿಸುವುದು.

ಕುರುಹುಗಳೊಂದಿಗೆ ಬಂದಿರುತ್ತೇನೆ. ನಾನು ನಿಮ್ಮ ಮುಂದೆ ಪಕ್ಷಿ ರೂಪದ ಆಕೃತಿ ಮಾಡುತ್ತೇನೆ ಮತ್ತು ಅದಕ್ಕೆ ಉಸಿರೂದಿ ಬಿಡುತ್ತೇನೆ. ಅದು ಅಲ್ಲಾಹನ ಅಪ್ಪಣೆಯಿಂದ ಪಕ್ಷಿಯಾಗುತ್ತದೆ. ನಾನು ಅಲ್ಲಾಹನ ಅಪ್ಪಣೆಯಿಂದ ಹುಟ್ಟು ಕುರುಡರನ್ನೂ ಕುಷ್ಠರೋಗಿಗಳನ್ನೂ ಗುಣಪಡಿಸುತ್ತೇನೆ ಮತ್ತು ಅವನ ಅಪ್ಪಣೆಯಿಂದ ಸತ್ತವರನ್ನು ಜೀವಂತಗೊಳಿಸುತ್ತೇನೆ. ನೀವು ಏನು ಉಣ್ಣುತ್ತೀರೆಂಬುದನ್ನೂ ನಿಮ್ಮ ಮನೆಗಳಲ್ಲಿ ಏನೇನನ್ನು ದಾಸ್ತಾನು ಮಾಡಿಡುತ್ತೀರೆಂಬುದನ್ನೂ ಹೇಳುತ್ತೇನೆ. ನೀವು ವಿಶ್ವಾಸವಿರಿಸುವವರಾದರೆ ನಿಮಗೆ ಇದರಲ್ಲಿ ಸಾಕಷ್ಟು ನಿದರ್ಶನವಿದೆ.

فَيَكُونُ طَيْرًا بِإِذْنِ اللّٰهِ ۚ وَأُبْرِئُ الْأَكْمَهَ وَالْأَبْرَصَ وَأُحْيِ الْمَوْتٰى بِإِذْنِ اللّٰهِ ۚ وَأُنَبِّئُكُمْ بِمَا تَأْكُلُونَ وَمَا تَدَّخِرُونَ فِي بُيُوتِكُمْ ۗ إِنَّ فِي ذٰلِكَ لَآيَةً لَّكُمْ إِنْ كُنْتُمْ مُّؤْمِنِينَ ﴿٤٩﴾

50. ನಾನು ತೌರಾತಿನಲ್ಲಿರುವುದರ ಪೈಕಿ ಇದೀಗ ನನ್ನ ಕಾಲದಲ್ಲಿರುವ ಶಿಕ್ಷಣ ಮತ್ತು ಸನ್ಮಾರ್ಗದರ್ಶನವನ್ನು ದೃಢೀಕರಿಸುವವನಾಗಿ ಬಂದಿರುತ್ತೇನೆ ಮತ್ತು ನಿಮಗಾಗಿ ನಿಷಿದ್ಧಗೊಳಿಸಲ್ಪಟ್ಟಿರುವ ಕೆಲವು ವಸ್ತುಗಳನ್ನು ಧರ್ಮಸಮ್ಮತಗೊಳಿಸಲಿಕ್ಕಾಗಿ ನಾನು ಬಂದಿರುತ್ತೇನೆ.[13] ನೋಡಿರಿ, ನಾನು ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕುರುಹನ್ನು ತೆಗೆದುಕೊಂಡು ಬಂದಿರುತ್ತೇನೆ. ಆದುದರಿಂದ ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನ ಅನುಸರಣೆ ಮಾಡಿರಿ.

وَمُصَدِّقًا لِّمَا بَيْنَ يَدَيَّ مِنَ التَّوْرٰىةِ وَلِأُحِلَّ لَكُمْ بَعْضَ الَّذِي حُرِّمَ عَلَيْكُمْ وَجِئْتُكُمْ بِآيَةٍ مِّنْ رَّبِّكُمْ ۗ فَاتَّقُوا اللّٰهَ وَأَطِيعُونِ ﴿٥٠﴾

51. ಅಲ್ಲಾಹನು ನನ್ನ ಪ್ರಭುವೂ ಆಗಿರುತ್ತಾನೆ ನಿಮ್ಮ ಪ್ರಭುವೂ ಆಗಿರುತ್ತಾನೆ. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ. ಇದೇ ನೇರ ಮಾರ್ಗವಾಗಿದೆ.

إِنَّ اللّٰهَ رَبِّي وَرَبُّكُمْ فَاعْبُدُوهُ ۗ هٰذَا صِرَاطٌ مُّسْتَقِيمٌ ﴿٥١﴾

52. ಬನೀಇಸ್ರಾಈಲರು ಅಧರ್ಮ ಹಾಗೂ ಸತ್ಯನಿಷೇಧಕ್ಕೆ ಸನ್ನದ್ಧರಾಗಿರುವುದನ್ನು ಈಸಾರವರು ಮನಗಂಡಾಗ, "ಅಲ್ಲಾಹನ ಮಾರ್ಗದಲ್ಲಿ ನನ್ನ ಸಹಾಯಕರಾಗುವವರು ಯಾರು?" ಎಂದು ಕೇಳಿದರು. ಹವಾರಿಗಳು[14] ಉತ್ತರಕೊಟ್ಟರು - "ನಾವು ಅಲ್ಲಾಹನ ಸಹಾಯಕರಾಗಿದ್ದೇವೆ.[15] ನಾವು ಅಲ್ಲಾಹನ ಮೇಲೆ

فَلَمَّا أَحَسَّ عِيسٰى مِنْهُمُ الْكُفْرَ قَالَ مَنْ أَنْصَارِي إِلَى اللّٰهِ ۗ قَالَ الْحَوَارِيُّونَ نَحْنُ أَنْصَارُ اللّٰهِ ۚ آمَنَّا بِاللّٰهِ ۚ وَاشْهَدْ بِأَنَّا مُسْلِمُونَ ﴿٥٢﴾

13. ಅರ್ಥಾತ್- ನಿಮ್ಮಲ್ಲಿನ ಅಜ್ಞಾನಿಗಳ ಮೂಢನಂಬಿಕೆ, ನಿಮ್ಮ ಕರ್ಮಶಾಸ್ತ್ರಜ್ಞರ ಕಾನೂನಿನ ಕೂದಲು ಸೀಳುವಿಕೆ, ನಿಮ್ಮಲ್ಲಿನ ಸನ್ಯಾಸಪ್ರಿಯರ ಕಾಠಿಣ್ಯ, ಇತ್ಯಾದಿಗಳು. ಅಲ್ಲದೆ ಮುಸ್ಲಿಮೇತರ ಸಮುದಾಯಗಳ ಪ್ರಾಬಲ್ಯದಿಂದಾಗಿ ನಿಮ್ಮಲ್ಲಿ ನೈಜ ಶರೀಅತ್ (ಧರ್ಮಶಾಸ್ತ್ರ)ನಲ್ಲಿ ಸೇರ್ಪಡೆಗೊಂಡಿರುವ ಬಂಧನಗಳನ್ನು ನಾನು ರದ್ದುಪಡಿಸುತ್ತೇನೆ. ಅಲ್ಲಾಹನು ಸಿಂಧುಗೊಳಿಸಿರುವ ಅಥವಾ ನಿಷೇಧಿಸಿರುವವುಗಳನ್ನೇ ನಾನು ನಿಮಗೆ ಸಿಂಧು ಅಥವಾ ನಿಷಿದ್ಧಗೊಳಿಸುತ್ತೇನೆ.

14. ಹವಾರಿ ಎಂಬ ಪದದ ಅರ್ಥವು ನಮ್ಮಲ್ಲಿ ಪ್ರಚಲಿತವಿರುವ ಅನ್ಸಾರ್ (ಸಹಾಯಕರು) ಎಂಬ ಪದದ ಅರ್ಥವೇ ಆಗಿದೆ.

15. ಅರ್ಥಾತ್- ಅಲ್ಲಾಹನ ಮಾರ್ಗದ ಕೆಲಸದಲ್ಲಿ ನಿಮ್ಮ ಸಹಾಯಕರು.

ವಿಶ್ವಾಸವಿಟ್ಟಿದ್ದೇವೆ. ನಾವು ಮುಸ್ಲಿಮ್ (ಅಲ್ಲಾಹನ ಮುಂದೆ ದಾಸ್ಯ-ಅನುಸರಣೆಗಾಗಿ ಶಿರಬಾಗುವವರು) ಎಂಬ ಬಗ್ಗೆ ನೀವು ಸಾಕ್ಷ್ಯ ವಹಿಸಿರಿ.

53. ಓ ನಮ್ಮ ಪ್ರಭೂ, ನೀನು ಅವತೀರ್ಣಗೊಳಿಸಿದ ಆದೇಶವನ್ನು ನಾವು ಒಪ್ಪಿಕೊಂಡೆವು ಮತ್ತು ಸಂದೇಶವಾಹಕರ ಅನುಸರಣೆಯನ್ನೂ ಸ್ವೀಕರಿಸಿದೆವು. ನಮ್ಮ ಹೆಸರುಗಳನ್ನು ಸಾಕ್ಷ್ಯವಹಿಸುವವರಲ್ಲಿ ಬರೆದುಕೋ."

رَبَّنَآ اٰمَنَّا بِمَآ اَنْزَلْتَ وَاتَّبَعْنَا الرَّسُوْلَ فَاكْتُبْنَا مَعَ الشّٰهِدِيْنَ ﴿٥٣﴾

54. ಅದಲ್ಲದೆ ಬನೀಇಸ್ರಾಈಲರು (ಮಸೀಹರ ವಿರುದ್ಧ) ಗೂಢ ತಂತ್ರಗಳನ್ನು ಮಾಡ ತೊಡಗಿದರು. ಅದಕ್ಕೆ ಪ್ರತಿಯಾಗಿ ಅಲ್ಲಾಹನೂ ತನ್ನ ಗೂಢ ತಂತ್ರವನ್ನು ಮಾಡಿದನು ಮತ್ತು ಇಂತಹ ತಂತ್ರಗಳಲ್ಲಿ ಅಲ್ಲಾಹನು ಅತ್ಯುನ್ನತನು.

وَمَكَرُوْا وَمَكَرَ اللّٰهُ ۗ وَاللّٰهُ خَيْرُ الْمٰكِرِيْنَ ﴿٥٤﴾

ع الثلثة

55. (ಅದು ಅಲ್ಲಾಹನ ಗೂಢ ತಂತ್ರವೇ ಆಗಿತ್ತು) ಅಲ್ಲಾಹನು ಹೀಗೆ ಹೇಳಿದನು, "ಓ ಈಸಾ, ನಾನೀಗ ನಿನ್ನನ್ನು ಹಿಂದಕ್ಕೆ ಪಡಕೊಳ್ಳುವೆನು[16] ಮತ್ತು ನಿನ್ನನ್ನು ನನ್ನ ಕಡೆಗೆ ಎತ್ತಿಕೊಳ್ಳುವೆನು ಮತ್ತು ನಿನ್ನನ್ನು ನಿರಾಕರಿಸಿದವರಿಂದ (ಅರ್ಥಾತ್ ಅವರ ಸಂಗಡ ಮತ್ತು ಅವರಿರುವ ಹೊಲಸು ವಾತಾವರಣದಲ್ಲಿ ಅವರೊಂದಿಗೆ ವಾಸಿಸುವುದರಿಂದ) ನಿನ್ನನ್ನು ಪರಿಶುದ್ಧಗೊಳಿಸುವೆನು ಮತ್ತು ಪುನರುತ್ಥಾನದವರೆಗೂ ನಿನ್ನ ಅನುಸರಣೆ ಮಾಡುವವರನ್ನು ನಿನ್ನನ್ನು ನಿಷೇಧಿಸುವವರ ಮೇಲೆ ಶ್ರೇಷ್ಠತೆಯಲ್ಲಿರಿಸುವೆನು. ನಿಮಗೆಲ್ಲರಿಗೂ ಕಟ್ಟಕಡೆಗೆ ನನ್ನ ಬಳಿ ಬರಲಿಕ್ಕಿದೆ. ಆಗ ನಾನು ನಿಮ್ಮ ನಡುವೆ ಭಿನ್ನಾಭಿಪ್ರಾಯವುಂಟಾಗಿದ್ದ ವಿಷಯಗಳ ತೀರ್ಮಾನ ಮಾಡುವೆನು.

اِذْ قَالَ اللّٰهُ يٰعِيْسٰٓى اِنِّىْ مُتَوَفِّيْكَ وَرَافِعُكَ اِلَىَّ وَمُطَهِّرُكَ مِنَ الَّذِيْنَ كَفَرُوْا وَجَاعِلُ الَّذِيْنَ اتَّبَعُوْكَ فَوْقَ الَّذِيْنَ كَفَرُوْٓا اِلٰى يَوْمِ الْقِيٰمَةِ ۚ ثُمَّ اِلَىَّ مَرْجِعُكُمْ فَاَحْكُمُ بَيْنَكُمْ فِيْمَا كُنْتُمْ فِيْهِ تَخْتَلِفُوْنَ ﴿٥٥﴾

56. ಅಧರ್ಮ ಮತ್ತು ನಿಷೇಧ ನೀತಿಯನ್ನನುಸರಿಸುವವರಿಗೆ ಇಹ-ಪರಗಳೆರಡರಲ್ಲೂ ಕಠಿಣ ಶಿಕ್ಷೆ ಕೊಡುವೆನು ಮತ್ತು ಅವರು ಯಾವ ಸಹಾಯಕರನ್ನೂ ಪಡೆಯಲಾರರು.

فَاَمَّا الَّذِيْنَ كَفَرُوْا فَاُعَذِّبُهُمْ عَذَابًا شَدِيْدًا فِى الدُّنْيَا وَالْاٰخِرَةِ ۡ وَمَا لَهُمْ مِّنْ نّٰصِرِيْنَ ﴿٥٦﴾

57. ಸತ್ಯವಿಶ್ವಾಸ ಮತ್ತು ಸತ್ಕರ್ಮಗಳ ನಿಲುಮೆಯನ್ನಿರಿಸಿಕೊಂಡವರಿಗೆ ಅವರ ಪ್ರತಿಫಲಗಳು ಸರ್ವಸಂಪೂರ್ಣವಾಗಿ ಕೊಡಲ್ಪಡುವುವು ಮತ್ತು ಅಲ್ಲಾಹನು ಅಕ್ರಮಿಗಳನ್ನು ಎಂದೆಂದಿಗೂ ಪ್ರೀತಿಸುವುದಿಲ್ಲ (ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ.)

وَاَمَّا الَّذِيْنَ اٰمَنُوْا وَعَمِلُوا الصّٰلِحٰتِ فَيُوَفِّيْهِمْ اُجُوْرَهُمْ ۗ وَاللّٰهُ لَا يُحِبُّ الظّٰلِمِيْنَ ﴿٥٧﴾

16. ಮೂಲದಲ್ಲಿ 'ಮುತವಫ್ಫೀಕ' ಎಂಬ ಪದ ಪ್ರಯೋಗವಾಗಿದೆ. 'ತವಫ್ಫಿ'ಯ ನಿಜಾರ್ಥ ಪಡೆಯುವುದು ಅಥವಾ ಮಾಡುವುದು. ಇದು 'ಪ್ರಾಣ ತೆಗೆಯುವುದು' ಎಂಬ ಅರ್ಥದಲ್ಲಿ ಉಪಯೋಗವಾಗುವುದು ಅದರ ಶಬ್ದಾರ್ಥದಿಂದಲ್ಲ, ಸೂಚ್ಯ ಅರ್ಥದಿಂದಾಗಿದೆ.

58. ಓ ಪೈಗಂಬರರೇ, ಇವು ನಿಮಗೆ ನಾವು ಕೇಳಿಸುತ್ತಿರುವ ನಿದರ್ಶನಗಳು ಹಾಗೂ ಯುಕ್ತಿಪೂರ್ಣ ಉದ್ಬೋಧಗಳು.

ذٰلِكَ نَتْلُوْهُ عَلَيْكَ مِنَ الْاٰيٰتِ وَالذِّكْرِ الْحَكِيْمِ ﴿٥٨﴾

59. ಅಲ್ಲಾಹನ ಬಳಿ 'ಈಸಾ'ರ ಉಪಮೆಯು ಆದಮರಂತಿದೆ. ಅಲ್ಲಾಹನು ಅವರನ್ನು (ಆದಮರನ್ನು) ಮಣ್ಣಿನಿಂದ ಸೃಷ್ಟಿಸಿ, 'ಆಗು' ಎಂದು ಆಜ್ಞೆ ಕೊಟ್ಟನು. ಆಗ ಅವರು ಉಂಟಾದರು.[17]

اِنَّ مَثَلَ عِيْسٰى عِنْدَ اللّٰهِ كَمَثَلِ اٰدَمَ ؕ خَلَقَهٗ مِنْ تُرَابٍ ثُمَّ قَالَ لَهٗ كُنْ فَيَكُوْنُ ﴿٥٩﴾

60. ಇದು ನಿಮ್ಮ ಪ್ರಭುವಿನ ವತಿಯಿಂದ ತಿಳಿಯಪಡಿಸಲಾಗುವ ಸತ್ಯ ವಿಷಯ ಮತ್ತು ನೀವು ಇದರಲ್ಲಿ ಸಂದೇಹ ತಾಳುವವರಲ್ಲಾಗಬೇಡಿರಿ.

اَلْحَقُّ مِنْ رَّبِّكَ فَلَا تَكُنْ مِّنَ الْمُمْتَرِيْنَ ﴿٦٠﴾

61. ಈ (ದಿವ್ಯ)ಜ್ಞಾನ ಬಂದ ಬಳಿಕ ಈ ವಿಷಯದಲ್ಲಿ ಇನ್ನಾರಾದರೂ ನಿಮ್ಮೊಡನೆ ಜಗಳವಾಡಿದರೆ, ಓ ಪೈಗಂಬರರೇ, ಅವರೊಡನೆ ಹೀಗೆ ಹೇಳಿರಿ, -"ಬನ್ನಿರಿ, ನಾವೂ ನೀವೂ ಬಂದು ಸೇರೋಣ ಮತ್ತು ನಮ್ಮ ಮಕ್ಕಳು ಮರಿಗಳನ್ನೂ ಕರೆತರೋಣ ಮತ್ತು ಸುಳ್ಳುಗಾರನ ಮೇಲೆ ಅಲ್ಲಾಹನ ಅಭಿಶಪನವಿರಲೆಂದು ಪ್ರಾರ್ಥಿಸೋಣ.

فَمَنْ حَآجَّكَ فِيْهِ مِنْ بَعْدِ مَا جَآءَكَ مِنَ الْعِلْمِ فَقُلْ تَعَالَوْا نَدْعُ اَبْنَآءَنَا وَاَبْنَآءَكُمْ وَنِسَآءَنَا وَنِسَآءَكُمْ وَاَنْفُسَنَا وَاَنْفُسَكُمْ ۟ ثُمَّ نَبْتَهِلْ فَنَجْعَلْ لَّعْنَتَ اللّٰهِ عَلَى الْكٰذِبِيْنَ ﴿٦١﴾

62. ಇವು ಅತ್ಯಂತ ವಾಸ್ತವಿಕ ಘಟನೆಗಳು ಮತ್ತು ವಾಸ್ತವದಲ್ಲಿ ಅಲ್ಲಾಹನ ಹೊರತು ಅನ್ಯ ಆರಾಧ್ಯನಾರೂ ಇಲ್ಲ. ನಿಸ್ಸಂದೇಹವಾಗಿ ಅಲ್ಲಾಹನ ಶಕ್ತಿಯೇ ಅತ್ಯುನ್ನತವಾಗಿದ್ದು, ಅವನ ಯುಕ್ತಿಯೇ ಸಂಪೂರ್ಣ ವಿಶ್ವವ್ಯವಸ್ಥೆಯಲ್ಲಿ ಸಕ್ರಿಯವಾಗಿದೆ.

اِنَّ هٰذَا لَهُوَ الْقَصَصُ الْحَقُّ ۚ وَمَا مِنْ اِلٰهٍ اِلَّا اللّٰهُ ؕ وَاِنَّ اللّٰهَ لَهُوَ الْعَزِيْزُ الْحَكِيْمُ ﴿٦٢﴾

63. ಆದುದರಿಂದ ಅವರು (ಈ ಶರತ್ತಿನಲ್ಲಿ ಸ್ಪರ್ಧೆಗೆ ಮುಂದೆ ಬರಲು) ನಿರಾಕರಿಸಿದರೆ (ಅವರು ಕಿಡಿಗೇಡಿಗಳೆಂಬ ವಿಷಯ ಸ್ಪಷ್ಟವಾಗುವುದು) ಮತ್ತು ಅಲ್ಲಾಹನಂತೂ ಕಿಡಿಗೇಡಿಗಳ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತಿರುವವನೇ ಆಗಿರುತ್ತಾನೆ.

فَاِنْ تَوَلَّوْا فَاِنَّ اللّٰهَ عَلِيْمٌۢ بِالْمُفْسِدِيْنَ ﴿٦٣﴾ ع ٦ ١٤

64. ಓ ಪೈಗಂಬರರೇ, ಹೇಳಿರಿ- "ಓ ಗ್ರಂಥದವರೇ, ನಿಮ್ಮ ಮತ್ತು ನಮ್ಮೊಳಗೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ.

قُلْ يٰۤاَهْلَ الْكِتٰبِ تَعَالَوْا اِلٰى كَلِمَةٍ سَوَآءٍۢ بَيْنَنَا وَبَيْنَكُمْ اَلَّا نَعْبُدَ اِلَّا اللّٰهَ وَلَا نُشْرِكَ

17. ಅರ್ಥಾತ್- ತಂದೆಯಿಲ್ಲದೆ ಹುಟ್ಟುವುದೇ ಓರ್ವನನ್ನು ದೇವ ಅಥವಾ ದೇವಪುತ್ರನೆನ್ನಲು ಸಾಕಷ್ಟು ಪುರಾವೆಯಾಗಿದ್ದರೆ ಕ್ರೈಸ್ತರು ಹ. ಆದಮ್‌ರ(ಅ) ಕುರಿತು ಅದಕ್ಕಿಂತ ಉನ್ನತವಾದ ವಿಶ್ವಾಸವನ್ನು ಪ್ರತಿಪಾದಿಸಬೇಕಾಗಿತ್ತು. ಏಕೆಂದರೆ ಮಸೀಹ್(ಅ) ತಂದೆಯಿಲ್ಲದೆ ಹುಟ್ಟಿದ್ದರು ನಿಜ. ಆದರೆ ಆದಮ್(ಅ) ತಂದೆ-ತಾಯಿಗಳಿಬ್ಬರೂ ಇಲ್ಲದೆ ಹುಟ್ಟಿದ್ದರು.

ಅದೆಂದರೆ - ನಾವು ಅಲ್ಲಾಹನ ಹೊರತು ಇತರ ಯಾರ ದಾಸ್ಯ-ಆರಾಧನೆಯನ್ನೂ ಮಾಡದಿರೋಣ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ ಪ್ರಭುವಾಗಿರಿಸದಿರೋಣ." ಈ ಕರೆಯನ್ನು ಸ್ವೀಕರಿಸಲು ಅವರು ಹಿಂಜರಿದರೆ, ನಾವಂತು ಮುಸ್ಲಿಮರು (ಕೇವಲ ಅಲ್ಲಾಹನ ದಾಸ್ಯ-ಆರಾಧನೆ ಮತ್ತು ದಾಸ್ಯ-ಅನುಸರಣೆ ಮಾಡುವವರು) ಎಂದು ಸ್ಪಷ್ಟವಾಗಿ ಹೇಳಿಬಿಡಿರಿ.

بِهٖ شَيْـًٔا وَّلَا يَتَّخِذَ بَعْضُنَا بَعْضًا اَرْبَابًا
مِّنْ دُوْنِ اللّٰهِ ؕ فَاِنْ تَوَلَّوْا فَقُوْلُوا اشْهَدُوْا
بِاَنَّا مُسْلِمُوْنَ ﴿۶۴﴾

65. ಓ ಗ್ರಂಥದವರೇ, ನೀವು ಇಬ್‌ರಾಹೀಮರ ವಿಷಯದಲ್ಲಿ ನಮ್ಮೊಂದಿಗೆ ಏಕೆ ಜಗಳಾಡುತ್ತೀರಿ? 'ತೌರಾತ್' ಮತ್ತು 'ಇಂಜೀಲ್' ಇಬ್‌ರಾಹೀಮರ ಅನಂತರವೇ ಅವತೀರ್ಣಗೊಂಡಿವೆಯಷ್ಟೆ. ಇನ್ನೇನು ನಿಮಗೆ ಇಷ್ಟೂ ತಿಳಿಯುವುದಿಲ್ಲವೇ?

يٰۤاَهْلَ الْكِتٰبِ لِمَ تُحَآجُّوْنَ فِيْۤ اِبْرٰهِيْمَ
وَمَاۤ اُنْزِلَتِ التَّوْرٰىةُ وَالْاِنْجِيْلُ اِلَّا مِنْۢ
بَعْدِهٖ ؕ اَفَلَا تَعْقِلُوْنَ ﴿۶۵﴾

66. ನೀವು ನಿಮಗೆ ತಿಳಿದಿರುವ ವಿಷಯದಲ್ಲಿ ಸಾಕಷ್ಟು ವಾದಗಳನ್ನು ಮಾಡಿಯಾಯಿತು. ಈಗ ನಿಮಗೆ ತಿಳಿದಿಲ್ಲದ ವಿಷಯಗಳಲ್ಲಿ ಏಕೆ ವಾದಿಸುತ್ತಿರುವಿರಿ? ಅಲ್ಲಾಹನು ತಿಳಿದಿರುವನು; ನೀವು ತಿಳಿದಿರುವುದಿಲ್ಲ.

هٰۤاَنْتُمْ هٰۤؤُلَآءِ حَاجَجْتُمْ فِيْمَا لَكُمْ بِهٖ عِلْمٌ
فَلِمَ تُحَآجُّوْنَ فِيْمَا لَيْسَ لَكُمْ بِهٖ عِلْمٌ ؕ
وَاللّٰهُ يَعْلَمُ وَاَنْتُمْ لَا تَعْلَمُوْنَ ﴿۶۶﴾

67. ಇಬ್‌ರಾಹೀಮರು ಯಹೂದಿಯೋ ಕ್ರೈಸ್ತರೋ ಆಗಿರಲಿಲ್ಲ; ಅವರು ಓರ್ವ ಏಕನಿಷ್ಠ ಮುಸ್ಲಿಮರಾಗಿದ್ದರು[18] - ಮತ್ತು ಅವರು ಬಹುದೇವವಿಶ್ವಾಸಿಗಳಂತು ಆಗಿರಲೇ ಇಲ್ಲ.

مَا كَانَ اِبْرٰهِيْمُ يَهُوْدِيًّا وَّلَا نَصْرَانِيًّا وَّ
لٰكِنْ كَانَ حَنِيْفًا مُّسْلِمًا ؕ وَمَا كَانَ
مِنَ الْمُشْرِكِيْنَ ﴿۶۷﴾

68. ಇಬ್‌ರಾಹೀಮರೊಂದಿಗೆ ಸಂಬಂಧವಿರಿಸಿಕೊಳ್ಳಲು ಎಲ್ಲರಿಗಿಂತಲೂ ಅಧಿಕ ಹಕ್ಕು ಸಲ್ಲುವುದಿದ್ದರೆ ಅದು ಅವರನ್ನು ಅನುಸರಿಸಿದವರಿಗೆ ಮತ್ತು ಈಗ ಈ ಪ್ರವಾದಿ ಹಾಗೂ ಇವರನ್ನು ಮಾನ್ಯ ಮಾಡುವವರು ಈ ವಿಷಯದಲ್ಲಿ ಅಧಿಕ ಹಕ್ಕುದಾರರು. ಅಲ್ಲಾಹನು ಸತ್ಯದ ಮೇಲೆ ವಿಶ್ವಾಸವಿಟ್ಟವರಿಗೆ ಮಾತ್ರ ಸಹಾಯಕನಾಗಿರುತ್ತಾನೆ.

اِنَّ اَوْلَى النَّاسِ بِاِبْرٰهِيْمَ لَلَّذِيْنَ اتَّبَعُوْهُ
وَهٰذَا النَّبِىُّ وَالَّذِيْنَ اٰمَنُوْا ؕ وَاللّٰهُ
وَلِىُّ الْمُؤْمِنِيْنَ ﴿۶۸﴾

69. (ಓ ಸತ್ಯವಿಶ್ವಾಸಿಗಳೇ) ಗ್ರಂಥದವರ ಪೈಕಿ ಒಂದು ಪಂಗಡವು ನಿಮ್ಮನ್ನು ಯಾವ ವಿಧದಿಂದಲಾದರೂ ಸನ್ಮಾರ್ಗದಿಂದ ತಪ್ಪಿಸಿಬಿಡಬೇಕೆಂದು ಪ್ರಯತ್ನಿಸುತ್ತಿದೆ. ವಾಸ್ತವದಲ್ಲಿ ಅವರು

وَدَّتْ طَّآئِفَةٌ مِّنْ اَهْلِ الْكِتٰبِ لَوْ
يُضِلُّوْنَكُمْ ؕ وَمَا يُضِلُّوْنَ اِلَّاۤ اَنْفُسَهُمْ

18. ಮೂಲದಲ್ಲಿ 'ಹನೀಫ್' ಎಂಬ ಪದ ಪ್ರಯೋಗವಾಗಿದೆ. ಅದರ ಅರ್ಥ ಎಲ್ಲದರಿಂದಲೂ ವಿಮುಖನಾಗಿ ನಿರ್ದಿಷ್ಟ ಹಾದಿಯಲ್ಲಿ ನಡೆಯುವವನು ಎಂದಾಗಿದೆ. ಏಕನಿಷ್ಠ ಮುಸ್ಲಿಮ್ ಎಂಬ ಪದವನ್ನು ನಾವು ಈ ಅರ್ಥದಲ್ಲೇ ಉಪಯೋಗಿಸಿದ್ದೇವೆ.

وَمَا يَشْعُرُونَ ٦٩

ತಮ್ಮನ್ನೇ ವಿನಾ ಇತರ ಯಾರನ್ನೂ ಪಥಭ್ರಷ್ಟತೆಯಲ್ಲಿ ಹಾಕುತ್ತಿಲ್ಲ. ಆದರೆ ಅವರಿಗೆ ಇದರ ಪ್ರಜ್ಞೆ ಇರುವುದಿಲ್ಲ.

يَا أَهْلَ الْكِتَابِ لِمَ تَكْفُرُونَ بِآيَاتِ
اللَّهِ وَأَنْتُمْ تَشْهَدُونَ ٧٠

70. ಓ ಗ್ರಂಥದವರೇ, ನೀವು ಅಲ್ಲಾಹನ ನಿದರ್ಶನಗಳನ್ನೇಕೆ ನಿರಾಕರಿಸುತ್ತೀರಿ? ವಸ್ತುತಃ ನೀವು ಅದನ್ನು ಪ್ರತ್ಯಕ್ಷ ಕಾಣುತ್ತಿರುವಿರಿ.[19]

يَا أَهْلَ الْكِتَابِ لِمَ تَلْبِسُونَ الْحَقَّ بِالْبَاطِلِ
وَتَكْتُمُونَ الْحَقَّ وَأَنْتُمْ تَعْلَمُونَ ٧١

71. ಓ ಗ್ರಂಥದವರೇ, ಸತ್ಯಕ್ಕೆ ಮಿಥ್ಯದ ಬಣ್ಣ ಬಳಿದು ಅದನ್ನು ಏಕೆ ಸಂಶಯಾಸ್ಪದವನ್ನಾಗಿ ಮಾಡುತ್ತೀರಿ? ತಿಳಿದೂ ತಿಳಿದೂ ಸತ್ಯವನ್ನೇಕೆ ಮರೆಮಾಚುತ್ತೀರಿ?

وَقَالَتْ طَائِفَةٌ مِنْ أَهْلِ الْكِتَابِ آمِنُوا
بِالَّذِي أُنْزِلَ عَلَى الَّذِينَ آمَنُوا وَجْهَ
النَّهَارِ وَاكْفُرُوا آخِرَهُ لَعَلَّهُمْ يَرْجِعُونَ ٧٢

72. ಗ್ರಂಥದವರ ಪೈಕಿ ಒಂದು ಪಂಗಡವು, "ಈ ಪ್ರವಾದಿಯನ್ನು ಸ್ವೀಕರಿಸುವವರಿಗೆ ಅವತೀರ್ಣಗೊಂಡುದರ ಮೇಲೆ ಬೆಳಿಗ್ಗೆ ವಿಶ್ವಾಸವಿಡಿರಿ ಮತ್ತು ಸಂಜೆ ಅದನ್ನು ನಿಷೇಧಿಸಿರಿ. ಪ್ರಾಯಶಃ ಈ ಉಪಾಯದಿಂದ ಇವರು ತಮ್ಮ ವಿಶ್ವಾಸದಿಂದ ದೂರ ಸರಿಯಬಹುದು" ಎನ್ನುತ್ತಾರೆ.

وَلَا تُؤْمِنُوا إِلَّا لِمَنْ تَبِعَ دِينَكُمْ قُلْ إِنَّ
الْهُدَىٰ هُدَى اللَّهِ أَنْ يُؤْتَىٰ أَحَدٌ مِثْلَ
مَا أُوتِيتُمْ أَوْ يُحَاجُّوكُمْ عِنْدَ رَبِّكُمْ قُلْ
إِنَّ الْفَضْلَ بِيَدِ اللَّهِ يُؤْتِيهِ مَنْ يَشَاءُ
وَاللَّهُ وَاسِعٌ عَلِيمٌ ٧٣

73. ನಿಮ್ಮ ಮತದವರ ಹೊರತು ಇತರ ಯಾರ ಮಾತನ್ನೂ ಒಪ್ಪಿಕೊಳ್ಳಬೇಡಿರೆಂದೂ ಇವರು ಪರಸ್ಪರ ಹೇಳಿಕೊಳ್ಳುತ್ತಾರೆ. ಓ ಪೈಗಂಬರರೇ, ಇವರೊಡನೆ ಹೀಗೆ ಹೇಳಿಬಿಡಿರಿ- "ನಿಜವಾದ ಮಾರ್ಗದರ್ಶನವಂತು ಅಲ್ಲಾಹನ ಮಾರ್ಗದರ್ಶನವಾಗಿದೆ ಮತ್ತು ಒಂದು ಕಾಲದಲ್ಲಿ ನಿಮಗೆ ಕೊಡಲ್ಪಟ್ಟದ್ದನ್ನೇ ಇತರರಿಗೂ ಕೊಡುವುದು ಅಥವಾ ಇತರರಿಗೆ ನಿಮ್ಮ ವಿರುದ್ಧ ನಿಮ್ಮ ಪ್ರಭುವಿನ ಆಸ್ಥಾನದಲ್ಲಿ ಮುಂದಿರಿಸಲು ಬಲವಾದ ಆಧಾರ ಪ್ರಮಾಣ ವೊದಗುವುದು ಅವನದೇ ಕೊಡುಗೆಯಾಗಿದೆ." ಓ ಪೈಗಂಬರರೇ, ಅವರೊಡನೆ ಹೀಗೆ ಹೇಳಿರಿ- "ಭಾಗ್ಯ, ಅನುಗ್ರಹವೆಲ್ಲ ಅಲ್ಲಾಹನ ಅಧಿಕಾರದಲ್ಲಿದೆ. ಅವನು ಅದನ್ನು ತಾನಿಚ್ಛಿಸಿದವರಿಗೆ ದಯ ಪಾಲಿಸುವನು. ಅವನು ವಿಶಾಲ ದೃಷ್ಟಿಯುಳ್ಳವನೂ[20] ಸರ್ವಜ್ಞನೂ ಆಗಿರುತ್ತಾನೆ.

19. ಇದರ ಇನ್ನೊಂದು ಭಾಷಾಂತರ 'ನೀವು ಸ್ವತಃ ಸಾಕ್ಷ್ಯ ನೀಡುತ್ತಿದ್ದೀರಿ' ಎಂದೂ ಆಗಬಹುದು. ಎರಡು ಸಂದರ್ಭಗಳಲ್ಲೂ ಮೂಲ ವಿಷಯಕ್ಕೇನೂ ಧಕ್ಕೆಯಾಗುವುದಿಲ್ಲ. ಪ್ರವಾದಿವರ್ಯರ(ಸ) ಪಾವನ ಜೀವನ, ಅವರ ಅನುಯಾಯಿಗಳ ಜೀವನದಲ್ಲಿ ಅವರ ಬೋಧನೆಗಳಿಂದ ಉಂಟಾಗಿದ್ದ ಆಶ್ಚರ್ಯಕರ ಪರಿಣಾಮಗಳು, ಕುರ್‌ಆನಿನಲ್ಲಿ ಪ್ರಸ್ತುತಪಡಿಸಲಾಗಿರುವ ಉನ್ನತ ವಿಷಯಗಳು ಮುಂತಾದ ಎಲ್ಲವೂ ಅಲ್ಲಾಹನ ಸ್ಪಷ್ಟ ನಿದರ್ಶನಗಳಾಗಿದ್ದವು. ಪ್ರವಾದಿಗಳ ಇತಿಹಾಸ ಮತ್ತು ದೇವಗ್ರಂಥದ ಶೈಲಿಯನ್ನು ಬಲ್ಲವರಿಗೆ ಮುಹಮ್ಮದ್(ಸ) ಅವರ ಪ್ರವಾದಿತ್ವದ ಬಗ್ಗೆ ಸಂಶಯ ತಾಳುವುದು ಅತ್ಯಂತ ಪ್ರಯಾಸಕರವಾಗಿತ್ತು.

20. ಮೂಲದಲ್ಲಿ 'ವಾಸಿಅ್' ಎಂಬ ಪದ ಪ್ರಯೋಗವಾಗಿದೆ. ಕುರ್‌ಆನಿನಲ್ಲಿ ಸಾಮಾನ್ಯವಾಗಿ ಮೂರು ಸಂದರ್ಭದಲ್ಲಿ ಇಂತಹ ಪದ

74. ಅವನು ತನಗಿಷ್ಟ ಬಂದವರನ್ನು ತನ್ನ ಕೃಪೆಗಾಗಿ ಕಾದಿರಿಸುತ್ತಾನೆ ಮತ್ತು ಅವನ ಅನುಗ್ರಹ ಅತಿ ಉನ್ನತವಾಗಿದೆ."

يَّخْتَصُّ بِرَحْمَتِهٖ مَنْ يَّشَآءُ ؕ وَ اللّٰهُ
ذُو الْفَضْلِ الْعَظِيْمِ ﴿٧٤﴾

75. ಗ್ರಂಥದವರಲ್ಲಿ ಕೆಲವರ ಮೇಲೆ ನೀವು ಭರವಸೆಯಿಟ್ಟು ಸಂಪತ್ತಿನ ಒಂದು ರಾಶಿಯನ್ನೇ ಅವರಿಗೆ ವಹಿಸಿಕೊಟ್ಟರೂ ಅವರು ನಿಮ್ಮ ಸೊತ್ತನ್ನು ನಿಮಗೆ ಹಿಂದಿರುಗಿಸುವರು ಮತ್ತು ಅವರಲ್ಲಿ ಕೆಲವರು ಒಂದು ದೀನಾರ(ಚಿನ್ನದ ಒಂದು ನಾಣ್ಯ)ದ ಬಗ್ಗೆ ಅವರ ಮೇಲೆ ಭರವಸೆ ಇಟ್ಟರೂ ನೀವು ಅವರ ಮೇಲೆ ಏರಿ ಹೋಗದೆ ಅದನ್ನು ಅವರು ಹಿಂದಿರುಗಿಸಲಾರರು. ಅವರ ಈ ನೈತಿಕ ಸ್ಥಿತಿಗೆ ಕಾರಣವು, "ಯಹೂದಿಯೇತರರ ವಿಷಯದಲ್ಲಿ ನಮ್ಮೊಡನೆ ಯಾವ ವಿಚಾರಣೆಯೂ ಇಲ್ಲ" ಎಂದು ಅವರು ಹೇಳುತ್ತಿರುವುದೇ ಆಗಿದೆ ಮತ್ತು ಅವರು ಈ ಮಾತನ್ನು ಕೇವಲ ಸುಳ್ಳು ಸೃಷ್ಟಿಸಿ ಮಾಡಿ ಅಲ್ಲಾಹನ ಮೇಲೆ ಹೊರಿಸುತ್ತಿದ್ದಾರೆ.

وَ مِنْ اَهْلِ الْكِتٰبِ مَنْ اِنْ تَاْمَنْهُ
بِقِنْطَارٍ يُّؤَدِّهٖۤ اِلَيْكَ ۚ وَ مِنْهُمْ مَّنْ اِنْ
تَاْمَنْهُ بِدِيْنَارٍ لَّا يُؤَدِّهٖۤ اِلَيْكَ اِلَّا مَا
دُمْتَ عَلَيْهِ قَآئِمًا ؕ ذٰلِكَ بِاَنَّهُمْ قَالُوْا
لَيْسَ عَلَيْنَا فِى الْاُمِّيّٖنَ سَبِيْلٌ ۚ وَ يَقُوْلُوْنَ
عَلَى اللّٰهِ الْكَذِبَ وَ هُمْ يَعْلَمُوْنَ ﴿٧٥﴾

76. ವಸ್ತುತಃ (ಅಲ್ಲಾಹನು ಇಂತಹ ಮಾತು ಹೇಳಿಯೇ ಇಲ್ಲವೆಂದು) ಅವರಿಗೆ ತಿಳಿದಿದೆ. ಅವರೊಡನೆ ವಿಚಾರಣೆ ಯಾಕಾಗದು? ಯಾರೇ ಆಗಿರಲಿ, ತನ್ನ ವಾಗ್ದಾನವನ್ನು ಪೂರೈಸಿದವನು ಮತ್ತು ದೋಷದಿಂದ ದೂರವಿರುವವನು ಅಲ್ಲಾಹನ ಪ್ರೀತಿಗೆ ಪಾತ್ರನಾಗುವನು. ಏಕೆಂದರೆ, ಧರ್ಮನಿಷ್ಠರು ಅಲ್ಲಾಹನಿಗೆ ಪ್ರಿಯರು.

بَلٰى مَنْ اَوْفٰى بِعَهْدِهٖ وَ اتَّقٰى فَاِنَّ اللّٰهَ
يُحِبُّ الْمُتَّقِيْنَ ﴿٧٦﴾

77. ಅಲ್ಲಾಹನ ಕರಾರನ್ನೂ ತಮ್ಮ ಪ್ರತಿಜ್ಞೆಗಳನ್ನೂ ಅಲ್ಪ ಬೆಲೆಗೆ ಮಾರಿದವರಿಗೆ ಪರಲೋಕದಲ್ಲಿ ಏನೂ ಪಾಲಿರುವುದಿಲ್ಲ. ಅಲ್ಲಾಹನು ಪುನರುತ್ಥಾನ ದಿನ ಅವರೊಡನೆ ಮಾತಾಡಲಿಕ್ಕೂ ಇಲ್ಲ; ಅವರ ಕಡೆ ನೋಡಲಿಕ್ಕೂ ಇಲ್ಲ ಮತ್ತು ಅವರನ್ನು ಶುದ್ಧೀಕರಿಸಲಿಕ್ಕೂ ಇಲ್ಲ. ಅವರಿಗೆ ಕಠಿಣ ವೇದನಾಯುಕ್ತ ಯಾತನೆಯಿದೆ.

اِنَّ الَّذِيْنَ يَشْتَرُوْنَ بِعَهْدِ اللّٰهِ وَ اَيْمَانِهِمْ
ثَمَنًا قَلِيْلًا اُولٰٓئِكَ لَا خَلَاقَ لَهُمْ فِى
الْاٰخِرَةِ وَ لَا يُكَلِّمُهُمُ اللّٰهُ وَ لَا يَنْظُرُ اِلَيْهِمْ
يَوْمَ الْقِيٰمَةِ وَ لَا يُزَكِّيْهِمْ ۪ وَ لَهُمْ عَذَابٌ اَلِيْمٌ ﴿٧٧﴾

78. ಅವರಲ್ಲಿ ಕೆಲವರು ಗ್ರಂಥವನ್ನೋದುವಾಗ ನಾಲಗೆಯನ್ನು ತಿರುವು

وَ اِنَّ مِنْهُمْ لَفَرِيْقًا يَّلْوٗنَ اَلْسِنَتَهُمْ بِالْكِتٰبِ

ಪ್ರಯೋಗವಾಗುತ್ತದೆ. ಮೊದಲನೆಯ ಸಂದರ್ಭ ಯಾವುದೆಂದರೆ, ಯಾವುದೇ ಮಾನವ ಸಮೂಹದ ಸಂಕುಚಿತ ದೃಷ್ಟಿಕೋನದ ಪ್ರಸ್ತಾಪ ಬಂದಾಗ, ಅಲ್ಲಾಹನು ನಿಮ್ಮಂತೆ ಸಂಕುಚಿತ ದೃಷ್ಟಿಯುಳ್ಳವನಲ್ಲ ಎಂಬ ವಾಸ್ತವಿಕತೆಯ ಬಗ್ಗೆ ಎಚ್ಚರಿಕೆ ಕೊಡುವ ಅಗತ್ಯ ತಲೆದೋರುವುದು. ಇನ್ನೊಂದು ಸಂದರ್ಭ ಯಾವುದೆಂದರೆ, ಯಾರದಾದರೂ ಜಿಪುಣತೆ, ಸಂಕುಚಿತತೆ ಅಥವಾ ನಿರುತ್ಸಾಹವನ್ನು ಖಂಡಿಸುತ್ತಾ ಅಲ್ಲಾಹನು ಮಹಾ ಉದಾರಿ, ನಿಮ್ಮಂತೆ ಜಿಪುಣನಲ್ಲ ಎಂದು ಹೇಳುವ ಅಗತ್ಯ ತಲೆದೋರುವುದು. ಮೂರನೆಯದಾಗಿ ಜನರು ತಮ್ಮ ಸಂಕುಚಿತ ಭಾವನೆಯಿಂದಾಗಿ ಅಲ್ಲಾಹನ ಬಗ್ಗೆಯೂ ಸೀಮಿತತೆಯನ್ನು ಕಲ್ಪಿಸಿದಾಗ ಅಲ್ಲಾಹನು ನಿಸ್ಸೀಮನಾಗಿದ್ದಾನೆಂದು ಅವರಿಗೆ ತಿಳಿ ಹೇಳುವುದಾಗಿದೆ.

لِتَحْسَبُوهُ مِنَ الْكِتٰبِ وَمَا هُوَ مِنَ الْكِتٰبِ ۚ
وَيَقُولُونَ هُوَ مِنْ عِنْدِ اللّٰهِ وَمَا هُوَ
مِنْ عِنْدِ اللّٰهِ ۚ وَيَقُولُونَ عَلَى اللّٰهِ
الْكَذِبَ وَهُمْ يَعْلَمُونَ ﴿٧٨﴾

ಮುರುವುಗೊಳಿಸುತ್ತಾರೆ. ಅವರು ಗ್ರಂಥದ ವಿಷಯವನ್ನು ಓದುತ್ತಿರುವರೆಂದೇ ನೀವು ತಿಳಿದುಕೊಳ್ಳುತ್ತೀರಿ. ವಸ್ತುತಃ ಅದು ಗ್ರಂಥದ ವಿಷಯವಾಗಿರುವುದಿಲ್ಲ. ನಾವು ಓದುತ್ತಿರುವುದೆಲ್ಲ ಅಲ್ಲಾಹನ ಕಡೆಯಿಂದಾಗಿದೆ ಎಂದು ಅವರು ಹೇಳುತ್ತಾರೆ. ವಸ್ತುತಃ ಅದು ಅಲ್ಲಾಹನ ಕಡೆಯಿಂದಾಗಿರುವುದಿಲ್ಲ. ಅವರು ಬೇಕು ಬೇಕೆಂದೇ ಸುಳ್ಳು ಮಾತನ್ನು ಅಲ್ಲಾಹನ ಮೇಲೆ ಹೊರಿಸಿಬಿಡುತ್ತಾರೆ.

مَا كَانَ لِبَشَرٍ أَنْ يُؤْتِيَهُ اللّٰهُ الْكِتٰبَ
وَالْحُكْمَ وَالنُّبُوَّةَ ثُمَّ يَقُولَ لِلنَّاسِ
كُونُوا عِبَادًا لِّي مِنْ دُونِ اللّٰهِ وَلٰكِنْ
كُونُوا رَبّٰنِيّٖنَ بِمَا كُنْتُمْ تُعَلِّمُونَ الْكِتٰبَ
وَبِمَا كُنْتُمْ تَدْرُسُونَ ﴿٧٩﴾

79. ಅಲ್ಲಾಹನು ತನಗೆ ಗ್ರಂಥವನ್ನೂ ನಿರ್ದೇಶವನ್ನೂ ಪ್ರವಾದಿತ್ವವನ್ನೂ ದಯಪಾಲಿಸಿರುವಾಗ ಅವನು ಜನರೊಡನೆ, ನೀವು ಅಲ್ಲಾಹನ ಬದಲಿಗೆ ನನ್ನ ದಾಸರಾಗಿರಿ ಎನ್ನುವುದು ಯಾವನೇ ಮಾನವನ ಕೆಲಸವಲ್ಲ. ಅವನಂತು, ನೀವು ಓದುತ್ತಿರುವ ಮತ್ತು ಓದಿಸುತ್ತಿರುವ ಗ್ರಂಥದ ಬೋಧನೆಯ ಬೇಡಿಕೆಯ ಪ್ರಕಾರ ಅಪ್ಪಟ ದೇವಭಕ್ತ ಆಗಿರೆಂದೇ ಹೇಳುವನು.

وَلَا يَأْمُرَكُمْ أَنْ تَتَّخِذُوا الْمَلٰٓئِكَةَ وَ
النَّبِيّٖنَ أَرْبَابًا ۗ أَيَأْمُرُكُمْ بِالْكُفْرِ
بَعْدَ إِذْ أَنْتُمْ مُّسْلِمُونَ ﴿٨٠﴾ ٨ ع ٩ ١٦

80. ನೀವು ದೇವಚರರನ್ನು ಅಥವಾ ದೇವ ಸಂದೇಶವಾಹಕರನ್ನು ನಿಮ್ಮ ಪ್ರಭುಗಳನ್ನಾಗಿ ಮಾಡಿಕೊಳ್ಳಿರೆಂದು ಅವನೆಂದೂ ಹೇಳಲಾರ. ನೀವು ಓರ್ವ ಮುಸ್ಲಿಮ್ ಆಗಿರುವಾಗ ಓರ್ವ ಪ್ರವಾದಿಯು ನಿಮಗೆ ಅಧರ್ಮದ ಆದೇಶ ಕೊಡುವುದು ಸಾಧ್ಯವೇ?

وَإِذْ أَخَذَ اللّٰهُ مِيثَاقَ النَّبِيّٖنَ لَمَآ
اٰتَيْتُكُمْ مِّنْ كِتٰبٍ وَّحِكْمَةٍ ثُمَّ جَآءَكُمْ
رَسُولٌ مُّصَدِّقٌ لِّمَا مَعَكُمْ لَتُؤْمِنُنَّ بِهٖ
وَلَتَنْصُرُنَّهٗ ۗ قَالَ ءَأَقْرَرْتُمْ وَأَخَذْتُمْ
عَلٰى ذٰلِكُمْ إِصْرِي ۗ قَالُوٓا أَقْرَرْنَا ۗ قَالَ

81. ಅಲ್ಲಾಹನು ಪ್ರವಾದಿಗಳೊಡನೆ, "ಇಂದು ನಾವು ನಿಮಗೆ ಗ್ರಂಥ ಮತ್ತು ಸದ್ವಿವೇಕ ಪ್ರದಾನ ಮಾಡಿರುತ್ತೇವೆ. ನಾಳೆ ಇನ್ನೊಬ್ಬ ಸಂದೇಶವಾಹಕರು ನಿಮ್ಮಲ್ಲಿ ಮೊದಲಿಂದಲೇ ಇರುವ ಇದೇ ಶಿಕ್ಷಣದ ದೃಢೀಕರಣ ಮಾಡುತ್ತ ನಿಮ್ಮ ಬಳಿಗೆ ಬಂದರೆ ನೀವು ಅವನ ಮೇಲೆ ವಿಶ್ವಾಸವಿಟ್ಟು ಅವನಿಗೆ ಸಹಾಯ ಮಾಡಬೇಕಾಗುವುದು"[21] ಎಂಬ ಕರಾರು ಪಡೆದುದನ್ನು ಸ್ಮರಿಸಿರಿ. ಈ ಆದೇಶವನ್ನು ನೀಡಿ ಅಲ್ಲಾಹ್, "ನೀವು ಈ ಕರಾರನ್ನು

21. ಅರ್ಥಾತ್- ಎಲ್ಲಾ ಪ್ರವಾದಿಗಳಿಂದ ಈ ವಿಷಯದ ಬಗ್ಗೆ ಕರಾರು ಪಡೆಯಲಾಗುತ್ತಿತ್ತು. ಇಲ್ಲಿ ತಿಳಿದಿರಬೇಕಾದಂತಹ ಇನ್ನೊಂದು ವಿಷಯವೇನೆಂದರೆ ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮೊದಲು ಪ್ರತಿಯೊಬ್ಬ ಪ್ರವಾದಿಯಿಂದಲೂ ಈ ಬಗ್ಗೆ ಕರಾರು ಪಡೆಯಲಾಗುತ್ತಿತ್ತು. ಆದ್ದರಿಂದಲೇ ಪ್ರವಾದಿಗಳೆಲ್ಲ ತಮ್ಮ ನಂತರದ ಪ್ರವಾದಿಯ ಬಗ್ಗೆ ಸೂಚನೆ ನೀಡಿದ್ದಾರಲ್ಲದೆ ಅವರನ್ನು ಅನುಸರಿಸುವಂತೆ ಆದೇಶಿಸಿದ್ದಾರೆ. ಆದರೆ ಕುರ್‌ಆನ್ ಮತ್ತು ಹದೀಸ್‌ನಲ್ಲಿ ಎಲ್ಲೂ ಪ್ರವಾದಿ ಮುಹಮ್ಮದ್‌ರಿಂದ(ಸ) ಇಂತಹ ಕರಾರು ಪಡೆದ ಬಗ್ಗೆ ಅಥವಾ ಅವರು ತಮ್ಮ ಸಮುದಾಯಕ್ಕೆ ನಂತರ ಬರಲಿರುವ ಪ್ರವಾದಿಯ ಮೇಲೆ ವಿಶ್ವಾಸವಿಡುವಂತೆ ನಿರ್ದೇಶಿಸಿದ ಬಗ್ಗೆ ವಿವರಗಳು ಲಭ್ಯವಾಗುವುದಿಲ್ಲ. ಅದರ ಬದಲು ಕುರ್‌ಆನಿನಲ್ಲಿ ಪ್ರವಾದಿವರ್ಯರನ್ನು(ಸ) ಅತ್ಯಂತ ವ್ಯಕ್ತವಾದ ಧಾಟಿಯಲ್ಲಿ 'ಅಂತಿಮ ಪ್ರವಾದಿ' ಎನ್ನಲಾಗಿದೆ. ತನ್ನ ನಂತರ ಯಾವುದೇ ಪ್ರವಾದಿ ಬರಲಿಕ್ಕಿಲ್ಲವೆಂದೂ ತಮ್ಮ ಅನೇಕ ವಚನಗಳಲ್ಲಿ ಪ್ರವಾದಿವರ್ಯರು(ಸ) ಹೇಳಿದ್ದಾರೆ.

ಮಾಡುವಿರಾ ಮತ್ತು ಇದರ ಮೇಲೆ ನನ್ನ ಕಡೆಯಿಂದ ಪ್ರತಿಜ್ಞೆಯ ಭಾರೀ ಹೊಣೆಗಾರಿಕೆಯನ್ನು ವಹಿಸುವಿರಾ?" ಎಂದು ಕೇಳಿದಾಗ ಅವರು, "ಅಹುದು, ನಾವು ಪ್ರತಿಜ್ಞೆ ಮಾಡುತ್ತೇವೆ" ಎಂದರು. ಅಲ್ಲಾಹನು, "ಸರಿ, ಹಾಗಿದ್ದರೆ ನೀವು ಸಾಕ್ಷ್ಯ ವಹಿಸಿರಿ ಮತ್ತು ನಾನೂ ನಿಮ್ಮೊಂದಿಗೆ ಸಾಕ್ಷಿಯಾಗಿದ್ದೇನೆ" ಎಂದು ಹೇಳಿದನು.

فَاشْهَدُوْا وَاَنَا مَعَكُمْ مِّنَ الشّٰهِدِيْنَ ﴿٨١﴾

82. ಇದರ ಅನಂತರ ವಚನಭಂಗ ಮಾಡುವವನೇ ಧರ್ಮ ಭ್ರಷ್ಟನಾಗಿದ್ದಾನೆ.

فَمَنْ تَوَلّٰى بَعْدَ ذٰلِكَ فَاُولٰٓئِكَ هُمُ الْفٰسِقُوْنَ ﴿٨٢﴾

83. ಇವರೇನು ಅಲ್ಲಾಹನ ಅನುಸರಣಾ ರೀತಿಯನ್ನು (ಧರ್ಮ) ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನನುಸರಿಸಲು ಇಷ್ಟ ಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕಗಳಾಗಿ(ಮುಸ್ಲಿಮ್‌ಗಳಾಗಿ)ಯೇ ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ.

اَفَغَيْرَ دِيْنِ اللّٰهِ يَبْغُوْنَ وَلَهٗٓ اَسْلَمَ مَنْ فِى السَّمٰوٰتِ وَالْاَرْضِ طَوْعًا وَّكَرْهًا وَّاِلَيْهِ يُرْجَعُوْنَ ﴿٨٣﴾

84. ಓ ಪೈಗಂಬರರೇ, ಹೇಳಿರಿ- "ನಾವು ಅಲ್ಲಾಹನ ಮೇಲೆ ವಿಶ್ವಾಸ ವಿಟ್ಟಿದ್ದೇವೆ. ನಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟಿರುವ ಶಿಕ್ಷಣದ ಮೇಲೂ ವಿಶ್ವಾಸವಿಟ್ಟಿದ್ದೇವೆ. ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿಗಳ ಮೇಲೆ ಅವತೀರ್ಣಗೊಳಿಸಲ್ಪಟ್ಟ ಶಿಕ್ಷಣದ ಮೇಲೂ ವಿಶ್ವಾಸವಿಟ್ಟಿದ್ದೇವೆ. ಮೂಸಾ, ಈಸಾ ಮತ್ತು ಇತರ ಪ್ರವಾದಿಗಳಿಗೆ ಅವರ ಪ್ರಭುವಿನ ಕಡೆಯಿಂದ ನೀಡಲ್ಪಟ್ಟವುಗಳ ಮೇಲೂ ವಿಶ್ವಾಸವಿಟ್ಟಿದ್ದೇವೆ. ನಾವು ಅವರೊಳಗೆ ಭೇದವೆಣಿಸುವುದಿಲ್ಲ ಮತ್ತು ನಾವು ಅಲ್ಲಾಹನ ಆಜ್ಞಾಪಾಲಕ(ಮುಸ್ಲಿಮ್) ಆಗಿರುತ್ತೇವೆ.

قُلْ اٰمَنَّا بِاللّٰهِ وَمَآ اُنْزِلَ عَلَيْنَا وَمَآ اُنْزِلَ عَلٰٓى اِبْرٰهِيْمَ وَاِسْمٰعِيْلَ وَاِسْحٰقَ وَيَعْقُوْبَ وَالْاَسْبَاطِ وَمَآ اُوْتِيَ مُوْسٰى وَعِيْسٰى وَالنَّبِيُّوْنَ مِنْ رَّبِّهِمْ لَا نُفَرِّقُ بَيْنَ اَحَدٍ مِّنْهُمْ وَنَحْنُ لَهٗ مُسْلِمُوْنَ ﴿٨٤﴾

85. ಯಾರಾದರೂ ಈ ವಿಧೇಯತೆಯ (ಇಸ್ಲಾಮ್) ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿ ತೀರುವನು.

وَمَنْ يَّبْتَغِ غَيْرَ الْاِسْلَامِ دِيْنًا فَلَنْ يُّقْبَلَ مِنْهُ وَهُوَ فِى الْاٰخِرَةِ مِنَ الْخٰسِرِيْنَ ﴿٨٥﴾

86. ಸತ್ಯವಿಶ್ವಾಸದ ಭವ್ಯ ಕೊಡುಗೆಯೊದಗಿದ ಬಳಿಕ ಪುನಃ ಅಧರ್ಮ ಕೈಗೊಂಡವರಿಗೆ ಅಲ್ಲಾಹನು ಸನ್ಮಾರ್ಗದರ್ಶನ ಮಾಡುವುದಾದರೂ

كَيْفَ يَهْدِى اللّٰهُ قَوْمًا كَفَرُوْا بَعْدَ

ಹೇಗೆ? ವಸ್ತುತಃ ಈ ಸಂದೇಶವಾಹಕರು ಸತ್ಯಮಾರ್ಗದಲ್ಲಿರುವರೆಂದೂ ಅವರ ಬಳಿ ಜ್ವಲಂತ ನಿದರ್ಶನಗಳು ಬಂದಿರುತ್ತವೆಂದೂ ಅವರೇ ಸಾಕ್ಷ್ಯ ನುಡಿದಾಗಿದೆ. ಅಲ್ಲಾಹನು ಅಕ್ರಮಿಗಳಿಗೆ ಸನ್ಮಾರ್ಗದರ್ಶನ ಮಾಡುವುದಿಲ್ಲ.

إِيمَانِهِمْ وَشَهِدُوٓا أَنَّ الرَّسُولَ حَقٌّ وَجَآءَهُمُ الْبَيِّنَٰتُ ۚ وَاللَّهُ لَا يَهْدِى الْقَوْمَ الظَّٰلِمِينَ ﴿٨٦﴾

87. ಅವರ ಮೇಲೆ ಅಲ್ಲಾಹನ, ದೇವಚರರ ಮತ್ತು ಸಕಲ ಮಾನವರ ಅಭಿಶಾಪವಿದೆ.

أُولَٰٓئِكَ جَزَآؤُهُمْ أَنَّ عَلَيْهِمْ لَعْنَةَ اللَّهِ وَالْمَلَٰٓئِكَةِ وَالنَّاسِ أَجْمَعِينَ ﴿٨٧﴾

88. ಅವರು ಸದಾಕಾಲ ಅದೇ ಸ್ಥಿತಿಯಲ್ಲಿರುವರು. ಅವರ ಶಿಕ್ಷೆಯನ್ನು ಲಘೂಕರಿಸಲಾಗದು ಮತ್ತು ಅವರಿಗೆ ಸಮಯಾವಕಾಶವನ್ನೂ ನೀಡಲಾಗದು. ಇದೇ ಅವರ ಅಕ್ರಮಗಳಿಗೆ ತಕ್ಕ ಪ್ರತಿಫಲ.

خَٰلِدِينَ فِيهَا لَا يُخَفَّفُ عَنْهُمُ الْعَذَابُ وَلَا هُمْ يُنظَرُونَ ﴿٨٨﴾

89. ಅನಂತರ ಪಶ್ಚಾತ್ತಾಪಪಟ್ಟು ತಮ್ಮ ಕರ್ಮವಿಧಾನಗಳನ್ನು ತಿದ್ದಿ ಸರಿಪಡಿಸಿಕೊಂಡವರು ಇದರಿಂದ ರಕ್ಷಿಸಲ್ಪಡುವರು. ಅಲ್ಲಾಹನು ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ.

إِلَّا الَّذِينَ تَابُوا مِنۢ بَعْدِ ذَٰلِكَ وَأَصْلَحُوا فَإِنَّ اللَّهَ غَفُورٌ رَّحِيمٌ ﴿٨٩﴾

90. ಆದರೆ ಸತ್ಯವಿಶ್ವಾಸವನ್ನು ಸ್ವೀಕರಿಸಿದ ಬಳಿಕ ನಿಷೇಧ ನೀತಿಯನ್ನು ಅನುಸರಿಸಿ ತಮ್ಮ ಈ ನಿಷೇಧ ನೀತಿಯಲ್ಲಿ ಮುಂದುವರಿಯುತ್ತ ಹೋದರೆ[22] ಅವರ ಪಶ್ಚಾತ್ತಾಪವನ್ನೂ ಸ್ವೀಕರಿಸಲಾಗದು. ಇಂತಹವರು ಶುದ್ಧ ಪಥಭ್ರಷ್ಟರು.

إِنَّ الَّذِينَ كَفَرُوا بَعْدَ إِيمَٰنِهِمْ ثُمَّ ازْدَادُوا كُفْرًا لَّن تُقْبَلَ تَوْبَتُهُمْ وَأُولَٰٓئِكَ هُمُ الضَّآلُّونَ ﴿٩٠﴾

91. ನಿಶ್ಚಯವಾಗಿಯೂ ನಿಷೇಧ ನೀತಿಯನ್ನು ಕೈಗೊಂಡವರು ಮತ್ತು ಸತ್ಯನಿಷೇಧದ ಸ್ಥಿತಿಯಲ್ಲೇ ಪ್ರಾಣಬಿಟ್ಟವರು- ಇವರ ಪೈಕಿ ಯಾರಾದರೂ ತನ್ನನ್ನು ಶಿಕ್ಷೆಯಿಂದ ರಕ್ಷಿಸಲು ಭೂಮಿ ತುಂಬುವಷ್ಟು ಚಿನ್ನವನ್ನು ಪರಿಹಾರವಾಗಿ ಕೊಟ್ಟರೂ ಅದನ್ನು ಸ್ವೀಕರಿಸಲಾಗದು- ಇಂತಹವರಿಗಾಗಿ ವೇದನಾತ್ಮಕ ಶಿಕ್ಷೆ ಸಿದ್ಧವಿದೆ ಮತ್ತು ಅವರು ಯಾವ ಸಹಾಯಕನನ್ನೂ ಪಡೆಯಲಾರರು.

إِنَّ الَّذِينَ كَفَرُوا وَمَاتُوا وَهُمْ كُفَّارٌ فَلَن يُقْبَلَ مِنْ أَحَدِهِم مِّلْءُ الْأَرْضِ ذَهَبًا وَلَوِ افْتَدَىٰ بِهِۦٓ ۗ أُولَٰٓئِكَ لَهُمْ عَذَابٌ أَلِيمٌ وَمَا لَهُم مِّن نَّٰصِرِينَ ﴿٩١﴾

92. *ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯ ಮಟ್ಟವನ್ನು

لَن تَنَالُوا الْبِرَّ حَتَّىٰ تُنفِقُوا مِمَّا تُحِبُّونَ ۚ

22. ಅಂದರೆ ಕೇವಲ ನಿರಾಕರಣೆಯನ್ನು ಮಾತ್ರ ಮಾಡದೆ ಕೃತಿಯಲ್ಲೂ ಪ್ರತಿರೋಧ ಮತ್ತು ಪ್ರತಿಭಟನೆ ತೋರಿದರು. ಜನರನ್ನು ದೇವ ಮಾರ್ಗದಿಂದ ತಡೆಯಲು ಸರ್ವತ್ರ ಪ್ರಯತ್ನ ನಡೆಸಿದರು. ಸಂಶಯಗಳನ್ನು ಹುಟ್ಟು ಹಾಕಿದರು. ಅಪನಂಬಿಕೆಗಳನ್ನು ಹರಡಿದರು. ಮನಸ್ಸಿನಲ್ಲಿ ಸಂದೇಹದ ಬೀಜ ಬಿತ್ತಿದರು. ಪ್ರವಾದಿವರ್ಯರ(ಸ) ಆಂದೋಲನ ಯಾವ ರೀತಿಯಲ್ಲೂ ಯಶಸ್ವಿಯಾಗಬಾರದೆಂದು ಅತ್ಯಂತ ಹೇಯವಾದ ಒಳಸಂಚು ಮತ್ತು ಕಿಡಿಗೇಡಿತನಗಳನ್ನು ನಡೆಸಿದರು.

***ಇಲ್ಲಿಂದ 4ನೇ ಕಾಂಡ ಆರಂಭ.**

ತಲಪಲಾರಿರಿ. ನೀವು ಏನೇನು ಖರ್ಚು ಮಾಡುವಿರೋ ಅದರ ಬಗ್ಗೆ ಅಲ್ಲಾಹನು ಅಜ್ಞನಲ್ಲ.

وَمَا تُنفِقُوا مِن شَيْءٍ فَإِنَّ اللَّهَ بِهِ عَلِيمٌ ﴿٩٢﴾

93. (ಮುಹಮ್ಮದ್‌ರ(ಸ) ಧರ್ಮಶಾಸ್ತ್ರದಲ್ಲಿ ಹಲಾಲ್ ಆಗಿರುವ) ಇವೆಲ್ಲ ಆಹಾರ ಪದಾರ್ಥಗಳೂ ಬನೀಇಸ್ರಾಈಲರಿಗೂ ಹಲಾಲ್ (ಧರ್ಮಸಮ್ಮತ) ಆಗಿದ್ದವು.[23] ಆದರೆ, ಕೆಲವು ವಸ್ತುಗಳನ್ನು 'ತೌರಾತ್' ಅವತೀರ್ಣಗೊಳ್ಳುವುದಕ್ಕೆ ಮುಂಚಿತವಾಗಿ ಇಸ್ರಾಈಲರು (ಹ.ಯಅ್‌ಕೂಬ್‌ರು) ಸ್ವತಃ ತಮ್ಮ ಮೇಲೆ ಹರಾಮ್(ನಿಷಿದ್ಧ) ಆಗಿ ಮಾಡಿಕೊಂಡಿದ್ದರು. ಅವರೊಡನೆ ಹೇಳಿರಿ - "ನೀವು (ನಿಮ್ಮ ಆಕ್ಷೇಪದ ಬಗ್ಗೆ) ಸತ್ಯವಾದಿಗಳಾಗಿದ್ದರೆ, 'ತೌರಾತ'ನ್ನು ತಂದು ಅದಕ್ಕೆ ಸಂಬಂಧಿಸಿದ ವಿಷಯವನ್ನು ಮುಂದಿಡಿರಿ."

كُلُّ الطَّعَامِ كَانَ حِلًّا لِّبَنِي إِسْرَائِيلَ إِلَّا
مَا حَرَّمَ إِسْرَائِيلُ عَلَىٰ نَفْسِهِ مِن قَبْلِ
أَن تُنَزَّلَ التَّوْرَاةُ ۗ قُلْ فَأْتُوا بِالتَّوْرَاةِ
فَاتْلُوهَا إِن كُنتُمْ صَادِقِينَ ﴿٩٣﴾

94. ಇದರ ಅನಂತರವೂ ತಮ್ಮ ಕೃತಕ ಮಾತುಗಳನ್ನು ಅವರು ಅಲ್ಲಾಹನ ಮೇಲೆ ಆರೋಪಿಸುತ್ತಲೇ ಇದ್ದರೆ ಅವರೇ ನಿಜವಾಗಿಯೂ ಅಕ್ರಮಿಗಳು.

فَمَنِ افْتَرَىٰ عَلَى اللَّهِ الْكَذِبَ مِن بَعْدِ
ذَٰلِكَ فَأُولَٰئِكَ هُمُ الظَّالِمُونَ ﴿٩٤﴾

95. ಹೇಳಿರಿ- ಅಲ್ಲಾಹನು ನುಡಿದಿರುವುದೆಲ್ಲವನ್ನೂ ಸತ್ಯವಾಗಿಯೇ ನುಡಿದಿದ್ದಾನೆ. ನೀವು ಏಕನಿಷ್ಠೆಯೊಂದಿಗೆ ಇಬ್‌ರಾಹೀಮರ ಪದ್ಧತಿಯ ಅನುಸರಣೆ ಮಾಡಬೇಕು ಮತ್ತು ಇಬ್‌ರಾಹೀಮರು ಬಹುದೇವವಿಶ್ವಾಸ ಕೈಗೊಂಡವರಲ್ಲಾಗಿರಲಿಲ್ಲ.

قُلْ صَدَقَ اللَّهُ ۗ فَاتَّبِعُوا مِلَّةَ إِبْرَاهِيمَ
حَنِيفًا ۖ وَمَا كَانَ مِنَ الْمُشْرِكِينَ ﴿٩٥﴾

96. ನಿಶ್ಚಯವಾಗಿಯೂ ಮಾನವರಿಗಾಗಿ ನಿರ್ಮಿಸಲ್ಪಟ್ಟ ಪ್ರಥಮ ಆರಾಧನಾಲಯವು ಮಕ್ಕಾದಲ್ಲಿರುವುದೇ ಆಗಿರುತ್ತದೆ. ಅದಕ್ಕೆ ಶುಭ ಸಮೃದ್ಧಿಗಳನ್ನು ನೀಡಲಾಗಿತ್ತು ಮತ್ತು ಅದು ಸಮಗ್ರ ಲೋಕದವರಿಗೆ ಸನ್ಮಾರ್ಗದರ್ಶನದ ಕೇಂದ್ರವನ್ನಾಗಿ ಮಾಡಲ್ಪಟ್ಟಿತ್ತು.

إِنَّ أَوَّلَ بَيْتٍ وُضِعَ لِلنَّاسِ لَلَّذِي بِبَكَّةَ
مُبَارَكًا وَهُدًى لِّلْعَالَمِينَ ﴿٩٦﴾

23. ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಬೋಧನೆಗಳಲ್ಲಿ ಯಾವುದೇ ರೀತಿಯ ತಾತ್ವಿಕ ಆಕ್ಷೇಪವನ್ನು ಹುಡುಕಲು ಯಹೂದಿ ವಿದ್ವಾಂಸರಿಗೆ ಸಾಧ್ಯವಾಗದಿದ್ದಾಗ (ಏಕೆಂದರೆ ಧರ್ಮದ ಮೂಲಭೂತ ವಿಷಯಗಳಲ್ಲಿ ಅವರ ಪೂರ್ವ ಪ್ರವಾದಿಗಳ ಬೋಧನೆಗಳಲ್ಲೂ ಪ್ರವಾದಿವರ್ಯರ(ಸ) ಬೋಧನೆಯಲ್ಲೂ ಯಾವುದೇ ವ್ಯತ್ಯಾಸವಿರಲಿಲ್ಲ) ಅವರು ಕರ್ಮಶಾಸ್ತ್ರಕ್ಕೆ ಸಂಬಂಧಿಸಿದ ಆಕ್ಷೇಪಗಳನ್ನು ಮುಂದಿಡತೊಡಗಿದರು. ಈ ನಿಟ್ಟಿನಲ್ಲಿ ಅವರು ಮಾಡಿದ ಮೊದಲ ಆಕ್ಷೇಪ ಪೂರ್ವ ಪ್ರವಾದಿಗಳ ಕಾಲದಿಂದಲೂ ನಿಷಿದ್ಧವಾಗಿರುವ ಕೆಲವು ವಸ್ತುಗಳ ಸೇವನೆಯನ್ನು ನೀವು ಧರ್ಮಸಮ್ಮತಗೊಳಿಸಿದ್ದೀರಿ ಎಂಬುದಾಗಿತ್ತು. ಇಲ್ಲಿ ಈ ಆಕ್ಷೇಪಕ್ಕೆ ಉತ್ತರ ನೀಡಲಾಗಿದೆ. ಬೈತುಲ್ ಮುಕದ್ದಿಸನ್ನು ಬಿಟ್ಟು ಕಅಬಾ ಭವನವನ್ನು ಅಭಿಮುಖ ಕೇಂದ್ರವಾಗಿ ಯಾಕೆ ಮಾಡಲಾಗಿದೆ ಎಂಬುದು ಅವರ ಇನ್ನೊಂದು ಆಕ್ಷೇಪವಾಗಿತ್ತು. ನಂತರದ ಸೂಕ್ತಗಳಲ್ಲಿ ಈ ಆಕ್ಷೇಪಕ್ಕೂ ಉತ್ತರ ನೀಡಲಾಗಿದೆ.

97. ಅದರಲ್ಲಿ ಸುವ್ಯಕ್ತ ಕುರುಹುಗಳಿವೆ.[24] 'ಮಕಾಮು ಇಬ್‌ರಾಹೀಮ್' (ಇಬ್‌ರಾಹೀಮರು ದೇವಾರಾಧನೆಗಾಗಿ ನಿಂತ ಸ್ಥಾನ)ಇದೆ ಮತ್ತು ಅದರೊಳಗೆ ಪ್ರವೇಶಗೊಂಡವನು ಸಂರಕ್ಷಣೆ ಹೊಂದಿದನು. ಈ ಭವನದವರೆಗೆ ತಲಪಲು ಸಾಧನಾನುಕೂಲತೆಗಳಿರುವವನು ಅದರ 'ಹಜ್ಜ್' ಯಾತ್ರೆ ಕೈಗೊಳ್ಳಬೇಕೆಂಬುದು ಜನರ ಮೇಲೆ ಅಲ್ಲಾಹನ ಹಕ್ಕಾಗಿರುತ್ತದೆ. ಈ ಆಜ್ಞೆಯ ಅನುಸರಣೆಯನ್ನು ಯಾರಾದರೂ ನಿರಾಕರಿಸಿದರೆ, ಅಲ್ಲಾಹನು ಸಕಲ ಜಗತ್ತಿನವರಿಂದ ನಿರಪೇಕ್ಷ ನಾಗಿರುತ್ತಾನೆಂಬುದನ್ನು ಅವನು ಅರಿತಿರಬೇಕು.

فِيهِ ءَايَٰتٌۢ بَيِّنَٰتٌ مَّقَامُ إِبْرَٰهِيمَ ۖ وَمَن
دَخَلَهُۥ كَانَ ءَامِنًا ۗ وَلِلَّهِ عَلَى ٱلنَّاسِ حِجُّ
ٱلْبَيْتِ مَنِ ٱسْتَطَاعَ إِلَيْهِ سَبِيلًا ۚ وَمَن
كَفَرَ فَإِنَّ ٱللَّهَ غَنِىٌّ عَنِ ٱلْعَٰلَمِينَ ﴿٩٧﴾

98. ಹೇಳಿರಿ- "ಓ ಗ್ರಂಥದವರೇ, ನೀವು ಅಲ್ಲಾಹನ ಸೂಕ್ತಗಳನ್ನು ಒಪ್ಪಿಕೊಳ್ಳಲು ಏಕೆ ನಿರಾಕರಿಸುತ್ತೀರಿ? ನಿಮ್ಮ ಚಟುವಟಿಕೆಗಳನ್ನೆಲ್ಲ ಅಲ್ಲಾಹನು ವೀಕ್ಷಿಸುತ್ತಿದ್ದಾನೆ."

قُلْ يَٰٓأَهْلَ ٱلْكِتَٰبِ لِمَ تَكْفُرُونَ بِـَٔايَٰتِ
ٱللَّهِ وَٱللَّهُ شَهِيدٌ عَلَىٰ مَا تَعْمَلُونَ ﴿٩٨﴾

99. ಹೇಳಿರಿ, "ಓ ಗ್ರಂಥದವರೇ, ಅಲ್ಲಾಹನ ಮಾತು ಸ್ವೀಕರಿಸುವವನನ್ನು ಸಹ ನೀವು ಅಲ್ಲಾಹನ ಮಾರ್ಗದಿಂದ ತಡೆಯುತ್ತೀರಿ ಮತ್ತು ಅವನು ಅಡ್ಡ ದಾರಿಯಲ್ಲಿ ನಡೆಯಬೇಕೆಂದು ಬಯಸುತ್ತೀರಿ. ವಸ್ತುತಃ ನೀವು ಸ್ವತಃ (ಅವನು ನೇರ ಮಾರ್ಗದಲ್ಲಿರುವ ಬಗ್ಗೆ) ಸಾಕ್ಷಿಗಳಾಗಿರುತ್ತೀರಿ. (ನಿಮ್ಮದು ಇದೆಂತಹ ನೀತಿ?) ಅಲ್ಲಾಹನು ನಿಮ್ಮ ಚಟುವಟಿಕೆಗಳ ಬಗ್ಗೆ ಬೋಧರಹಿತನಲ್ಲ."

قُلْ يَٰٓأَهْلَ ٱلْكِتَٰبِ لِمَ تَصُدُّونَ عَن سَبِيلِ
ٱللَّهِ مَنْ ءَامَنَ تَبْغُونَهَا عِوَجًا وَأَنتُمْ شُهَدَآءُ ۗ
وَمَا ٱللَّهُ بِغَٰفِلٍ عَمَّا تَعْمَلُونَ ﴿٩٩﴾

100. ಓ ಸತ್ಯವಿಶ್ವಾಸಿಗಳೇ, ನೀವು ಈ ಗ್ರಂಥದವರಲ್ಲಿ ಒಂದು ತಂಡದವರ ಮಾತನ್ನು ಸ್ವೀಕರಿಸಿಕೊಂಡರೆ ಇವರು ನಿಮ್ಮನ್ನು ಸತ್ಯವಿಶ್ವಾಸದಿಂದ ಸತ್ಯನಿಷೇಧದ ಕಡೆಗೆ ಮರಳಿಸಿ ಕೊಂಡೊಯ್ಯುವರು.

يَٰٓأَيُّهَا ٱلَّذِينَ ءَامَنُوٓا۟ إِن تُطِيعُوا۟ فَرِيقًا مِّنَ
ٱلَّذِينَ أُوتُوا۟ ٱلْكِتَٰبَ يَرُدُّوكُم بَعْدَ
إِيمَٰنِكُمْ كَٰفِرِينَ ﴿١٠٠﴾

101. ನಿಮಗೆ ಅಲ್ಲಾಹನ ಸೂಕ್ತಗಳನ್ನು ಓದಿ ಕೇಳಿಸಲಾಗುತ್ತಿದೆ ಮತ್ತು ನಿಮ್ಮ ನಡುವೆ ಸಂದೇಶವಾಹಕರು ಉಪಸ್ಥಿತರಿದ್ದಾರೆ. ಹಾಗಿರುವಾಗ ನಿಮಗೆ ಸತ್ಯನಿಷೇಧದ ಕಡೆಗೆ ಮರಳುವ

وَكَيْفَ تَكْفُرُونَ وَأَنتُمْ تُتْلَىٰ عَلَيْكُمْ
ءَايَٰتُ ٱللَّهِ وَفِيكُمْ رَسُولُهُۥ ۗ وَمَن يَعْتَصِم

24. ಅರ್ಥಾತ್- ಇದು ಅಲ್ಲಾಹನು ಮೆಚ್ಚಿದ ಮತ್ತು ತನ್ನ ಭವನವಾಗಿ ಆಯ್ದುಕೊಂಡ ಸ್ಥಳವಾಗಿದೆ ಎಂದು ಸಾಬೀತು ಪಡಿಸುವಂತಹ ಸುವ್ಯಕ್ತ ಕುರುಹುಗಳು ಈ ಭವನದಲ್ಲಿವೆ. ಬರಡಾದ ಮರುಭೂಮಿಯಲ್ಲಿ ಅದನ್ನು ನೆಲೆಗೊಳಿಸಲಾಗಿದ್ದರೂ ಆ ಪ್ರದೇಶದಲ್ಲಿ ವಾಸಿಸುವವರಿಗೆ ಅಲ್ಲಾಹನು ಜೀವನಾಧಾರಗಳನ್ನು ಒದಗಿಸುವ ಅತ್ಯುತ್ತಮ ವ್ಯವಸ್ಥೆ ಮಾಡಿದ್ದಾನೆ. ಅಜ್ಞಾನದಿಂದಾಗಿ ಎರಡೂವರೆ ಸಾವಿರ ವರ್ಷಗಳ ಕಾಲ ಸಮಸ್ತ ಅರಬ್ ರಾಷ್ಟ್ರ ಅಶಾಂತಿಗೆ ಈಡಾಗಿತ್ತು. ಆದರೆ ಆ ಕ್ಷೋಭೆಪೀಡಿತ ಪ್ರದೇಶದಲ್ಲಿ ಕಅಬಾ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ಮಾತ್ರ ಶಾಂತಿಯ ನೆಲೆಯಾಗಿ ಉಳಿದಿತ್ತು. ಈ ಕಅಬಾದ ನಿಮಿತ್ತವೇ ವರ್ಷಂಪ್ರತಿ ಸುಮಾರು ನಾಲ್ಕು ತಿಂಗಳ ಕಾಲ ದೇಶಕ್ಕೆ ಶಾಂತಿ ಪ್ರಾಪ್ತವಾಗುತ್ತಿತ್ತು. ಅಲ್ಲದೆ ಅರ್ಧಶತಮಾನದ ಹಿಂದೆಯಷ್ಟೇ ಕಅಬಾವನ್ನು ಕೆಡವಲು ಪ್ರಯತ್ನಿಸಿ ಮಕ್ಕಾದ ಮೇಲೆ ಆಕ್ರಮಣ ಮಾಡಿದ 'ಅಬ್ರಹಾ'ನ ಮೇಲೆ ದೇವ ಕ್ರೋಧ ಎರಗಿದ ಉದಾಹರಣೆಯೂ ಸರ್ವವಿಧಿತ. ಆ ಕಾಲದ ಆಬಾಲವೃದ್ಧರೆಲ್ಲರಿಗೂ ಈ ಘಟನೆಯ ಬಗ್ಗೆ ತಿಳಿದಿತ್ತಲ್ಲದೆ ಅದನ್ನು ಕಣ್ಣಾರೆ ಕಂಡ ಅನೇಕರು ಆಗ ಜೀವಿಸಿದ್ದರು.

ಸಂದರ್ಭವೇನು ಉಳಿದಿದೆ? ಅಲ್ಲಾಹನಿಗೆ ಶರಣು ಹೋಗುವಾತನು ನಿಸ್ಸಂದೇಹವಾಗಿ ಸನ್ಮಾರ್ಗ ಹೊಂದುವನು.

بِاللّٰهِ فَقَدْ هُدِيَ اِلٰى صِرَاطٍ مُّسْتَقِيْمٍ ﴿١٠١﴾

102. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಬೇಕಾದ ರೀತಿಯಲ್ಲೇ ಭಯಪಡಿರಿ. ನೀವು ಮುಸ್ಲಿಮರಾಗಿರುವ ಸ್ಥಿತಿಯಲ್ಲಿಯೇ ವಿನಾ ನಿಮಗೆ ಮರಣ ಬಾರದಿರಲಿ.

يٰٓاَيُّهَا الَّذِيْنَ اٰمَنُوا اتَّقُوا اللّٰهَ حَقَّ تُقٰتِهٖ
وَلَا تَمُوْتُنَّ اِلَّا وَاَنْتُمْ مُّسْلِمُوْنَ ﴿١٠٢﴾

103. ನೀವೆಲ್ಲರೂ ಒಟ್ಟಾಗಿ ಅಲ್ಲಾಹನ ಪಾಶವನ್ನು[25] ಬಿಗಿ ಹಿಡಿಯಿರಿ ಮತ್ತು ಭಿನ್ನಭಿನ್ನರಾಗದಿರಿ. ನಿಮ್ಮ ಮೇಲೆ ಅಲ್ಲಾಹನು ಮಾಡಿದ್ದ ಆ ಉಪಕಾರವನ್ನು ಸ್ಮರಿಸಿರಿ. ನೀವು ಪರಸ್ಪರ ಶತ್ರುಗಳಾಗಿದ್ದಿರಿ. ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು ಮತ್ತು ಅವನ ಅನುಗ್ರಹದಿಂದ ನೀವು ಸಹೋದರರಾದಿರಿ. ನೀವು ಅಗ್ನಿ ತುಂಬಿದ ಒಂದು ಕುಂಡದ ಅಂಚಿನಲ್ಲಿ ನಿಂತಿದ್ದಿರಿ. ಅಲ್ಲಾಹನು ನಿಮ್ಮನ್ನು ಅದರಿಂದ ರಕ್ಷಿಸಿದನು. ಈ ದೃಷ್ಟಾಂತಗಳಿಂದ ನಿಮಗೆ ನಿಮ್ಮ ಶಾಶ್ವತ ವಿಜಯದ ನೇರ ಮಾರ್ಗ ಕಾಣಬಹುದೆಂದು ನಿರೀಕ್ಷಿಸಿ ಅಲ್ಲಾಹನು ತನ್ನ ನಿದರ್ಶನಗಳನ್ನು ನಿಮಗೆ ಪ್ರಕಾಶಗೊಳಿಸುತ್ತಾನೆ.

وَاعْتَصِمُوْا بِحَبْلِ اللّٰهِ جَمِيْعًا وَّلَا تَفَرَّقُوْا
وَاذْكُرُوْا نِعْمَتَ اللّٰهِ عَلَيْكُمْ اِذْ كُنْتُمْ اَعْدَآءً
فَاَلَّفَ بَيْنَ قُلُوْبِكُمْ فَاَصْبَحْتُمْ بِنِعْمَتِهٖٓ
اِخْوَانًا وَكُنْتُمْ عَلٰى شَفَا حُفْرَةٍ مِّنَ
النَّارِ فَاَنْقَذَكُمْ مِّنْهَا كَذٰلِكَ يُبَيِّنُ اللّٰهُ
لَكُمْ اٰيٰتِهٖ لَعَلَّكُمْ تَهْتَدُوْنَ ﴿١٠٣﴾

104. ನಿಮ್ಮಲ್ಲಿ ಸತ್ಕರ್ಮದ ಕಡೆಗೆ ಆಹ್ವಾನಿಸುವ, ಒಳಿತನ್ನು ಆಜ್ಞಾಪಿಸುವ ಮತ್ತು ಕೆಡುಕುಗಳಿಂದ ತಡೆಯುವಂತಹ ಜನಕೂಟವೊಂದು ಇರಬೇಕಾದುದು ಅತ್ಯಗತ್ಯ. ಈ ಕಾರ್ಯವೆಸಗುವವರೇ ನಿಶ್ಚಯವಾಗಿಯೂ ಕೃತಾರ್ಥರಾಗುವರು.

وَلْتَكُنْ مِّنْكُمْ اُمَّةٌ يَّدْعُوْنَ اِلَى الْخَيْرِ
وَيَاْمُرُوْنَ بِالْمَعْرُوْفِ وَيَنْهَوْنَ عَنِ
الْمُنْكَرِ وَاُولٰٓئِكَ هُمُ الْمُفْلِحُوْنَ ﴿١٠٤﴾

105. ಸುವ್ಯಕ್ತ ನಿದರ್ಶನಗಳು ಪ್ರಾಪ್ತಿಯಾದ ಮೇಲೆ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿ ವಿಭಿನ್ನ ಪಕ್ಷ ಪಂಗಡಗಳಲ್ಲಿ ಹರಿ ಹಂಚಿ ಹೋದವರಂತೆ ನೀವಾಗಬಾರದು. ಹೀಗೆ ಮಾಡಿದವರು ಘೋರ ಯಾತನೆಯನ್ನನುಭವಿಸುವರು.

وَلَا تَكُوْنُوْا كَالَّذِيْنَ تَفَرَّقُوْا وَاخْتَلَفُوْا
مِنْ بَعْدِ مَا جَآءَهُمُ الْبَيِّنٰتُ وَاُولٰٓئِكَ
لَهُمْ عَذَابٌ عَظِيْمٌ ﴿١٠٥﴾

106. ಅಂದು ಕೆಲವರು ಪ್ರಸನ್ನವದನರಾಗುವರು. ಇನ್ನು ಕೆಲವರ ಮುಖಗಳು ಕಪ್ಪಾಗುವುವು. ಮುಖ ಕಪ್ಪಾದವರೊಡನೆ (ಹೀಗೆ ಹೇಳಲಾಗುವುದು), "ಈಮಾನಿನ ಭವ್ಯ ಕೊಡುಗೆ ಪ್ರಾಪ್ತವಾದ ಬಳಿಕವೂ ನೀವು ನಿಷೇಧ ನೀತಿಯನ್ನು ಅನುಸರಿಸಿದಿರಾ? ಸರಿ, ಹಾಗಾದರೆ ಈ ಕೃತಘ್ನತೆಯ ಬದಲಿಗೆ ನರಕ ಯಾತನೆಯ ಸವಿಯನ್ನುಣ್ಣಿರಿ."

يَّوْمَ تَبْيَضُّ وُجُوْهٌ وَّتَسْوَدُّ وُجُوْهٌ فَاَمَّا
الَّذِيْنَ اسْوَدَّتْ وُجُوْهُهُمْ اَكَفَرْتُمْ بَعْدَ
اِيْمَانِكُمْ فَذُوْقُوا الْعَذَابَ بِمَا كُنْتُمْ تَكْفُرُوْنَ ﴿١٠٦﴾

25. ಅಲ್ಲಾಹನ ಪಾಶವೆಂದರೆ ಅಲ್ಲಾಹನ ಧರ್ಮ. ಒಂದೆಡೆ ಸತ್ಯವಿಶ್ವಾಸಿಗಳ ಸಂಬಂಧವನ್ನು ಅಲ್ಲಾಹನೊಂದಿಗೆ ಜೋಡಿಸುವ ಮತ್ತು ಇನ್ನೊಂದೆಡೆ ಸಮಸ್ತ ಸತ್ಯವಿಶ್ವಾಸಿಗಳನ್ನು ಸೇರಿಸಿ ಒಂದು ಸಮುದಾಯವನ್ನಾಗಿ ಮಾಡುವ ನಂಟು ಧರ್ಮವೇ ಆಗಿದೆ. ಆದ್ದರಿಂದಲೇ ಅದನ್ನು ಇಲ್ಲಿ 'ಪಾಶ'ವೆಂದು ಸಾರಲಾಗಿದೆ.

107. ಪ್ರಸನ್ನವದನರಾದವರ ವಿಚಾರ-ಅವರಿಗೆ ಅಲ್ಲಾಹನ ಕೃಪಾಶ್ರಯದಲ್ಲಿ ಸ್ಥಾನ ಸಿಗುವುದು ಮತ್ತು ಅವರು ಸದಾ ಅದೇ ಸ್ಥಿತಿಯಲ್ಲಿರುವರು.

وَأَمَّا الَّذِينَ ابْيَضَّتْ وُجُوهُهُمْ فَفِي رَحْمَةِ
اللَّهِ ۖ هُمْ فِيهَا خَالِدُونَ ﴿١٠٧﴾

108. ನಾವು ನಿಮಗೆ ನಿಖರವಾಗಿ ತಿಳಿಸುತ್ತಿರುವ ಅಲ್ಲಾಹನ ಸುಸ್ಪಷ್ಟ ಆದೇಶಗಳಿವು. ಏಕೆಂದರೆ ಅಲ್ಲಾಹನು ಲೋಕವಾಸಿಗಳ ಮೇಲೆ ಅಕ್ರಮವೆಸಗುವ ಇರಾದೆಯನ್ನೇನೂ ಇಟ್ಟಿರುವುದಿಲ್ಲ.

تِلْكَ آيَاتُ اللَّهِ نَتْلُوهَا عَلَيْكَ بِالْحَقِّ ۗ وَمَا
اللَّهُ يُرِيدُ ظُلْمًا لِّلْعَالَمِينَ ﴿١٠٨﴾

109. ಭೂಮಿ-ಆಕಾಶಗಳ ಸಮಸ್ತ ವಸ್ತುಗಳ ಮಾಲಕನು ಅಲ್ಲಾಹನು ಮತ್ತು ಸಕಲ ವ್ಯವಹಾರಗಳೂ ಅಲ್ಲಾಹನ ಆಸ್ಥಾನದಲ್ಲಿ ಅರ್ಪಿಸಲ್ಪಡುತ್ತವೆ.

وَلِلَّهِ مَا فِي السَّمَاوَاتِ وَمَا فِي الْأَرْضِ ۚ
وَإِلَى اللَّهِ تُرْجَعُ الْأُمُورُ ﴿١٠٩﴾

110. ಮಾನವರ ಸನ್ಮಾರ್ಗದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ. ಈ ಗ್ರಂಥದವರು[26] ವಿಶ್ವಾಸವಿಡುತ್ತಿದ್ದರೆ ಅವರಿಗೇ ಚೆನ್ನಾಗಿತ್ತು. ಅವರಲ್ಲಿ ಕೆಲವರು ಸತ್ಯವಿಶ್ವಾಸಿಗಳೂ ಕಂಡು ಬರುತ್ತಾರೆ. ಆದರೂ ಅವರ ಅಧಿಕಾಂಶ ಜನರು ಆಜ್ಞೋಲ್ಲಂಘಕರಾಗಿರುತ್ತಾರೆ.

كُنتُمْ خَيْرَ أُمَّةٍ أُخْرِجَتْ لِلنَّاسِ تَأْمُرُونَ
بِالْمَعْرُوفِ وَتَنْهَوْنَ عَنِ الْمُنكَرِ وَتُؤْمِنُونَ
بِاللَّهِ ۗ وَلَوْ آمَنَ أَهْلُ الْكِتَابِ لَكَانَ خَيْرًا لَّهُم ۚ
مِّنْهُمُ الْمُؤْمِنُونَ وَأَكْثَرُهُمُ الْفَاسِقُونَ ﴿١١٠﴾

111. ಇವರು ನಿಮಗೇನೂ ಕೇಡನ್ನುಂಟು ಮಾಡಲಾರರು. ಹೆಚ್ಚೆಂದರೆ ಒಂದಿಷ್ಟು ಸತಾಯಿಸಬಹುದು. ಅವರು ನಿಮ್ಮೊಂದಿಗೆ ಯುದ್ಧ ಮಾಡಿದರೆ, ಹೋರಾಟದಲ್ಲಿ ಬೆನ್ನು ತೋರಿಸುವರು. ಅನಂತರ ಅವರಿಗೆ ಎಲ್ಲಿಂದಲೂ ನೆರವು ಒದಗದಷ್ಟು ಅಸಹಾಯಕರಾಗುವರು.

لَن يَضُرُّوكُمْ إِلَّا أَذًى ۖ وَإِن يُقَاتِلُوكُمْ
يُوَلُّوكُمُ الْأَدْبَارَ ثُمَّ لَا يُنصَرُونَ ﴿١١١﴾

112. ಇವರು ಇದ್ದಲ್ಲೆಲ್ಲಾ ಇವರ ಮೇಲೆ ಛೀಮಾರಿ ಬಿತ್ತು. ಇನ್ನೆಲ್ಲಾದರೂ ಅಲ್ಲಾಹನಲ್ಲಿ ಅಥವಾ ಜನರಲ್ಲಿ ಆಸರೆ ಸಿಕ್ಕಿದರೆ ಆ ಮಾತು ಬೇರೆ.[27] ಇವರು ಅಲ್ಲಾಹನ ಕ್ರೋಧದಿಂದ

ضُرِبَتْ عَلَيْهِمُ الذِّلَّةُ أَيْنَ مَا ثُقِفُوا إِلَّا
بِحَبْلٍ مِّنَ اللَّهِ وَحَبْلٍ مِّنَ النَّاسِ وَبَاءُوا
بِغَضَبٍ مِّنَ اللَّهِ وَضُرِبَتْ عَلَيْهِمُ الْمَسْكَنَةُ ۚ

26. ಇಲ್ಲಿ ಗ್ರಂಥದವರೆಂದರೆ ಯಹೂದಿಯರಾಗಿದ್ದಾರೆ.

27. ಅರ್ಥಾತ್- ಜಗತ್ತಿನಲ್ಲಿ ಅವರಿಗೆ ಸ್ವಲ್ಪ ಶಾಂತಿ ಸಮಾಧಾನ ಪ್ರಾಪ್ತವಾದರೂ ಅದು ಅವರ ಸ್ವಂತ ಬಲದಿಂದ ಗಳಿಸಿದ ಶಾಂತಿ-ಸಮಾಧಾನವಲ್ಲ. ಬದಲಾಗಿ ಅದು ಇತರರ ಸಹಕಾರ ಮತ್ತು ಕೃಪೆಯ ಪರಿಣಾಮವಾಗಿದೆ. ಯಾವುದಾದರೂ ಮುಸ್ಲಿಮ್ ರಾಷ್ಟ್ರ ಅವರಿಗೆ ದೇವನ ಹೆಸರಲ್ಲಿ ಕೆಲವೊಮ್ಮೆ ಆಶ್ರಯ ನೀಡಬಹುದು. ಕೆಲವೊಮ್ಮೆ ಮುಸ್ಲಿಮೇತರ ರಾಷ್ಟ್ರಗಳು ಅವರಿಗೆ ಅಭಯ ನೀಡಬಹುದು. ಹೀಗೆ ಕೆಲವೊಮ್ಮೆ ಅವರಿಗೆ ಲೋಕದಲ್ಲಿ ಪ್ರಾಬಲ್ಯ ಸಾಧಿಸುವ ಅವಕಾಶವೂ ದೊರೆಯಬಹುದು. ಆದರೆ ಅದಾವುದನ್ನೂ ಅವರು ತಮ್ಮ

ಆವರಿಸಲ್ಪಟ್ಟಿದ್ದಾರೆ. ಇವರ ಮೇಲೆ ದಾರಿದ್ರ್ಯ ಮತ್ತು ಪರಾಧೀನತೆಯು ಹೇರಲ್ಪಟ್ಟಿದೆ. ಇವೆಲ್ಲ ಇವರು ಅಲ್ಲಾಹನ ನಿದರ್ಶನಗಳನ್ನು ನಿಷೇಧಿಸುತ್ತಲಿದ್ದುದರಿಂದಲೂ ಪ್ರವಾದಿಗಳನ್ನು ಅನ್ಯಾಯವಾಗಿ ವಧಿಸಿರುವುದರಿಂದಲೂ ಉಂಟಾಗಿವೆ. ಇವರ ಅವಿಧೇಯತೆ ಮತ್ತು ಅತಿರೇಕಗಳ ಪರಿಣಾಮವಿದು.

ذٰلِكَ بِاَنَّهُمْ كَانُوْا يَكْفُرُوْنَ بِاٰيٰتِ اللّٰهِ
وَيَقْتُلُوْنَ الْاَنْۢبِيَآءَ بِغَيْرِ حَقٍّ ؕ ذٰلِكَ
بِمَا عَصَوْا وَّكَانُوْا يَعْتَدُوْنَ ﴿١١٢﴾

113. ಆದರೆ ಗ್ರಂಥದವರೆಲ್ಲರೂ ಒಂದೇ ತೆರನಾಗಿರುವುದಿಲ್ಲ. ಅವರಲ್ಲಿ ನೇರಮಾರ್ಗದಲ್ಲಿ ಸ್ಥಿರವಾಗಿರುವ ಕೆಲವರೂ ಇದ್ದಾರೆ. ಅವರು ರಾತ್ರಿಕಾಲದಲ್ಲಿ ಅಲ್ಲಾಹನ ಸೂಕ್ತಗಳನ್ನು ಪಠಿಸುತ್ತಾರೆ ಮತ್ತು ಅವನ ಮುಂದೆ ಸಾಷ್ಟಾಂಗವೆರಗುತ್ತಾರೆ.

لَيْسُوْا سَوَآءً ؕ مِنْ اَهْلِ الْكِتٰبِ اُمَّةٌ
قَآئِمَةٌ يَّتْلُوْنَ اٰيٰتِ اللّٰهِ اٰنَآءَ الَّيْلِ وَهُمْ
يَسْجُدُوْنَ ﴿١١٣﴾

114. ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುತ್ತಾರೆ. ಒಳಿತಿನ ಆದೇಶವನ್ನೀಯುತ್ತಾರೆ ಪಾಪಕಾರ್ಯಗಳಿಂದ ತಡೆಯುತ್ತಾರೆ ಮತ್ತು ಸತ್ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಇವರು ಸಜ್ಜನರು.

يُؤْمِنُوْنَ بِاللّٰهِ وَالْيَوْمِ الْاٰخِرِ وَيَاْمُرُوْنَ
بِالْمَعْرُوْفِ وَيَنْهَوْنَ عَنِ الْمُنْكَرِ وَيُسَارِعُوْنَ
فِى الْخَيْرٰتِ ؕ وَاُولٰٓئِكَ مِنَ الصّٰلِحِيْنَ ﴿١١٤﴾

115. ಇವರು ಮಾಡುವ ಯಾವ ಸತ್ಕರ್ಮಗಳನ್ನೂ ಕಡೆಗಣಿಸಲಾಗದು. ಅಲ್ಲಾಹನು ಧರ್ಮನಿಷ್ಠರನ್ನು ಚೆನ್ನಾಗಿ ಬಲ್ಲನು.

وَمَا يَفْعَلُوْا مِنْ خَيْرٍ فَلَنْ يُّكْفَرُوْهُ ؕ وَاللّٰهُ
عَلِيْمٌۢ بِالْمُتَّقِيْنَ ﴿١١٥﴾

116. ಸತ್ಯನಿಷೇಧ ನೀತಿಯನ್ನನುಸರಿಸಿದವರಿಗೆ ಅಲ್ಲಾಹನೆದುರು ಅವರ ಸಂಪತ್ತಾಗಲಿ, ಸಂತತಿಯಾಗಲಿ ಏನೂ ಫಲ ಕೊಡಲಾರದು. ಅವರಂತು ನರಕಾಗ್ನಿಯಲ್ಲಿ ಬೀಳುವವರು ಮತ್ತು ಅಲ್ಲೇ ಸದಾಕಾಲ ಉಳಿಯುವರು.

اِنَّ الَّذِيْنَ كَفَرُوْا لَنْ تُغْنِىَ عَنْهُمْ اَمْوَالُهُمْ
وَلَاۤ اَوْلَادُهُمْ مِّنَ اللّٰهِ شَيْئًا ؕ وَاُولٰٓئِكَ
اَصْحٰبُ النَّارِ ۚ هُمْ فِيْهَا خٰلِدُوْنَ ﴿١١٦﴾

117. ಅವರು ತಮ್ಮ ಇಹಜೀವನದಲ್ಲಿ ಖರ್ಚು ಮಾಡುತ್ತಿರುವುದರ ಉಪಮೆಯು ಹಿಮಮಯ ಗಾಳಿಯಂತೆಯೂ ಅದು ತಮ್ಮ ಮೇಲೆ ತಾವೇ ಅಕ್ರಮವೆಸಗಿಕೊಂಡವರ ಹೊಲದ ಮೇಲೆ ಬೀಸಿ, ಅದನ್ನು ನಾಶ ಮಾಡಿಬಿಟ್ಟಂತೆಯೂ ಇರುತ್ತದೆ. ಅಲ್ಲಾಹನು ಅವರ ಮೇಲೆ ಅಕ್ರಮವೆಸಗಲಿಲ್ಲ. ವಾಸ್ತವದಲ್ಲಿ ಇವರು ಸ್ವತಃ ತಮ್ಮ ಮೇಲೆ ಅಕ್ರಮವೆಸಗುತ್ತಿದ್ದಾರೆ.

مَثَلُ مَا يُنْفِقُوْنَ فِىْ هٰذِهِ الْحَيٰوةِ الدُّنْيَا
كَمَثَلِ رِيْحٍ فِيْهَا صِرٌّ اَصَابَتْ حَرْثَ
قَوْمٍ ظَلَمُوْۤا اَنْفُسَهُمْ فَاَهْلَكَتْهُ ؕ وَمَا ظَلَمَهُمُ
اللّٰهُ وَلٰكِنْ اَنْفُسَهُمْ يَظْلِمُوْنَ ﴿١١٧﴾

118. ಓ ಸತ್ಯವಿಶ್ವಾಸಿಗಳೇ, ನಿಮ್ಮವರ ಹೊರತು ಅನ್ಯರನ್ನು ನಿಮ್ಮ ರಹಸ್ಯಜ್ಞಾನಿಗಳನ್ನಾಗಿ ಮಾಡಿಕೊಳ್ಳಬೇಡಿರಿ. ಅವರು ನಿಮ್ಮ

يٰۤاَيُّهَا الَّذِيْنَ اٰمَنُوْا لَا تَتَّخِذُوْا بِطَانَةً
مِّنْ دُوْنِكُمْ لَا يَاْلُوْنَكُمْ خَبَالًا ؕ وَدُّوْا مَا

ತೋಳ್ಬಲದಿಂದ ಸಾಧಿಸಿದ್ದಲ್ಲ. ಬದಲಾಗಿ ಅಕ್ಕಪಕ್ಕದವರ ಪಾದಪೂಜೆ ಮಾಡುವ ಮೂಲಕ ಸಾಧಿಸಿದ್ದಾರೆ. ಅಮೇರಿಕ, ಬ್ರಿಟನ್ ಮತ್ತು ರಷ್ಯಾದ ಸಹಕಾರದಿಂದ ಸ್ಥಾಪಿತವಾದ 'ಇಸ್ರೇಲ್' ಎಂಬ ಯಹೂದಿ ಸಾಮ್ರಾಜ್ಯವೂ ಇಂದು ಅದೇ ಸ್ಥಿತಿಯಲ್ಲಿದೆ.

ದುಃಸ್ಥಿತಿಯಿಂದ ಲಾಭಪಡೆಯುವ ಯಾವ ಸಂದರ್ಭವನ್ನೂ ಕಳೆದುಕೊಳ್ಳುವುದಿಲ್ಲ. ನಿಮಗೆ ಹಾನಿಯುಂಟಾಗುವ ವಿಷಯವೇ ಅವರಿಗೆ ಪ್ರಿಯವಾಗಿರುತ್ತದೆ. ಅವರ ಹೃದಯದಲ್ಲಿರುವ ದ್ವೇಷವು ಅವರ ಬಾಯಿಯಿಂದ ಹೊರ ಹೊಮ್ಮುತ್ತದೆ ಮತ್ತು ಅವರು ತಮ್ಮ ಹೃದಯದಲ್ಲಿ ಅಡಗಿಸಿಕೊಂಡಿರುವುದು ಅದಕ್ಕಿಂತಲೂ ಕಠಿಣತರವಾಗಿದೆ. ನಾವು ನಿಮಗೆ ಸುಸ್ಪಷ್ಟ ಮಾರ್ಗದರ್ಶನಗಳನ್ನು ನೀಡಿದ್ದೇವೆ. ನೀವು ವಿಚಾರವಂತರಾಗಿದ್ದರೆ.

عَنِتُّمْ ۚ قَدْ بَدَتِ الْبَغْضَاءُ مِنْ أَفْوَاهِهِمْ ۖ
وَمَا تُخْفِي صُدُورُهُمْ أَكْبَرُ ۚ قَدْ بَيَّنَّا
لَكُمُ الْآيَاتِ ۖ إِنْ كُنْتُمْ تَعْقِلُونَ ﴿١١٨﴾

119. (ಇಂತಹವರೊಂದಿಗೆ ಸಂಬಂಧವಿರಿಸಿಕೊಳ್ಳುವ ವಿಷಯದಲ್ಲಿ ಜಾಗರೂಕರಾಗಿರಿ.) ನೀವು ಅವರನ್ನು ಪ್ರೀತಿಸುತ್ತೀರಿ. ಆದರೆ ಅವರು ನಿಮ್ಮನ್ನು ಪ್ರೀತಿಸುವುದಿಲ್ಲ. ವಸ್ತುತಃ ನೀವು ಎಲ್ಲ ದೇವಗ್ರಂಥಗಳನ್ನೂ ಸಮ್ಮತಿಸುತ್ತೀರಿ. ಅವರು ನಿಮ್ಮನ್ನು ಭೇಟಿಯಾದಾಗ, "ನಾವು ಸಹ (ನಿಮ್ಮ ಪ್ರವಾದಿ ಮತ್ತು ಗ್ರಂಥವನ್ನು) ಒಪ್ಪಿಕೊಂಡೆವು" ಎನ್ನುತ್ತಾರೆ. ಆದರೆ ನಿಮ್ಮನ್ನು ಬಿಟ್ಟಗಲಿದಾಗಲಂತು ನಿಮ್ಮ ವಿರುದ್ಧ ಕ್ರೋಧಾತಿರೇಕದಿಂದ ತಮ್ಮ ಬೆರಳುಗಳನ್ನು ತಾವೇ ಕಚ್ಚಿಕೊಳ್ಳಲಾರಂಭಿಸುತ್ತಾರೆ. "ನಿಮ್ಮ ಕ್ರೋಧದಲ್ಲಿ ನೀವೇ ಬೆಂದು ಸಾಯಿರಿ" ಎಂದು ಅವರೊಡನೆ ಹೇಳಿರಿ. ಅಲ್ಲಾಹನು ಹೃದಯಗಳೊಳಗೆ ಅವಿತಿರುವ ರಹಸ್ಯಗಳನ್ನೂ ತಿಳಿದಿರುತ್ತಾನೆ.

هَا أَنْتُمْ أُولَاءِ تُحِبُّونَهُمْ وَلَا يُحِبُّونَكُمْ
وَتُؤْمِنُونَ بِالْكِتَابِ كُلِّهِ ۚ وَإِذَا لَقُوكُمْ
قَالُوا آمَنَّا ۖ وَإِذَا خَلَوْا عَضُّوا عَلَيْكُمُ
الْأَنَامِلَ مِنَ الْغَيْظِ ۚ قُلْ مُوتُوا بِغَيْظِكُمْ ۗ
إِنَّ اللَّهَ عَلِيمٌ بِذَاتِ الصُّدُورِ ﴿١١٩﴾

120. ನಿಮಗೆ ಹಿತವಾದರೆ ಅವರಿಗೆ ಅಹಿತವೆನಿಸುತ್ತದೆ ಮತ್ತು ನಿಮ್ಮ ಮೇಲೇನಾದರೂ ವಿಪತ್ತು ಬಂದರೆ ಅವರು ಸಂತೋಷಪಡುತ್ತಾರೆ. ಆದರೆ ನೀವು ಸಹನೆಯಿಂದ ವರ್ತಿಸಿದರೆ ಮತ್ತು ಅಲ್ಲಾಹನಿಗೆ ಭಯಪಟ್ಟು ಕಾರ್ಯವೆಸಗುತ್ತಿದ್ದರೆ ಅವರ ಯಾವ ಹಂಚಿಕೆಯೂ ನಿಮ್ಮ ವಿರುದ್ಧ ಪರಿಣಾಮವನ್ನುಂಟು ಮಾಡಲಾರದು. ಅವರು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹನು ಆವರಿಸಿದ್ದಾನೆ.

إِنْ تَمْسَسْكُمْ حَسَنَةٌ تَسُؤْهُمْ وَإِنْ
تُصِبْكُمْ سَيِّئَةٌ يَفْرَحُوا بِهَا ۖ وَإِنْ
تَصْبِرُوا وَتَتَّقُوا لَا يَضُرُّكُمْ كَيْدُهُمْ
شَيْئًا ۗ إِنَّ اللَّهَ بِمَا يَعْمَلُونَ مُحِيطٌ ﴿١٢٠﴾

121. (ಓ ಪೈಗಂಬರರೇ, ಮುಸ್ಲಿಮರ ಮುಂದೆ ಆ ಸಂದರ್ಭದ ಪ್ರಸ್ತಾಪವೆತ್ತಿರಿ) ನೀವು ಮುಂಜಾನೆ ನಿಮ್ಮ ಮನೆಯಿಂದ ಹೊರಟಿದ್ದಿರಿ ಮತ್ತು (ಉಹುದ್ ಬಯಲಿನಲ್ಲಿ) ಮುಸ್ಲಿಮರನ್ನು ಯುದ್ಧಕ್ಕಾಗಿ ಅಲ್ಲಲ್ಲಿ ನೇಮಕ ಮಾಡುತ್ತಿದ್ದಿರಿ. ಅಲ್ಲಾಹನು ಸರ್ವಶ್ರುತ ನಾಗಿರುತ್ತಾನೆ ಮತ್ತು ಎಲ್ಲವನ್ನೂ ಬಲ್ಲವನಾಗಿರುತ್ತಾನೆ.

وَإِذْ غَدَوْتَ مِنْ أَهْلِكَ تُبَوِّئُ الْمُؤْمِنِينَ
مَقَاعِدَ لِلْقِتَالِ ۗ وَاللَّهُ سَمِيعٌ عَلِيمٌ ﴿١٢١﴾

122. ನಿಮ್ಮಲ್ಲಿ ಎರಡು ತಂಡಗಳು ಭೀರುತನ ತೋರಿಸಲುದ್ಯುಕ್ತರಾಗಿ

إِذْ هَمَّتْ طَائِفَتَانِ مِنْكُمْ أَنْ تَفْشَلَا

ಬಿಟ್ಟಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರ ಸಹಾಯಕ್ಕೆ ಅಲ್ಲಾಹನು ಉಪಸ್ಥಿತನಿದ್ದನು ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆಯನ್ನಿಡಬೇಕು.

وَاللّٰهُ وَلِيُّهُمَا ۗ وَعَلَى اللّٰهِ فَلْيَتَوَكَّلِ الْمُؤْمِنُوْنَ ﴿١٢٢﴾

123. ಇದಕ್ಕೆ ಮುಂಚೆ 'ಬದ್ರ್' ಯುದ್ಧದಲ್ಲಿ ನೀವು ದುರ್ಬಲರಾಗಿದ್ದರೂ ಅಲ್ಲಾಹನು ನಿಮಗೆ ಸಹಾಯ ಮಾಡಿದ್ದನು. ಆದುದರಿಂದ ನೀವು ಅಲ್ಲಾಹನ ಕೃತಘ್ನತೆಯಿಂದ ದೂರವಿರಬೇಕು. ಮುಂದೆ ನೀವು ಕೃತಜ್ಞರಾಗುವಿರೆಂದು ಆಶಿಸಲಾಗಿದೆ.

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ ۚ فَاتَّقُوا اللّٰهَ لَعَلَّكُمْ تَشْكُرُوْنَ ﴿١٢٣﴾

124. (ಓ ಪೈಗಂಬರರೇ,) "ಅಲ್ಲಾಹನು ಮೂರು ಸಾವಿರ ದೇವಚರರನ್ನು ಇಳಿಸಿ ಸಹಾಯ ಮಾಡಿದರೆ ನಿಮಗೆ ಸಾಲದೇ?" ಎಂದು ನೀವು ಸತ್ಯವಿಶ್ವಾಸಿಗಳೊಡನೆ ಹೇಳುತ್ತಿದ್ದುದನ್ನು ಸ್ಮರಿಸಿರಿ.

اِذْ تَقُوْلُ لِلْمُؤْمِنِيْنَ اَلَنْ يَّكْفِيَكُمْ اَنْ يُّمِدَّكُمْ رَبُّكُمْ بِثَلٰثَةِ اٰلٰفٍ مِّنَ الْمَلٰٓئِكَةِ مُنْزَلِيْنَ ۗ ﴿١٢٤﴾

125. ನೀವು ಸಹನೆ ತಾಳಿದರೆ ಮತ್ತು ಅಲ್ಲಾಹನನ್ನು ಭಯಪಟ್ಟು ವರ್ತಿಸಿದರೆ, ಶತ್ರುಗಳು ನಿಮ್ಮ ಮೇಲೇರಿ ಬಂದೊಡನೆ ನಿಸ್ಸಂದೇಹವಾಗಿಯೂ ನಿಮ್ಮ ಪ್ರಭುವು (ಮೂರು ಸಾವಿರವಲ್ಲ) ಐದು ಸಾವಿರ ಗುರಿತಪ್ಪದ ದೇವಚರರ ಮೂಲಕ ನಿಮಗೆ ಸಹಾಯ ಮಾಡುವನು.

بَلٰٓى ۙ اِنْ تَصْبِرُوْا وَتَتَّقُوْا وَيَاْتُوْكُمْ مِّنْ فَوْرِهِمْ هٰذَا يُمْدِدْكُمْ رَبُّكُمْ بِخَمْسَةِ اٰلٰفٍ مِّنَ الْمَلٰٓئِكَةِ مُسَوِّمِيْنَ ﴿١٢٥﴾

126 ನೀವು ಸಂತಸ ಪಡಲಿಕ್ಕಾಗಿಯೂ ನಿಮ್ಮ ಮನಶ್ಶಾಂತಿಗಾಗಿಯೂ ಅಲ್ಲಾಹನು ನಿಮಗೆ ಈ ವಿಷಯವನ್ನು ಅರುಹಿದನು. ವಿಜಯ ವಾದರೋ ಪ್ರಬಲನೂ ಯುಕ್ತಿಪೂರ್ಣನೂ ಆಗಿರುವ ಅಲ್ಲಾಹನ ವತಿಯಿಂದಲೇ ಆಗಿರುತ್ತದೆ.

وَمَا جَعَلَهُ اللّٰهُ اِلَّا بُشْرٰى لَكُمْ وَلِتَطْمَئِنَّ قُلُوْبُكُمْ بِهٖ ۗ وَمَا النَّصْرُ اِلَّا مِنْ عِنْدِ اللّٰهِ الْعَزِيْزِ الْحَكِيْمِ ۙ ﴿١٢٦﴾

127. ಸತ್ಯನಿಷೇಧ ಮಾರ್ಗದಲ್ಲಿ ನಡೆಯುವವರ ಒಂದು ಭಾಗವನ್ನು ಕತ್ತರಿಸಲಿಕ್ಕಾಗಿ ಅಥವಾ ಅವರು ಆಶಾಭಗ್ನತೆಯೊಂದಿಗೆ ಹಿಮ್ಮೆಟ್ಟಲಿಕ್ಕಾಗಿ (ಈ ಸಹಾಯವನ್ನು ಅವನು ನಿಮಗೆ ಒದಗಿಸುವನು.)

لِيَقْطَعَ طَرَفًا مِّنَ الَّذِيْنَ كَفَرُوْٓا اَوْ يَكْبِتَهُمْ فَيَنْقَلِبُوْا خَآئِبِيْنَ ﴿١٢٧﴾

128. (ಓ ಪೈಗಂಬರರೇ,) ತೀರ್ಮಾನದ ಅಧಿಕಾರದಲ್ಲಿ ನಿಮ್ಮ ಪಾಲೇನೂ ಇಲ್ಲ. ಅವರು ಅಕ್ರಮಿಗಳಾಗಿರುವುದರಿಂದ, ತನಗೆ ಇಷ್ಟಬಂದವರನ್ನು ಕ್ಷಮಿಸುವ ಮತ್ತು ಇಷ್ಟಬಂದವರನ್ನು ಶಿಕ್ಷಿಸುವ ಅಧಿಕಾರ ಅಲ್ಲಾಹನಿಗಿದೆ.

لَيْسَ لَكَ مِنَ الْاَمْرِ شَيْءٌ اَوْ يَتُوْبَ عَلَيْهِمْ اَوْ يُعَذِّبَهُمْ فَاِنَّهُمْ ظٰلِمُوْنَ ﴿١٢٨﴾

129. ಭೂಮಿ-ಆಕಾಶಗಳಲ್ಲಿ ಏನೆಲ್ಲ ಇರುವುದೋ ಅವುಗಳ ಮಾಲಕನು ಅಲ್ಲಾಹನು. ಅವನು, ಇಷ್ಟಬಂದವರನ್ನು ಕ್ಷಮಿಸಬಲ್ಲನು, ಇಷ್ಟಬಂದವರನ್ನು ಶಿಕ್ಷಿಸಬಲ್ಲನು. ಅವನು ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ.[28]

وَلِلّٰهِ مَا فِى السَّمٰوٰتِ وَمَا فِى الْاَرْضِ ۗ يَغْفِرُ لِمَنْ يَّشَآءُ وَيُعَذِّبُ مَنْ يَّشَآءُ ۗ وَاللّٰهُ غَفُوْرٌ رَّحِيْمٌ ﴿١٢٩﴾

130. ಓ ಸತ್ಯವಿಶ್ವಾಸಿಗಳೇ, ಬಡ್ಡಿ-ಮಾರ್ಬಡ್ಡಿ ತಿನ್ನುವುದನ್ನು ಬಿಟ್ಟು ಬಿಡಿರಿ ಮತ್ತು ಅಲ್ಲಾಹನನ್ನು ಭಯಪಡಿರಿ. (ಆಗ) ನೀವು ಕೃಪೆಗೆ ಅರ್ಹರಾಗಿರುವಿರೆಂದು ಆಶಿಸಬಹುದು.

يٰٓاَيُّهَا الَّذِيْنَ اٰمَنُوْا لَا تَاْكُلُوا الرِّبٰوٓا
اَضْعَافًا مُّضٰعَفَةً ۠ وَّاتَّقُوا اللّٰهَ لَعَلَّكُمْ تُفْلِحُوْنَ ﴿۱۳۰﴾

131. ಸತ್ಯನಿಷೇಧಿಗಳಿಗಾಗಿ ಸಿದ್ಧಗೊಳಿಸಲ್ಪಟ್ಟಿರುವ ಆ ನರಕಾಗ್ನಿಗೆ ಅಂಜಿರಿ.

وَاتَّقُوا النَّارَ الَّتِيْٓ اُعِدَّتْ لِلْكٰفِرِيْنَ ﴿۱۳۱﴾

132 ಮತ್ತು ಅಲ್ಲಾಹನ ಹಾಗೂ ಸಂದೇಶವಾಹಕರ ಆಜ್ಞೆಯನ್ನು ಪಾಲಿಸಿರಿ. ನೀವು ಕೃಪಾರ್ಹರಾಗುವಿರೆಂದು ನಿರೀಕ್ಷಿಸಬಹುದು.

وَاَطِيْعُوا اللّٰهَ وَالرَّسُوْلَ لَعَلَّكُمْ تُرْحَمُوْنَ ﴿۱۳۲﴾

133 ನಿಮ್ಮ ಪ್ರಭುವಿನ ಕ್ಷಮೆಯ ಕಡೆಗೆ ಮತ್ತು ಭೂಮಿ-ಆಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸಿರಿ. ಅದು ದೇವಭಯವುಳ್ಳವರಿಗಾಗಿ ಸಿದ್ಧಗೊಳಿಸಲ್ಪಟ್ಟಿರುತ್ತದೆ.

وَسَارِعُوْٓا اِلٰى مَغْفِرَةٍ مِّنْ رَّبِّكُمْ وَجَنَّةٍ
عَرْضُهَا السَّمٰوٰتُ وَالْاَرْضُ ۙ اُعِدَّتْ لِلْمُتَّقِيْنَ ﴿۱۳۳﴾

134. ಅವರು ಸ್ಥಿತಿವಂತರಾಗಿರುವಾಗಲೂ ದುಸ್ಥಿತಿಯಲ್ಲಿರುವಾಗಲೂ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಾರೆ, ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ.- ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವರು.

الَّذِيْنَ يُنْفِقُوْنَ فِي السَّرَّاۗءِ وَالضَّرَّاۗءِ
وَالْكٰظِمِيْنَ الْغَيْظَ وَالْعَافِيْنَ عَنِ النَّاسِ ۭ
وَاللّٰهُ يُحِبُّ الْمُحْسِنِيْنَ ﴿۱۳۴﴾

135. ಅವರಿಂದ ಎಂದಾದರೂ ಯಾವುದಾದರೂ ಅಶ್ಲೀಲ ಕಾರ್ಯಗಳು ಸಂಭವಿಸಿ ಹೋದಾಗ ಅಥವಾ ಅವರು ಯಾವುದಾದರೂ ಪಾಪಕಾರ್ಯ ಮಾಡಿ ತಮ್ಮ ಮೇಲೆ ತಾವೇ ಅಕ್ರಮವೆಸಗಿ ಕೊಂಡಾಗ ಅವರಿಗೆ ತಕ್ಷಣವೇ ಅಲ್ಲಾಹನ ಸ್ಮರಣೆಯುಂಟಾಗಿ ಬಿಡುತ್ತದೆ ಮತ್ತು ಅವರು ಅವನೊಡನೆ ತಮ್ಮ ಅಪರಾಧಗಳಿಗೆ ಕ್ಷಮೆ ಯಾಚಿಸುತ್ತಾರೆ. - ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವವರು ಇನ್ನಾರಿದ್ದಾರೆ? - ಮತ್ತು ಅವರು ತಿಳಿದೂ ತಿಳಿದೂ ತಾವು ಮಾಡಿದ ಅಪರಾಧದ ಬಗ್ಗೆ ಪಟ್ಟು ಹಿಡಿ ಯುವುದಿಲ್ಲ.

وَالَّذِيْنَ اِذَا فَعَلُوْا فَاحِشَةً اَوْ ظَلَمُوْٓا
اَنْفُسَھُمْ ذَكَرُوا اللّٰهَ فَاسْتَغْفَرُوْا لِذُنُوْبِهِمْ ۠
وَمَنْ يَّغْفِرُ الذُّنُوْبَ اِلَّا اللّٰهُ ڟ وَلَمْ
يُصِرُّوْا عَلٰي مَا فَعَلُوْا وَھُمْ يَعْلَمُوْنَ ﴿۱۳۵﴾

136. ಅಂಥವರಿಗೆ ಅವರ ಪ್ರಭುವಿನ ಬಳಿ ಇರುವ ಪ್ರತಿಫಲವು ಕ್ಷಮೆ

اُولٰۗىِٕكَ جَزَاۗؤُھُمْ مَّغْفِرَةٌ مِّنْ رَّبِّهِمْ

28. ಉಹುದ್ ಯುದ್ಧದಲ್ಲಿ ಪ್ರವಾದಿವರ್ಯರು(ಸ) ಗಾಯಗೊಂಡಾಗ ಅವರ ಬಾಯಿಯಿಂದ "ತನ್ನ ಪ್ರವಾದಿಯನ್ನು ಗಾಯಗೊಳಿಸುವ ಜನಾಂಗ ಹೇಗೆ ಯಶಸ್ವಿಯಾದೀತು" ಎಂಬ ಶಾಪದ ಮಾತುಗಳು ಹೊರಡುತ್ತವೆ. ಈ ಸೂಕ್ತಗಳು ಅದಕ್ಕೆ ಉತ್ತರವಾಗಿ ಅವತೀರ್ಣಗೊಂಡಿವೆ.

ಮತ್ತು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಾಗಿವೆ. ಅಲ್ಲಿ ಅವರು ಸದಾಕಾಲವೂ ವಾಸಿಸುವರು. ಸತ್ಕರ್ಮ ಮಾಡುವವರಿಗೆ ಇರುವ ಪ್ರತಿಫಲವು ಎಷ್ಟೊಂದು ಉತ್ತಮ!

وَجَنّٰتٌ تَجْرِيْ مِنْ تَحْتِهَا الْاَنْهٰرُ خٰلِدِيْنَ فِيْهَا ۭ وَنِعْمَ اَجْرُ الْعٰمِلِيْنَ ١٣٦

137. ನಿಮಗಿಂತ ಮುಂಚೆ ಅನೇಕ ಯುಗಗಳು ಕಳೆದುಹೋಗಿವೆ. ಅಂದು (ಅಲ್ಲಾಹನ ಆದೇಶಗಳನ್ನು) ಸುಳ್ಳಾಗಿಸಿದ ಜನರ ಪರಿಣಾಮವೇನಾಯಿತೆಂಬುದನ್ನು ಭೂಮಿಯಲ್ಲಿ ಸುತ್ತಾಡಿ ಕಂಡುಕೊಳ್ಳಿರಿ.

قَدْ خَلَتْ مِنْ قَبْلِكُمْ سُنَنٌ ۙ فَسِيْرُوْا فِي الْاَرْضِ فَانْظُرُوْا كَيْفَ كَانَ عَاقِبَةُ الْمُكَذِّبِيْنَ ١٣٧

138. ಇದು ಜನರಿಗೊಂದು ಸುವ್ಯಕ್ತ ಎಚ್ಚರಿಕೆ ಮತ್ತು ಅಲ್ಲಾಹನನ್ನು ಭಯಪಡುವವರಿಗೆ ಸನ್ಮಾರ್ಗದರ್ಶನ ಹಾಗೂ ಉಪದೇಶ.

هٰذَا بَيَانٌ لِّلنَّاسِ وَهُدًى وَّمَوْعِظَةٌ لِّلْمُتَّقِيْنَ ١٣٨

139. ನೀವು ಧೈರ್ಯಗುಂದಬೇಡಿರಿ, ವ್ಯಥೆ ಪಡಲೂಬೇಡಿರಿ, ನೀವು ವಿಶ್ವಾಸಿಗಳಾಗಿದ್ದರೆ ನೀವೇ ವಿಜಯಿಗಳಾಗುವಿರಿ.

وَلَا تَهِنُوْا وَلَا تَحْزَنُوْا وَاَنْتُمُ الْاَعْلَوْنَ اِنْ كُنْتُمْ مُّؤْمِنِيْنَ ١٣٩

140. ಈಗ ನಿಮಗೆ ಆಘಾತವಾಗಿದ್ದರೆ ಇದಕ್ಕಿಂತ ಮುಂಚೆ ಇಂತಹದೇ ಆಘಾತ ನಿಮ್ಮ ವಿರೋಧಿ ತಂಡಕ್ಕೂ ಉಂಟಾಗಿದೆ.[29] ಜನರ ಮಧ್ಯೆ ನಾವು ತಿರುಗಿಸುತ್ತಲೇ ಇರುವ ಕಾಲಚಕ್ರವಿದು. ನಿಮ್ಮಲ್ಲಿ ನಿಜವಾದ ವಿಶ್ವಾಸಿಗಳು ಯಾರೆಂಬುದನ್ನು ನೋಡುವ ಸಲುವಾಗಿಯೇ ಅಲ್ಲಾಹನು ಈ ಸಂದರ್ಭವನ್ನು ನಿಮ್ಮ ಮುಂದೆ ತಂದಿದ್ದನು ಮತ್ತು ನಿಜಕ್ಕೂ ಅವನು (ಸತ್ಯದ) ಸಾಕ್ಷ್ಯ ವಹಿಸುವವರನ್ನು ಆಯ್ಕೆ ಮಾಡಿಕೊಳ್ಳಲು ಬಯಸುತ್ತಿದ್ದನು.[30]- ಏಕೆಂದರೆ ಅಲ್ಲಾಹನು ಅಕ್ರಮಿಗಳನ್ನು ಮೆಚ್ಚುವುದಿಲ್ಲ.

اِنْ يَّمْسَسْكُمْ قَرْحٌ فَقَدْ مَسَّ الْقَوْمَ قَرْحٌ مِّثْلُهٗ ۭ وَتِلْكَ الْاَيَّامُ نُدَاوِلُهَا بَيْنَ النَّاسِ ۚ وَلِيَعْلَمَ اللّٰهُ الَّذِيْنَ اٰمَنُوْا وَيَتَّخِذَ مِنْكُمْ شُهَدَاۗءَ ۭ وَاللّٰهُ لَا يُحِبُّ الظّٰلِمِيْنَ ١٤٠

141. ಅವನು ಈ ಸತ್ವ ಪರೀಕ್ಷೆಯ ಮೂಲಕ ಸತ್ಯವಿಶ್ವಾಸಿಗಳನ್ನು ಬೇರ್ಪಡಿಸಿ ಸತ್ಯನಿಷೇಧಿಗಳನ್ನು ನಿಸ್ತೇಜಗೊಳಿಸಲಿಚ್ಛಿಸುತ್ತಿದ್ದನು.

وَلِيُمَحِّصَ اللّٰهُ الَّذِيْنَ اٰمَنُوْا وَيَمْحَقَ الْكٰفِرِيْنَ ١٤١

142. ನೀವು ನಿರಾಯಾಸವಾಗಿ ಸ್ವರ್ಗವನ್ನು ಪ್ರವೇಶಿಸುವಿರೆಂದು ಭಾವಿಸಿರುವಿರಾ? ವಸ್ತುತಃ ನಿಮ್ಮಲ್ಲಿ ಯಾರೆಲ್ಲ ಅಲ್ಲಾಹನ

اَمْ حَسِبْتُمْ اَنْ تَدْخُلُوا الْجَنَّةَ وَلَمَّا

29. ಇದು ಬದ್ರ್ ಯುದ್ಧದ ಕಡೆಗಿರುವ ಸೂಚನೆಯಾಗಿದೆ. ಆಗ ಏಟು ತಿಂದು ಸತ್ಯನಿಷೇಧಿಗಳು ಧೈರ್ಯಗುಂದದಿರುವಾಗ ಉಹುದ್ ಯುದ್ಧದಲ್ಲಿ ಏಟು ತಿಂದು ನೀವೇಕೆ ಎದೆಗುಂದಿದ್ದೀರಿ? ಎನ್ನುವುದು ಇದರ ತಾತ್ಪರ್ಯವಾಗಿದೆ.

30. ಮೂಲದಲ್ಲಿ ಪ್ರಯೋಗವಾಗಿರುವ ಪದಗಳ ಅರ್ಥವು 'ನಿಮ್ಮಿಂದ ಕೆಲವು ಹುತಾತ್ಮರನ್ನು ಪಡೆಯಬಯಸಿದ್ದನು' ಎಂದಾಗಿದೆ. ಅಂದರೆ ಅಲ್ಲಾಹನು ಕೆಲವರಿಗೆ ಹುತಾತ್ಮತೆಯ ಸ್ಥಾನ ನೀಡಬಯಸಿದ್ದನು. ಇನ್ನೊಂದು ಅರ್ಥ ಸತ್ಯವಿಶ್ವಾಸಿಗಳು ಮತ್ತು ಕಪಟವಿಶ್ವಾಸಿಗಳಿಂದ ಕೂಡಿದ ನಿಮ್ಮ ಸಮೂಹದಿಂದ ಅಲ್ಲಾಹನು 'ಶುಹದಾಅ ಅಲನ್ನಾಸ್'ರನ್ನು (ಜನರ ಮೇಲೆ ಸತ್ಯಸಾಕ್ಷ್ಯ ವಹಿಸುವವರು) ಪ್ರತ್ಯೇಕವಾಗಿ ಆರಿಸಬಯಸಿದ್ದನು' ಎಂದಾಗಿದೆ. ಅರ್ಥಾತ್ ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ನೀಡಿರುವ ಉನ್ನತ ಪದವಿಗೆ ಅರ್ಹರಾದಂತಹ ವ್ಯಕ್ತಿಗಳನ್ನು ಆರಿಸಬಯಸಿದ್ದನು.

يَعْلَمِ اللّٰهُ الَّذِيْنَ جٰهَدُوْا مِنْكُمْ وَيَعْلَمَ
الصّٰبِرِيْنَ ﴿١٤٢﴾

ಮಾರ್ಗದಲ್ಲಿ ಹೋರಾಟ ನಡೆಸುವವರೂ ಅದಕ್ಕಾಗಿ ಸಹನೆ ಪಡುವವರೂ ಇದ್ದಾರೆಂದು ಅವನು ಇನ್ನೂ ಕಾಣಲೇ ಇಲ್ಲ.

وَلَقَدْ كُنْتُمْ تَمَنَّوْنَ الْمَوْتَ مِنْ قَبْلِ
اَنْ تَلْقَوْهُ ۖ فَقَدْ رَاَيْتُمُوْهُ وَاَنْتُمْ
تَنْظُرُوْنَ ﴿١٤٣﴾

143. ನೀವಂತು ಮರಣವನ್ನು ಅಪೇಕ್ಷಿಸುತ್ತಿದ್ದಿರಿ. ಆದರೆ, ಅದು ಮರಣವು ಪ್ರತ್ಯಕ್ಷವಾಗಿ ಬಾರದಿದ್ದ ಸಮಯವಾಗಿತ್ತು. ಇದೋ ಈಗ ಅದು ನಿಮ್ಮ ಮುಂದೆ ಬಂದಿತ್ತು ಮತ್ತು ನೀವು ಅದನ್ನು ಕಣ್ಣಾರೆ ಕಂಡುಕೊಂಡಿರಿ.

وَمَا مُحَمَّدٌ اِلَّا رَسُوْلٌ ۚ قَدْ خَلَتْ مِنْ
قَبْلِهِ الرُّسُلُ ؕ اَفَاۡئِنْ مَّاتَ اَوْ قُتِلَ
انْقَلَبْتُمْ عَلٰۤى اَعْقَابِكُمْ ؕ وَمَنْ يَّنْقَلِبْ
عَلٰى عَقِبَيْهِ فَلَنْ يَّضُرَّ اللّٰهَ شَيْـًٔا ؕ
وَسَيَجْزِى اللّٰهُ الشّٰكِرِيْنَ ﴿١٤٤﴾

144. ಮುಹಮ್ಮದ್‌ರು ಓರ್ವ ಸಂದೇಶವಾಹಕರೇ ವಿನಾ ಇನ್ನೇನೂ ಆಗಿರುವುದಿಲ್ಲ. ಅವರಿಗಿಂತ ಮುಂಚೆ ಇತರ ಸಂದೇಶವಾಹಕರೂ ಗತಿಸಿ ಹೋಗಿದ್ದಾರೆ. ಹಾಗಿರುವಾಗ ಅವರು ಮರಣ ಹೊಂದಿದರೆ ಅಥವಾ ವಧಿಸಲ್ಪಟ್ಟರೆ ನೀವು ಮರಳಿ ಹೋಗುವಿರಾ? ನೆನಪಿಡಿರಿ! ಹಿಂದಕ್ಕೆ ಮರಳುವವನು ಅಲ್ಲಾಹನಿಗೇನೂ ನಷ್ಟವುಂಟು ಮಾಡಲಾರ. ಅಲ್ಲಾಹನ ಕೃತಜ್ಞದಾಸರಾಗಿರುವವರಿಗೆ ಅವನು ಅದರ ಪ್ರತಿಫಲ ನೀಡುವನು.

وَمَا كَانَ لِنَفْسٍ اَنْ تَمُوْتَ اِلَّا بِاِذْنِ اللّٰهِ
كِتٰبًا مُّؤَجَّلًا ؕ وَمَنْ يُّرِدْ ثَوَابَ الدُّنْيَا نُؤْتِهٖ
مِنْهَا ۚ وَمَنْ يُّرِدْ ثَوَابَ الْاٰخِرَةِ نُؤْتِهٖ
مِنْهَا ؕ وَسَنَجْزِى الشّٰكِرِيْنَ ﴿١٤٥﴾

145. ಯಾವ ಜೀವಿಯೂ ಅಲ್ಲಾಹನ ಅನುಮತಿ ಹೊಂದದೆ ಸಾಯಲಾರದು. ಮರಣದ ಸಮಯವಂತು ಬರೆದಿಡಲ್ಪಟ್ಟಿದೆ. ಐಹಿಕ ಪ್ರತಿಫಲಾಪೇಕ್ಷೆಯಿಂದ ಕೆಲಸ ಮಾಡುವವನಿಗೆ ನಾವು ಇಹದಲ್ಲಿಯೇ ಕೊಡುವೆವು ಮತ್ತು ಪಾರಲೌಕಿಕ ಪ್ರತಿಫಲಾಪೇಕ್ಷೆಯಿಂದ ಕೆಲಸ ಮಾಡುವವನು ಅದನ್ನು ಪರಲೋಕದಲ್ಲಿ ಪಡೆಯುವನು ಮತ್ತು ಕೃತಜ್ಞರಿಗೆ ನಾವು ಅದರ ಪ್ರತಿಫಲವನ್ನು ಖಂಡಿತವಾಗಿಯೂ ದಯಪಾಲಿಸುವೆವು.

وَكَاَيِّنْ مِّنْ نَّبِىٍّ قٰتَلَ ۙ مَعَهٗ رِبِّيُّوْنَ
كَثِيْرٌ ۚ فَمَا وَهَنُوْا لِمَاۤ اَصَابَهُمْ فِىْ سَبِيْلِ
اللّٰهِ وَمَا ضَعُفُوْا وَمَا اسْتَكَانُوْا ؕ وَاللّٰهُ
يُحِبُّ الصّٰبِرِيْنَ ﴿١٤٦﴾

146. ಇದಕ್ಕಿಂತ ಮುಂಚೆ ಇಂತಹ ಅನೇಕ ಪ್ರವಾದಿಗಳು ಗತಿಸಿ ಹೋಗಿದ್ದಾರೆ. ಅವರೊಂದಿಗೆ ಸೇರಿ ಅನೇಕ ದೇವಭಕ್ತರು ಯುದ್ಧ ಮಾಡಿದ್ದರು. ಅಲ್ಲಾಹನ ಮಾರ್ಗದಲ್ಲಿ ಅವರ ಮೇಲೆ ಬಿದ್ದ ಕಷ್ಟಗಳಿಂದ ಅವರು ಭಗ್ನ ಹೃದಯಿಗಳಾಗಲಿಲ್ಲ, ಅವರು ದೌರ್ಬಲ್ಯ ತೋರಲಿಲ್ಲ, (ಮಿಥ್ಯದ ಮುಂದೆ) ಶರಣಾಗತರಾಗಲಿಲ್ಲ. ಅಲ್ಲಾಹನು ಇಂತಹ ಸಹನಶೀಲರನ್ನೇ ಪ್ರೀತಿಸುತ್ತಾನೆ.

وَمَا كَانَ قَوْلَهُمْ اِلَّاۤ اَنْ قَالُوْا رَبَّنَا
اغْفِرْ لَنَا ذُنُوْبَنَا وَاِسْرَافَنَا فِىْۤ اَمْرِنَا وَ
ثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ ﴿١٤٧﴾

147. ಅವರ ಪ್ರಾರ್ಥನೆ ಇದೇ ಆಗಿದ್ದಿತು, "ಓ ನಮ್ಮ ಪ್ರಭೂ, ನಮ್ಮ ಅಪರಾಧಗಳನ್ನೂ ಲೋಪದೋಷಗಳನ್ನೂ ಕ್ಷಮಿಸು. ನಮ್ಮ ಕೆಲಸ ಕಾರ್ಯಗಳಲ್ಲಿ ಸಂಭವಿಸಿ ಬಿಟ್ಟ ಅತಿಕ್ರಮಗಳನ್ನು ಕ್ಷಮಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸು ಮತ್ತು ಸತ್ಯನಿಷೇಧಿಗಳ ಎದುರು ನಮಗೆ ಸಹಾಯ ಮಾಡು."

148. ಕೊನೆಗೆ ಅಲ್ಲಾಹನು ಅವರಿಗೆ ಐಹಿಕ ಪ್ರತಿಫಲವನ್ನೂ ಕೊಟ್ಟನು ಮತ್ತು ಅದಕ್ಕಿಂತಲೂ ಶ್ರೇಷ್ಠವಾದ ಪಾರಲೌಕಿಕ ಪ್ರತಿಫಲವನ್ನೂ ದಯಪಾಲಿಸಿದನು. ಅಲ್ಲಾಹನಿಗೆ ಇಂತಹ ಸತ್ಕರ್ಮಿಗಳೇ ಪ್ರಿಯರು.

فَآتَاهُمُ اللَّهُ ثَوَابَ الدُّنْيَا وَحُسْنَ ثَوَابِ الْآخِرَةِ ۗ وَاللَّهُ يُحِبُّ الْمُحْسِنِينَ ﴿١٤٨﴾

149. ಓ ಸತ್ಯವಿಶ್ವಾಸಿಗಳೇ, ನೀವು ಸತ್ಯನಿಷೇಧಿಗಳನ್ನು ಅನುಸರಿಸಿದರೆ ಅವರು ನಿಮ್ಮನ್ನು ಪೂರ್ವಸ್ಥಿತಿಗೆ ಮರಳಿಸುವರು. ಆಗ ನೀವು ಹತಾಶರಾಗಿ ಮರಳುವಿರಿ.

يَا أَيُّهَا الَّذِينَ آمَنُوا إِن تُطِيعُوا الَّذِينَ كَفَرُوا يَرُدُّوكُمْ عَلَىٰ أَعْقَابِكُمْ فَتَنقَلِبُوا خَاسِرِينَ ﴿١٤٩﴾

150. (ಅವರ ಮಾತುಗಳು ಸರಿಯಲ್ಲ) ಅಲ್ಲಾಹನು ನಿಮ್ಮ ರಕ್ಷಕನೂ ಸಹಾಯಕನೂ ಆಗಿರುತ್ತಾನೆಂಬುದೇ ಪರಮಾರ್ಥವಾಗಿದೆ ಮತ್ತು ಅವನು ಸಹಾಯಕರಲ್ಲಿ ಅತ್ಯುತ್ತಮನು.

بَلِ اللَّهُ مَوْلَاكُمْ ۖ وَهُوَ خَيْرُ النَّاصِرِينَ ﴿١٥٠﴾

151. ನಾವು ಸತ್ಯನಿಷೇಧಿಗಳ ಹೃದಯಗಳಲ್ಲಿ ಶೀಘ್ರದಲ್ಲೇ ಭೀತಿ ಹುಟ್ಟಿಸಲಿರುವೆವು. ಏಕೆಂದರೆ ತನ್ನ ಭಾಗೀದಾರರೆಂಬ ಬಗ್ಗೆ ಅಲ್ಲಾಹನೇನೂ ಸಾಕ್ಷ್ಯಾಧಾರ ನೀಡಿರದಂತಹವರನ್ನು ಅವರು ಆತನ ದೇವತ್ವದಲ್ಲಿ ಭಾಗೀದಾರರಾಗಿ ಮಾಡಿದ್ದಾರೆ. ಅವರ ಅಂತಿಮ ನಿವಾಸವು ನರಕಾಗ್ನಿಯಾಗಿದೆ. ಅಕ್ರಮಿಗಳಿಗೆ ಲಭಿಸಲಿರುವ ವಾಸಸ್ಥಾನವು ಅತ್ಯಂತ ನಿಕೃಷ್ಟವಾದುದು.

سَنُلْقِي فِي قُلُوبِ الَّذِينَ كَفَرُوا الرُّعْبَ بِمَا أَشْرَكُوا بِاللَّهِ مَا لَمْ يُنَزِّلْ بِهِ سُلْطَانًا ۖ وَمَأْوَاهُمُ النَّارُ ۚ وَبِئْسَ مَثْوَى الظَّالِمِينَ ﴿١٥١﴾

152. ಅಲ್ಲಾಹನು ನಿಮ್ಮೊಡನೆ ಮಾಡಿದ್ದ (ಬೆಂಬಲ ಮತ್ತು ಸಹಾಯದ) ವಾಗ್ದಾನವನ್ನಂತು ನೆರವೇರಿಸಿದನು. ಆರಂಭದಲ್ಲಿ ಅವನ ಅಪ್ಪಣೆಯಿಂದ ನೀವೇ ಅವರನ್ನು ವಧಿಸುತ್ತಿದ್ದಿರಿ. ಆದರೆ, ನೀವು ದೌರ್ಬಲ್ಯ ತೋರಿದಾಗ ಮತ್ತು ನಿಮ್ಮ ಕಾರ್ಯದಲ್ಲಿ ಪರಸ್ಪರ ಮತಭೇದ ತಾಳಿದಾಗ ಮತ್ತು ನೀವು ಮೋಹಿತರಾಗಿದ್ದ ಆ ವಸ್ತುವನ್ನು (ಅರ್ಥಾತ್ ಸಮರಾರ್ಜಿತ ಸೊತ್ತನ್ನು) ಅಲ್ಲಾಹನು ನಿಮಗೆ ಹಠಾತ್ತನೆ ತೋರಿಸಿದಾಗ ನೀವು ನಿಮ್ಮ ನಾಯಕನ ಅಪ್ಪಣೆಯನ್ನು ಉಲ್ಲಂಘಿಸಿ ನಡೆದುಬಿಟ್ಟಿರಿ. - ಏಕೆಂದರೆ ನಿಮ್ಮಲ್ಲಿ ಕೆಲವರು ಇಹಲೋಕಾಕಾಂಕ್ಷಿಗಳಿದ್ದರು ಮತ್ತೆ ಕೆಲವರು ಪರಲೋಕಾಕಾಂಕ್ಷೆಯನ್ನಿರಿಸಿಕೊಂಡಿದ್ದರು. ಆಗ ಅಲ್ಲಾಹನು ಪರೀಕ್ಷಾರ್ಥವಾಗಿ ಸತ್ಯನಿಷೇಧಿಗಳೆದುರು ನಿಮ್ಮನ್ನು ಹಿಮ್ಮೆಟ್ಟಿಸಿ ಬಿಟ್ಟನು. ಆದರೂ ನಿಜವಾಗಿ ಅಲ್ಲಾಹನು ನಿಮ್ಮನ್ನು ಕ್ಷಮಿಸಿದನು. ಏಕೆಂದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಮೇಲೆ ಬಹಳ ಕೃಪಾಕಟಾಕ್ಷವನ್ನಿರಿಸುವವನಾಗಿರುತ್ತಾನೆ.

وَلَقَدْ صَدَقَكُمُ اللَّهُ وَعْدَهُ إِذْ تَحُسُّونَهُم بِإِذْنِهِ ۖ حَتَّىٰ إِذَا فَشِلْتُمْ وَتَنَازَعْتُمْ فِي الْأَمْرِ وَعَصَيْتُم مِّن بَعْدِ مَا أَرَاكُم مَّا تُحِبُّونَ ۚ مِنكُم مَّن يُرِيدُ الدُّنْيَا وَمِنكُم مَّن يُرِيدُ الْآخِرَةَ ۚ ثُمَّ صَرَفَكُمْ عَنْهُمْ لِيَبْتَلِيَكُمْ ۖ وَلَقَدْ عَفَا عَنكُمْ ۗ وَاللَّهُ ذُو فَضْلٍ عَلَى الْمُؤْمِنِينَ ﴿١٥٢﴾

153. ಸ್ಮರಿಸಿರಿ- ನೀವು ಓಟಕಿತ್ತಿದ್ದಿರಿ. ನಿಮಗೆ ಯಾರ ಕಡೆಗೂ ತಿರುಗಿ ನೋಡುವ ಬೋಧವಿರಲಿಲ್ಲ ಮತ್ತು ಸಂದೇಶವಾಹಕರು ನಿಮ್ಮ ಹಿಂಭಾಗದಿಂದ ನಿಮ್ಮನ್ನು ಕೂಗಿ ಕರೆಯುತ್ತಿದ್ದರು.[31] ಮುಂದೆ ನೀವೇನಾದರೂ ಕಳೆದುಕೊಂಡಾಗ ಅಥವಾ ನಿಮ್ಮ ಮೇಲೇನಾದರೂ ವಿಪತ್ತು ಎರಗಿದಾಗ ನೀವು ವ್ಯಸನಪಡಬಾರದೆಂಬ ಪಾಠ ಕಲಿಸಲಿಕ್ಕಾಗಿ ಅಲ್ಲಾಹನು ನಿಮ್ಮ ಈ ವರ್ತನೆಯ ಪ್ರತಿಫಲ ರೂಪದಲ್ಲಿ ಆಗ ನಿಮಗೆ ದುಃಖದ ಮೇಲೆ ದುಃಖ ಕೊಟ್ಟನು. ಅಲ್ಲಾಹನು ನಿಮ್ಮ ಎಲ್ಲ ಕರ್ಮಗಳನ್ನೂ ಅರಿತಿರುವವನಾಗಿದ್ದಾನೆ.

إِذْ تُصْعِدُونَ وَلَا تَلْوُونَ عَلَىٰٓ أَحَدٍ وَالرَّسُولُ
يَدْعُوكُمْ فِيٓ أُخْرَىٰكُمْ فَأَثَـٰبَكُمْ غَمًّۢا بِغَمٍّ
لِّكَيْلَا تَحْزَنُوا عَلَىٰ مَا فَاتَكُمْ وَلَا مَآ أَصَـٰبَكُمْ ۗ
وَاللَّهُ خَبِيرٌۢ بِمَا تَعْمَلُونَ ﴿١٥٣﴾

154. ಈ ದುಃಖದ ಬಳಿಕ ಅಲ್ಲಾಹನು ನಿಮ್ಮಲ್ಲಿ ಕೆಲವರಿಗೆ ಅದೆಂತಹ ಮನಶ್ಶಾಂತಿ ನೀಡಿದನೆಂದರೆ ಅವರು ತೂಕಡಿಸತೊಡಗಿದರು.[32] ಆದರೆ ತಮ್ಮ ಸ್ವಾರ್ಥಕ್ಕೇ ಆದ್ಯತೆ ಕೊಟ್ಟಿದ್ದ ಇನ್ನೊಂದು ಪಂಗಡವು ಅಲ್ಲಾಹನ ಬಗ್ಗೆ ಸತ್ಯಕ್ಕೆ ವಿರುದ್ಧವಾದ ತರತರದ ಅಜ್ಞಾನಜನ್ಯ ಸಂದೇಹಗಳನ್ನು ಮಾಡತೊಡಗಿತು. ಈ ಕಾರ್ಯ ವೆಸಗುವುದರಲ್ಲಿ ನಮ್ಮ ಪಾಲೇನಾದರೂ ಇದೆಯೇ? ಎಂದು ಈಗ ಅವರು ಕೇಳುತ್ತಾರೆ. ಅವರೊಡನೆ, "(ಯಾರದ್ದೂ ಯಾವ ಪಾಲೂ ಇಲ್ಲ) ಈ ಕಾರ್ಯ ಸಂಪೂರ್ಣವಾಗಿ ಅಲ್ಲಾಹನ ಅಧೀನವಿದೆ" ಎಂದು ಹೇಳಿರಿ. ವಾಸ್ತವದಲ್ಲಿ ಇವರು ತಮ್ಮ ಮನಸ್ಸಿನೊಳಗೆ ಬಚ್ಚಿಟ್ಟ ವಿಷಯಗಳನ್ನು ನಿಮ್ಮ ಮುಂದೆ ಪ್ರಕಟಿಸುವುದಿಲ್ಲ. "(ನಾಯಕತ್ವದ) ಅಧಿಕಾರಗಳಲ್ಲಿ ನಮ್ಮ ಪಾಲೂ ಇರುತ್ತಿದ್ದರೆ ಇಲ್ಲಿ ನಾವು ಕೊಲ್ಲಲ್ಪಡುತ್ತಿರಲಿಲ್ಲ" ಎಂಬುದೇ ಇವರ ನಿಜವಾದ ಮನದಿಂಗಿತವಾಗಿದೆ. ಅವರೊಡನೆ ಹೇಳಿಬಿಡಿರಿ - "ನೀವು ನಿಮ್ಮ ಮನೆಗಳೊಳಗೆ ಇರುತ್ತಿದ್ದರೂ ಯಾರ ಮರಣ ಲಿಖಿತವಾಗಿತ್ತೋ ಅವರು ಸ್ವತಃ ತಮ್ಮ ವಧಾಸ್ಥಾನಗಳ ಕಡೆಗೆ ಹೊರಟು ಬರುತ್ತಿದ್ದರು. ಇದೀಗ ಸಂಭವಿಸಿದ

ثُمَّ أَنزَلَ عَلَيْكُم مِّنۢ بَعْدِ الْغَمِّ أَمَنَةً
نُّعَاسًا يَغْشَىٰ طَآئِفَةً مِّنكُمْ ۖ وَطَآئِفَةٌ قَدْ
أَهَمَّتْهُمْ أَنفُسُهُمْ يَظُنُّونَ بِاللَّهِ غَيْرَ
الْحَقِّ ظَنَّ الْجَـٰهِلِيَّةِ ۖ يَقُولُونَ هَل لَّنَا
مِنَ الْأَمْرِ مِن شَيْءٍ ۗ قُلْ إِنَّ الْأَمْرَ كُلَّهُۥ
لِلَّهِ ۗ يُخْفُونَ فِيٓ أَنفُسِهِم مَّا لَا يُبْدُونَ
لَكَ ۖ يَقُولُونَ لَوْ كَانَ لَنَا مِنَ الْأَمْرِ شَيْءٌ
مَّا قُتِلْنَا هَـٰهُنَا ۗ قُل لَّوْ كُنتُمْ فِي بُيُوتِكُمْ
لَبَرَزَ الَّذِينَ كُتِبَ عَلَيْهِمُ الْقَتْلُ إِلَىٰ
مَضَاجِعِهِمْ ۖ وَلِيَبْتَلِيَ اللَّهُ مَا فِي صُدُورِكُمْ
وَلِيُمَحِّصَ مَا فِي قُلُوبِكُمْ ۗ وَاللَّهُ عَلِيمٌۢ
بِذَاتِ الصُّدُورِ ﴿١٥٤﴾

31. ಉಹುದ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರ ಮೇಲೆ ಏಕಾಏಕಿಯಾಗಿ ಎರಡೂ ಕಡೆಯಿಂದ ಆಕ್ರಮಣ ನಡೆದಾಗ ಅವರು ಛಿನ್ನಭಿನ್ನರಾದರು. ಆಗ ಕೆಲವರು ಮದೀನಾದ ಕಡೆಗೆ ಓಡಿದರು. ಕೆಲವರು ಉಹುದ್ ಪರ್ವತದ ಮೇಲೇರಿದರು. ಆದರೆ ಪ್ರವಾದಿವರ್ಯರು(ಸ) ತಾವಿದ್ದಲ್ಲಿಂದ ಒಂದಂಗುಲವೂ ಕದಲಲಿಲ್ಲ. ನಾಲ್ಕೂ ಕಡೆಯಿಂದ ಶತ್ರುಗಳು ಆವರಿಸಿದ್ದರು. ಹತ್ತು-ಹನ್ನೆರಡು ಮಂದಿಯ ಬೆರಳೆಣಿಕೆಯ ಗುಂಪು ಮಾತ್ರ ಹತ್ತಿರವಿದ್ದರೂ ಪ್ರವಾದಿವರ್ಯರು(ಸ) ಆ ಸೂಕ್ಷ್ಮ ಘಟ್ಟದಲ್ಲೂ ಬೆಟ್ಟದಂತೆ ಸ್ಥಿರವಾಗಿ ನಿಂತು ಓಡುವವರನ್ನು ಕೂಗಿ ಕರೆಯುತ್ತಿದ್ದರು. 'ಇಲಯ್ಯ ಇಬಾದಲ್ಲಾಹ್, ಇಲಯ್ಯ ಇಬಾದಲ್ಲಾಹ್' ಅರ್ಥಾತ್ 'ಅಲ್ಲಾಹನ ದಾಸರೇ ನನ್ನೆಡೆಗೆ ಬನ್ನಿ, ಅಲ್ಲಾಹನ ದಾಸರೇ ನನ್ನೆಡೆಗೆ ಬನ್ನಿ' ಎನ್ನುತ್ತಿದ್ದರು.

32. ಇದೊಂದು ವಿಚಿತ್ರ ಅನುಭವವಾಗಿತ್ತು. ಆಗ ಇಸ್ಲಾಮಿ ಸೇನೆಯಲ್ಲಿದ್ದ ಕೆಲವರಿಗೆ ಈ ಅನುಭವವಾಗಿತ್ತು. ಯುದ್ಧದಲ್ಲಿ ಪಾಲ್ಗೊಂಡಿದ್ದ ಹ. ಅಬೂತಲ್ಹರ ಪ್ರಕಾರ ನಮ್ಮ ಮೇಲೆ ಆಗ ಎಷ್ಟು ಮಂಪರು ಕವಿದಿತ್ತೆಂದರೆ ಖಡ್ಗಗಳು ಕೈಯಿಂದ ಕೆಳಗೆ ಜಾರುತ್ತಿದ್ದುವು.

ಘಟನೆಯು ನಿಮ್ಮ ಹೃದಯದೊಳಗೆ ಅಡಗಿದ್ದುದನ್ನು ಅಲ್ಲಾಹನು ಪರೀಕ್ಷಿಸಿಕೊಳ್ಳಲಿಕ್ಕಾಗಿ ಮತ್ತು ನಿಮ್ಮ ಮನಸ್ಸಿನಲ್ಲಿರುವ ಕೇಡನ್ನು ತೊಡೆದು ಹಾಕಲಿಕ್ಕಾಗಿ ಸಂಭವಿಸಿದೆ. ಅಲ್ಲಾಹನು ಹೃದಯಗಳೊಳಗಿರುವುದನ್ನು ಚೆನ್ನಾಗಿ ಅರಿತಿರುತ್ತಾನೆ.

155. ಹೋರಾಟದ ದಿನ ನಿಮ್ಮಲ್ಲಿ ಬೆನ್ನು ತೋರಿಸಿದವರ ಈ ದೋಷಕ್ಕೆ ಕಾರಣವೇನೆಂದರೆ,- ಅವರ ಕೆಲವು ದೌರ್ಬಲ್ಯಗಳ ನಿಮಿತ್ತ ಶೈತಾನನು ಅವರ ಪಾದಗಳನ್ನು ಅಸ್ಥಿರ ಗೊಳಿಸಿಬಿಟ್ಟಿದ್ದನು. ಅಲ್ಲಾಹನು ಅವರನ್ನು ಕ್ಷಮಿಸಿದನು. ಅಲ್ಲಾಹ್ ಮಹಾ ಕ್ಷಮಾಶೀಲನೂ ಸಹನಶೀಲನೂ ಆಗಿರುತ್ತಾನೆ.

إِنَّ الَّذِينَ تَوَلَّوْا مِنكُمْ يَوْمَ الْتَقَى الْجَمْعَانِ
إِنَّمَا اسْتَزَلَّهُمُ الشَّيْطَانُ بِبَعْضِ مَا كَسَبُوا
وَلَقَدْ عَفَا اللَّهُ عَنْهُمْ إِنَّ اللَّهَ غَفُورٌ حَلِيمٌ ﴿١٥٥﴾

ع

156. ಓ ಸತ್ಯವಿಶ್ವಾಸಿಗಳೇ, ಸತ್ಯನಿಷೇಧಿಗಳಂತೆ ಮಾತಾಡಬೇಡಿರಿ.- ಅವರ ಬಂಧು ಬಳಗದವರು ಪ್ರಯಾಣ ಹೋದಾಗ ಅಥವಾ ಯುದ್ಧದಲ್ಲಿ ಪಾಲ್ಗೊಂಡಿದ್ದಾಗ (ಅಲ್ಲೇನಾದರೂ ಅಪಘಾತಕ್ಕೀಡಾದರೆ) ಅವರು ನಮ್ಮ ಬಳಿಯಲ್ಲಿರುತ್ತಿದ್ದರೆ ಸಾಯುತ್ತಿರಲೂ ಇಲ್ಲ ವಧಿಸಲ್ಪಡುತ್ತಿರಲೂ ಇಲ್ಲವೆನ್ನುತ್ತಾರೆ. ಅಲ್ಲಾಹನು ಇಂತಹ ಮಾತುಗಳನ್ನು ಅವರ ಮನಸ್ಸಿನಲ್ಲಿ ಶೋಕತಪ್ತತೆಗೆ ಕಾರಣವನ್ನಾಗಿ ಮಾಡಿಬಿಡುತ್ತಾನೆ. ವಾಸ್ತವದಲ್ಲಿ ಜೀವದಾನ ಮಾಡುವವನೂ ಮರಣ ಕೊಡುವವನೂ ಅಲ್ಲಾಹನೇ ಮತ್ತು ನಿಮ್ಮ ಎಲ್ಲ ಚಲನವಲನಗಳ ಮೇಲ್ವಿಚಾರಕನೂ ಅವನೇ.

يَا أَيُّهَا الَّذِينَ آمَنُوا لَا تَكُونُوا كَالَّذِينَ
كَفَرُوا وَقَالُوا لِإِخْوَانِهِمْ إِذَا ضَرَبُوا فِي
الْأَرْضِ أَوْ كَانُوا غُزًّى لَّوْ كَانُوا عِندَنَا
مَا مَاتُوا وَمَا قُتِلُوا لِيَجْعَلَ اللَّهُ ذَٰلِكَ
حَسْرَةً فِي قُلُوبِهِمْ وَاللَّهُ يُحْيِي وَيُمِيتُ
وَاللَّهُ بِمَا تَعْمَلُونَ بَصِيرٌ ﴿١٥٦﴾

157. ನೀವು ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಟ್ಟರೆ ಅಥವಾ ಮರಣ ಹೊಂದಿದರೆ ಆಗ ನಿಮ್ಮ ಪಾಲಿಗೆ ಬರುವ ಅಲ್ಲಾಹನ ಕ್ಷಮೆ ಮತ್ತು ಕೃಪೆಯು ಇವರು ಸಂಗ್ರಹಿಸುವ ಸಕಲ ವಸ್ತುಗಳಿಗಿಂತಲೂ ಶ್ರೇಷ್ಠವಾಗಿರುತ್ತದೆ.

وَلَئِن قُتِلْتُمْ فِي سَبِيلِ اللَّهِ أَوْ مُتُّمْ
لَمَغْفِرَةٌ مِّنَ اللَّهِ وَرَحْمَةٌ خَيْرٌ مِّمَّا
يَجْمَعُونَ ﴿١٥٧﴾

158. ನೀವು ಮರಣ ಹೊಂದಿದರೂ ವಧಿಸಲ್ಪಟ್ಟರೂ ನಿಮಗೆಲ್ಲರಿಗೂ ಒಟ್ಟಾಗಿ ಅಲ್ಲಾಹನೆಡೆಗೇ ಹೋಗಿ ಸೇರಬೇಕಾಗಿದೆ.

وَلَئِن مُّتُّمْ أَوْ قُتِلْتُمْ لَإِلَى اللَّهِ تُحْشَرُونَ ﴿١٥٨﴾

159. (ಓ ಪೈಗಂಬರರೇ,) ನೀವು ಇವರ ಪಾಲಿಗೆ ಅತ್ಯಂತ ಸೌಮ್ಯ ಸ್ವಭಾವಿಯಾಗಿರುವುದು ಅಲ್ಲಾಹನ ಮಹಾ ಕೃಪೆಯಾಗಿದೆ. ನೀವು ಕಠಿಣ ಸ್ವಭಾವಿ ಮತ್ತು ಕಲ್ಲೆದೆಯವರಾಗಿರುತ್ತಿದ್ದರೆ ಇವರೆಲ್ಲರೂ ನಿಮ್ಮ ಸುತ್ತಮುತ್ತಲಿನಿಂದ ಚದರಿ ಹೋಗುತ್ತಿದ್ದರು. ಇವರ ಪ್ರಮಾದಗಳನ್ನು ಕ್ಷಮಿಸಿರಿ, ಇವರ ಪಾಪ ವಿಮೋಚನೆಗಾಗಿ ಪ್ರಾರ್ಥಿಸಿರಿ ಮತ್ತು ಧರ್ಮದ ಕೆಲಸಗಳಲ್ಲಿ ಇವರೊಡನೆ

فَبِمَا رَحْمَةٍ مِّنَ اللَّهِ لِنتَ لَهُمْ وَلَوْ كُنتَ
فَظًّا غَلِيظَ الْقَلْبِ لَانفَضُّوا مِنْ حَوْلِكَ
فَاعْفُ عَنْهُمْ وَاسْتَغْفِرْ لَهُمْ وَشَاوِرْهُمْ
فِي الْأَمْرِ فَإِذَا عَزَمْتَ فَتَوَكَّلْ عَلَى اللَّهِ

ಸಮಾಲೋಚಿಸಿರಿ. ಆ ಬಳಿಕ, ಯಾವುದಾದರೊಂದು ಅಭಿಪ್ರಾಯದಲ್ಲಿ ನೀವು ದೃಢ ನಿರ್ಧಾರ ತಾಳಿದರೆ ಅಲ್ಲಾಹನ ಮೇಲೆ ಭರವಸೆಯಿಡಿರಿ. ಅಲ್ಲಾಹನ ಮೇಲೆಯೇ ಭರವಸೆಯಿಟ್ಟು ಕಾರ್ಯವೆಸಗುವವರನ್ನು ಅವನು ಪ್ರೀತಿಸುತ್ತಾನೆ.

إِنَّ اللّٰهَ يُحِبُّ الْمُتَوَكِّلِيْنَ ﴿١٥٩﴾

160. ಅಲ್ಲಾಹನು ನಿಮ್ಮ ಸಹಾಯಕ್ಕಿದ್ದರೆ ಯಾವ ಶಕ್ತಿಯಿಂದಲೂ ನಿಮ್ಮನ್ನು ಜಯಿಸಲು ಸಾಧ್ಯವಾಗದು ಮತ್ತು ಅವನು ನಿಮ್ಮನ್ನು ಕೈಬಿಟ್ಟರೆ, ಆಮೇಲೆ ನಿಮಗೆ ಸಹಾಯ ಮಾಡುವವರು ಯಾರಿದ್ದಾರೆ? ಆದುದರಿಂದ ಅಪ್ಪಟ ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಬೇಕು.

إِنْ يَّنْصُرْكُمُ اللّٰهُ فَلَا غَالِبَ لَكُمْ ۚ وَإِنْ
يَّخْذُلْكُمْ فَمَنْ ذَا الَّذِيْ يَنْصُرُكُمْ مِّنْۢ
بَعْدِهٖ ۗ وَعَلَى اللّٰهِ فَلْيَتَوَكَّلِ الْمُؤْمِنُوْنَ ﴿١٦٠﴾

161. ವಂಚನೆಯು ಒಬ್ಬ ಪ್ರವಾದಿಗೆ ಶೋಭಿಸುವಂತಹದಲ್ಲ ಮತ್ತು ವಂಚಕನು ತನ್ನ ವಂಚನೆಯೊಂದಿಗೆ ಪುನರುತ್ಥಾನ ದಿನದಂದು ಹಾಜರಾಗುವನು. ಆ ಬಳಿಕ ಪ್ರತಿಯೊಂದು ಜೀವಿಗೂ ಅದರ ಗಳಿಕೆಯ ಸಂಪೂರ್ಣ ಪ್ರತಿಫಲ ಸಿಗುವುದು ಮತ್ತು ಯಾರ ಮೇಲೂ ಅನ್ಯಾಯವಾಗದು.

وَمَا كَانَ لِنَبِيٍّ اَنْ يَّغُلَّ ۗ وَمَنْ يَّغْلُلْ
يَاْتِ بِمَا غَلَّ يَوْمَ الْقِيٰمَةِ ۚ ثُمَّ تُوَفّٰى
كُلُّ نَفْسٍ مَّا كَسَبَتْ وَهُمْ لَا يُظْلَمُوْنَ ﴿١٦١﴾

162. ಸದಾಕಾಲವೂ ಅಲ್ಲಾಹನ ಸಂಪ್ರೀತಿಯಂತೆ ನಡೆಯುವ ವ್ಯಕ್ತಿಯು, ಅಲ್ಲಾಹನ ಕ್ರೋಧಕ್ಕೆ ಪಾತ್ರನಾದ ಹಾಗೂ ಅತಿ ನಿಕೃಷ್ಟ ಸ್ಥಾನವಾದ ನರಕವೇ ಅಂತಿಮ ನೆಲೆಯಾಗಿರುವ ವ್ಯಕ್ತಿಯು ಮಾಡುವಂತಹ ಕಾರ್ಯಗಳನ್ನು ಮಾಡಲು ಹೇಗೆ ಸಾಧ್ಯ?

اَفَمَنِ اتَّبَعَ رِضْوَانَ اللّٰهِ كَمَنْۢ بَآءَ بِسَخَطٍ
مِّنَ اللّٰهِ وَمَاْوٰىهُ جَهَنَّمُ ۗ وَبِئْسَ الْمَصِيْرُ ﴿١٦٢﴾

163. ಅಲ್ಲಾಹನ ಬಳಿ ಈ ಎರಡೂ ವಿಧದ ಜನರೊಳಗೆ ಅತ್ಯಧಿಕ ಅಂತರವಿದೆ. ಅಲ್ಲಾಹನು ಎಲ್ಲರ ಕರ್ಮಗಳನ್ನು ವೀಕ್ಷಿಸುವವನಾಗಿರುತ್ತಾನೆ.

هُمْ دَرَجٰتٌ عِنْدَ اللّٰهِ ۗ وَاللّٰهُ بَصِيْرٌۢ
بِمَا يَعْمَلُوْنَ ﴿١٦٣﴾

164. ವಾಸ್ತವದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳ ನಡುವೆ ಅವರೊಳಗಿಂದಲೇ - ಅವರಿಗೆ ಅವನ (ಅಲ್ಲಾಹನ) ಸೂಕ್ತಗಳನ್ನು ಓದಿ ಹೇಳುವ, ಅವರ ಜೀವನವನ್ನು ಸಂಸ್ಕರಿಸುವ ಮತ್ತು ಅವರಿಗೆ ಗ್ರಂಥ ಮತ್ತು ವಿವೇಕದ ಶಿಕ್ಷಣ ನೀಡುವ ಓರ್ವ ಸಂದೇಶ ವಾಹಕನನ್ನು ನಿಯೋಜಿಸಿ, ಅವರ ಮೇಲೆ ಬಹುದೊಡ್ಡ ಉಪಕಾರ ಮಾಡಿದ್ದಾನೆ. ವಸ್ತುತಃ ಅವರು ಈ ಮುಂಚೆ ವ್ಯಕ್ತವಾದ ಮಾರ್ಗಭ್ರಷ್ಟತೆಯಲ್ಲಿ ಬಿದ್ದಿದ್ದರು.

لَقَدْ مَنَّ اللّٰهُ عَلَى الْمُؤْمِنِيْنَ اِذْ بَعَثَ
فِيْهِمْ رَسُوْلًا مِّنْ اَنْفُسِهِمْ يَتْلُوْا عَلَيْهِمْ
اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ
وَالْحِكْمَةَ ۚ وَاِنْ كَانُوْا مِنْ قَبْلُ
لَفِيْ ضَلٰلٍ مُّبِيْنٍ ﴿١٦٤﴾

165. ನಿಮಗೆ ವಿಪತ್ತು ಬಂದೆರಗಿದಾಗ ನೀವು, "ಇದೆಲ್ಲಿಂದ ಬಂತು?"

اَوَلَمَّآ اَصَابَتْكُمْ مُّصِيْبَةٌ قَدْ اَصَبْتُمْ

ಎನ್ನತೊಡಗಿದಿರಾ? ವಸ್ತುತಃ (ಬದ್ರ್ ಯುದ್ಧದಲ್ಲಿ) ನಿಮ್ಮ ಕೈಗಳಿಂದ (ವಿರೋಧಿಗಳ ಮೇಲೆ) ಇಮ್ಮಡಿ ವಿಪತ್ತು ಉಂಟಾಗಿತ್ತು. ಪ್ರವಾದಿಯವರೇ ಅವರೊಡನೆ ಹೇಳಿರಿ, ಇದು ನೀವು ಸ್ವತಃ ತಂದುಕೊಂಡ ವಿಪತ್ತು. ಅಲ್ಲಾಹನು ಸಕಲ ಕಾರ್ಯಗಳ ಸಾಮರ್ಥ್ಯವುಳ್ಳವನು.

مِّثْلَيْهَا قُلْتُمْ أَنَّىٰ هَٰذَا ۖ قُلْ هُوَ مِنْ
عِندِ أَنفُسِكُمْ ۗ إِنَّ اللَّهَ عَلَىٰ كُلِّ
شَيْءٍ قَدِيرٌ ﴿١٦٥﴾

166. ಯುದ್ಧದ ದಿವಸ ನಿಮಗೊದಗಿದ ನಷ್ಟ ಅಲ್ಲಾಹನ ಅಪ್ಪಣೆಯಿಂದಾಗಿತ್ತು. ಅದು ನಿಮ್ಮಲ್ಲಿ ಯಾರು ಸತ್ಯವಿಶ್ವಾಸಿ ಮತ್ತು ಯಾರು ಕಪಟವಿಶ್ವಾಸಿಯೆಂದು ಅಲ್ಲಾಹನು ನೋಡಿಕೊಳ್ಳಲಿಕ್ಕಾಗಿತ್ತು.

وَمَا أَصَابَكُمْ يَوْمَ الْتَقَى الْجَمْعَانِ
فَبِإِذْنِ اللَّهِ وَلِيَعْلَمَ الْمُؤْمِنِينَ ﴿١٦٦﴾

167. "ಬನ್ನಿರಿ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ, ಇಲ್ಲವೆ ಕನಿಷ್ಠಪಕ್ಷ (ನಿಮ್ಮ ಪಟ್ಟಣದ) ರಕ್ಷಣೆ ಮಾಡಿರಿ" ಎಂದು ಕಪಟವಿಶ್ವಾಸಿಗಳೊಡನೆ ಹೇಳಿದಾಗ ಅವರು, "ಇಂದು ಯುದ್ಧ ನಡೆಯಲಿರುವುದೆಂದು ನಮಗೆ ತಿಳಿದಿರುತ್ತಿದ್ದರೆ ನಾವು ಖಂಡಿತವಾಗಿಯೂ ನಿಮ್ಮ ಸಂಗಡ ಬರುತ್ತಿದ್ದೆವು" ಎನ್ನತೊಡಗಿದರು. ಹೀಗೆ ಹೇಳುತ್ತಿರುವಾಗ ಅವರು ವಿಶ್ವಾಸಕ್ಕಿಂತ ಅವಿಶ್ವಾಸಕ್ಕೆ ಹೆಚ್ಚು ಸಮೀಪವಾಗಿದ್ದರು. ಅವರು ತಮ್ಮ ಹೃದಯಗಳಲ್ಲಿ ಇಲ್ಲದ ಮಾತನ್ನು ತಮ್ಮ ಬಾಯಿಗಳಿಂದ ಹೇಳುತ್ತಾರೆ. ಅವರು ಹೃದಯಗಳಲ್ಲಿ ಬಚ್ಚಿಡುವುದೆಲ್ಲವನ್ನೂ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿರುತ್ತಾನೆ.

وَلِيَعْلَمَ الَّذِينَ نَافَقُوا ۚ وَقِيلَ لَهُمْ
تَعَالَوْا قَاتِلُوا فِي سَبِيلِ اللَّهِ أَوِ ادْفَعُوا ۖ
قَالُوا لَوْ نَعْلَمُ قِتَالًا لَّاتَّبَعْنَاكُمْ ۗ هُمْ
لِلْكُفْرِ يَوْمَئِذٍ أَقْرَبُ مِنْهُمْ لِلْإِيمَانِ ۚ
يَقُولُونَ بِأَفْوَاهِهِم مَّا لَيْسَ فِي قُلُوبِهِمْ ۗ
وَاللَّهُ أَعْلَمُ بِمَا يَكْتُمُونَ ﴿١٦٧﴾

168. ಇವರು ಸ್ವತಃ ಕುಳಿತುಕೊಂಡಿದ್ದು, ಯುದ್ಧಕ್ಕೆ ಹೋಗಿ ವಧಿಸಲ್ಪಟ್ಟ ಇವರ ಸಹೋದರರ ಬಗ್ಗೆ, "ಅವರು ನಮ್ಮ ಮಾತು ಕೇಳುತ್ತಿದ್ದರೆ ಕೊಲ್ಲಲ್ಪಡುತ್ತಿರಲಿಲ್ಲ" ಎಂದು ಬಿಟ್ಟರು. ಅವರೊಡನೆ, "ನೀವು ನಿಮ್ಮ ಮಾತಿನಲ್ಲಿ ಸತ್ಯವಂತರಾಗಿದ್ದರೆ ಸ್ವತಃ ನಿಮಗೆ ಮರಣ ಬಂದಾಗ ಅದನ್ನು ಮುಂದೂಡಿ ತೋರಿಸಬೇಕು" ಎಂದು ಹೇಳಿರಿ.

الَّذِينَ قَالُوا لِإِخْوَانِهِمْ وَقَعَدُوا لَوْ
أَطَاعُونَا مَا قُتِلُوا ۗ قُلْ فَادْرَءُوا عَنْ
أَنفُسِكُمُ الْمَوْتَ إِن كُنتُمْ صَادِقِينَ ﴿١٦٨﴾

169. ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಟ್ಟವರನ್ನು ಮೃತರೆನ್ನಬೇಡಿರಿ. ಅವರು ಯಥಾರ್ಥವಾಗಿ ಜೀವಂತವಿದ್ದಾರೆ. ತಮ್ಮ ಪ್ರಭುವಿನ ಬಳಿ ಅನ್ನಾಹಾರ ಪಡೆಯುತ್ತಿದ್ದಾರೆ.

وَلَا تَحْسَبَنَّ الَّذِينَ قُتِلُوا فِي سَبِيلِ اللَّهِ
أَمْوَاتًا ۚ بَلْ أَحْيَاءٌ عِندَ رَبِّهِمْ يُرْزَقُونَ ﴿١٦٩﴾

170. ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ನೀಡಿದುದರಲ್ಲಿ ಆನಂದ ತುಂದಿಲರಾಗಿದ್ದಾರೆ. ತಮ್ಮ ಹಿಂದೆ ಭೂಲೋಕದಲ್ಲಿ

فَرِحِينَ بِمَا آتَاهُمُ اللَّهُ مِن فَضْلِهِ
وَيَسْتَبْشِرُونَ بِالَّذِينَ لَمْ يَلْحَقُوا

ಉಳಿದಿರುವ ಮತ್ತು ಇನ್ನೂ ಅಲ್ಲಿಗೆ ತಲಪಿರದ ಸತ್ಯವಿಶ್ವಾಸಿಗಳಿಗೂ ಯಾವುದೇ ಭಯ ಮತ್ತು ವ್ಯಥೆಗಳ ಸಂಭವವಿಲ್ಲವೆಂದು ನಿಶ್ಚಿಂತರಾಗಿದ್ದಾರೆ.	بِهِمْ مِّنْ خَلْفِهِمْ ۙ أَلَّا خَوْفٌ عَلَيْهِمْ وَلَا هُمْ يَحْزَنُونَ ﴿١٧٠﴾ وقف لازم
171. ಅವರು ಅಲ್ಲಾಹನ ಬಹುಮಾನ ಮತ್ತು ಅವನ ಅನುಗ್ರಹದಿಂದಾಗಿ ಹರ್ಷಾನಂದಭರಿತರಾಗಿದ್ದಾರೆ. ಅಲ್ಲಾಹನು ಸತ್ಯವಿಶ್ವಾಸಿಗಳ ಪ್ರತಿಫಲವನ್ನು ವ್ಯರ್ಥ ಮಾಡುವುದಿಲ್ಲವೆಂದು ಅವರಿಗೆ ತಿಳಿದಿದೆ.	يَسْتَبْشِرُونَ بِنِعْمَةٍ مِّنَ اللَّهِ وَفَضْلٍ ۙ وَأَنَّ اللَّهَ لَا يُضِيعُ أَجْرَ الْمُؤْمِنِينَ ﴿١٧١﴾ ع ٨
172. ಗಾಯಗೊಂಡ ಬಳಿಕವೂ ಅಲ್ಲಾಹ್ ಮತ್ತು ಸಂದೇಶವಾಹಕರ ಕರೆಗೆ ಓಗೊಟ್ಟವರ ಪೈಕಿ[33] ಸಜ್ಜನರೂ ನಿಷ್ಠರೂ ಆಗಿರುವ ವ್ಯಕ್ತಿಗಳಿಗೆ ಅತ್ಯುತ್ಕೃಷ್ಟ ಪ್ರತಿಫಲವಿದೆ (ಇಂತಹ ಸತ್ಯವಿಶ್ವಾಸಿಗಳ ಪ್ರತಿಫಲವನ್ನು ವ್ಯರ್ಥಗೊಳಿಸಲಾಗುವುದಿಲ್ಲ.)	الَّذِينَ اسْتَجَابُوا لِلَّهِ وَالرَّسُولِ مِن بَعْدِ مَا أَصَابَهُمُ الْقَرْحُ ۚ لِلَّذِينَ أَحْسَنُوا مِنْهُمْ وَاتَّقَوْا أَجْرٌ عَظِيمٌ ﴿١٧٢﴾
173. "ನಿಮ್ಮ ವಿರುದ್ಧ ದೊಡ್ಡ ಸೈನ್ಯವೊಂದು ಜಮೆಯಾಗಿದೆ, ಅದನ್ನು ಭಯಪಡಿರಿ" ಎಂದು ಜನರು ಅವರೊಡನೆ ಹೇಳಿದರು. ಇದನ್ನು ಕೇಳಿದಾಗ ಅವರ ಸತ್ಯವಿಶ್ವಾಸ ಇನ್ನಷ್ಟು ವರ್ಧಿಸಿತು. "ನಮಗೆ ಅಲ್ಲಾಹ್ ಸಾಕು ಮತ್ತು ಅವನೇ ಅತ್ಯುತ್ತಮ ಕಾರ್ಯಸಾಧಕನು" ಎಂದು ಅವರು ಉತ್ತರವಿತ್ತರು.	الَّذِينَ قَالَ لَهُمُ النَّاسُ إِنَّ النَّاسَ قَدْ جَمَعُوا لَكُمْ فَاخْشَوْهُمْ فَزَادَهُمْ إِيمَانًا ۖ وَقَالُوا حَسْبُنَا اللَّهُ وَنِعْمَ الْوَكِيلُ ﴿١٧٣﴾
174. ಕೊನೆಗೆ ಅವರು ಅಲ್ಲಾಹನ ಕೊಡುಗೆ ಮತ್ತು ಅನುಗ್ರಹದೊಂದಿಗೆ ಹಿಂದಿರುಗಿದರು. ಅವರಿಗೆ ಏನೊಂದೂ ಆಘಾತವುಂಟಾಗಲಿಲ್ಲ ಮತ್ತು ಅಲ್ಲಾಹನ ಪ್ರಸನ್ನತೆಯ ಹಾದಿಯಲ್ಲಿ ಸಾಗಿದ ಹಿರಿತನವೂ ಅವರಿಗೆ ಪ್ರಾಪ್ತವಾಯಿತು. ಅಲ್ಲಾಹ್ ಮಹಾ ಅನುಗ್ರಹದಾನಿಯಾಗಿರುತ್ತಾನೆ.[34]	فَانقَلَبُوا بِنِعْمَةٍ مِّنَ اللَّهِ وَفَضْلٍ لَّمْ يَمْسَسْهُمْ سُوءٌ ۙ وَاتَّبَعُوا رِضْوَانَ اللَّهِ ۗ وَاللَّهُ ذُو فَضْلٍ عَظِيمٍ ﴿١٧٤﴾

33. ಉಹುದ್ ಯುದ್ಧದಿಂದ ಮರಳಿದ ಬಹುದೇವ ವಿಶ್ವಾಸಿಗಳಿಗೆ ಬಹಳ ದೂರ ತಲಪಿದ ನಂತರ ಜ್ಞಾನೋದಯವಾಯಿತು. ಅವರು ಪರಸ್ಪರ ಹೀಗೆಂದರು, "ನಾವೆಂತಹ ಕೆಲಸ ಮಾಡಿ ಬಿಟ್ಟೆವು, ಮುಹಮ್ಮದ್‌ರ(ಸ) ಶಕ್ತಿ ಮುರಿಯಲು ಸಿಕ್ಕ ಅಮೂಲ್ಯ ಅವಕಾಶವನ್ನು ಬಿಟ್ಟು ಬಂದೆವು." ನಂತರ ಅವರು ಒಂದೆಡೆ ಕಲೆತು ತಕ್ಷಣವೇ ಮದೀನಾದ ಮೇಲೆ ಎರಡನೇ ಆಕ್ರಮಣ ನಡೆಸುವ ಬಗ್ಗೆ ಸಮಾಲೋಚಿಸಿದರು. ಆದರೆ ನಂತರ ಧೈರ್ಯ ಸಾಲದೆ ಮಕ್ಕಾಕ್ಕೆ ಮರಳಿದರು. ಅತ್ತ ಪ್ರವಾದಿವರ್ಯರಿಗೂ(ಸ) ಇವರು ಮತ್ತೆಲ್ಲಿ ಮರಳಿ ಬಂದಾರೋ ಎಂಬ ಸಂಶಯವಿತ್ತು. ಆದ್ದರಿಂದ ಉಹುದ್ ಯುದ್ಧದ ಮರುದಿನವೇ ಅವರು ಮುಸ್ಲಿಮರನ್ನು ಸೇರಿಸಿ ಹೇಳಿದರು, 'ನಾವೂ ಸತ್ಯನಿಷೇಧಿಗಳನ್ನು ಹಿಂಬಾಲಿಸಬೇಕಾಗಿದೆ.' ಅದು ಅತ್ಯಂತ ಸಂಕೀರ್ಣ ಘಟ್ಟವಾಗಿತ್ತು, ಆದರೆ ನೈಜ ಸತ್ಯವಿಶ್ವಾಸಿಗಳು ಆಗಲೂ ಪ್ರಾಣಾರ್ಪಣೆಗೆ ಸಿದ್ಧರಾದರು. ಅವರು ಪ್ರವಾದಿವರ್ಯರ(ಸ) ಜತೆಗೆ 'ಹಮ್ರಾಯಿಲ್ ಅಸದ್'ನ ತನಕ ಹೋದರು. ಅದು ಮದೀನಾದಿಂದ ಎಂಟು ಮೈಲು ದೂರದಲ್ಲಿದೆ. ಈ ಸೂಕ್ತದಲ್ಲಿ ಆ ಸಮರ್ಪಿತ ವ್ಯಕ್ತಿಗಳನ್ನೇ ಸೂಚಿಸಲಾಗಿದೆ.

34. ಉಹುದ್‌ನಿಂದ ಮರಳುವಾಗ ಅಬೂಸುಫ್‌ಯಾನ್ 'ಬದ್‌ರ್‌ನಲ್ಲಿ ಬರುವ ವರ್ಷ ಪುನಃ ನಮ್ಮೊಳಗೆ ಮುಖಾಮುಖಿ ನಡೆಯಲಿದೆ' ಎಂದು ಮುಸ್ಲಿಮರಿಗೆ ಸವಾಲೊಡ್ಡಿದ್ದನು. ಆದರೆ ಹೇಳಿದ ಸಂದರ್ಭ ಹತ್ತಿರವಾದಾಗ ಅವನು ಧೈರ್ಯಗುಂದಿದನು. ಆದ್ದರಿಂದ ಅವನು ತನ್ನ ಮಾತು ಉಳಿಸಲಿಕ್ಕಾಗಿ ಗೋಪ್ಯವಾಗಿ ಓರ್ವನನ್ನು ಮದೀನಾಕ್ಕೆ ಕಳುಹಿಸಿ ಮುಸ್ಲಿಮರಲ್ಲಿ ಕೆಲವು ವದಂತಿಗಳನ್ನು ಹರಡಿಸಿದನು. ಈ ವರ್ಷ ಕುರೈಶರು ಬಹಳ ಉಗ್ರ ಸಿದ್ಧತೆ ನಡೆಸಿದ್ದಾರೆ. ಸಮಸ್ತ ಅರಬ್ ದೇಶದಲ್ಲಿ ಯಾರಿಗೂ ಎದುರಿಸಲು ಸಾಧ್ಯವಿಲ್ಲದಂತಹ ಸೇನೆಯನ್ನು ಜಮಾಯಿಸುತ್ತಿದ್ದಾರೆ ಎಂಬ ವದಂತಿಗಳು. ಮುಸ್ಲಿಮರು ಈ ವದಂತಿಯಿಂದ ಸ್ವಲ್ಪ ಪ್ರಭಾವಿತರಾದರು. ಆದರೆ ಅಲ್ಲಾಹನ

175. ಸುಮ್ಮನೆ ತನ್ನ ಮಿತ್ರರ ಬಗ್ಗೆ ಹೆದರಿಸುತ್ತಿದ್ದವನು ಶೈತಾನನಲ್ಲದೆ ಬೇರಾರೂ ಅಲ್ಲವೆಂದು ನಿಮಗೀಗ ತಿಳಿಯಿತು. ಆದುದರಿಂದ ಇನ್ನು ಮುಂದೆ ನೀವು ಮಾನವರನ್ನು ಭಯಪಡಬಾರದು. ನೀವು ವಾಸ್ತವದಲ್ಲಿ ಸತ್ಯವಿಶ್ವಾಸಿಗಳಾಗಿದ್ದರೆ ನನ್ನನ್ನೇ ಭಯಪಡಬೇಕು.

إِنَّمَا ذَٰلِكُمُ الشَّيْطَٰنُ يُخَوِّفُ أَوْلِيَآءَهُۥ فَلَا
تَخَافُوهُمْ وَخَافُونِ إِن كُنتُم مُّؤْمِنِينَ ﴿١٧٥﴾

176. (ಓ ಪೈಗಂಬರರೇ) ಇಂದು ಕುಫ್ರ್(ಅಧರ್ಮ) ಮಾರ್ಗದಲ್ಲಿ ಶ್ರಮಿಸುತ್ತಿರುವವರ ಚಟುವಟಿಕೆಗಳು ನಿಮ್ಮನ್ನು ಖಿನ್ನಗೊಳಿಸದಿರಲಿ. ಅವರು ಅಲ್ಲಾಹನಿಗೆ ಏನೂ ಹಾನಿಯನ್ನುಂಟುಮಾಡಲಾರರು. ಅವರಿಗೆ ಪರಲೋಕದಲ್ಲಿ ಯಾವ ಪಾಲನ್ನೂ ಇರಿಸಬಾರದೆಂಬುದು ಅಲ್ಲಾಹನ ಇರಾದೆಯಾಗಿದೆ. ಕೊನೆಗೆ ಅವರಿಗೆ ಕಠಿಣ ಶಿಕ್ಷೆ ಸಿಗಲಿದೆ.

وَلَا يَحْزُنكَ الَّذِينَ يُسَٰرِعُونَ فِى الْكُفْرِ ۚ
إِنَّهُمْ لَن يَضُرُّوا اللَّهَ شَيْـًٔا ۗ يُرِيدُ اللَّهُ
أَلَّا يَجْعَلَ لَهُمْ حَظًّا فِى الْءَاخِرَةِ ۖ وَ
لَهُمْ عَذَابٌ عَظِيمٌ ﴿١٧٦﴾

177. ಸತ್ಯವಿಶ್ವಾಸವನ್ನು ಬಿಟ್ಟು ಸತ್ಯನಿಷೇಧದ ಗ್ರಾಹಕರಾದವರು ಖಂಡಿತವಾಗಿಯೂ ಅಲ್ಲಾಹನಿಗೆ ಏನೇನೂ ನಷ್ಟವನ್ನುಂಟು ಮಾಡುತ್ತಿಲ್ಲ. ಅವರಿಗೆ ವೇದನಾಯುಕ್ತ ಯಾತನೆ ಸಿದ್ಧವಿದೆ.

إِنَّ الَّذِينَ اشْتَرَوُا الْكُفْرَ بِالْإِيمَٰنِ
لَن يَضُرُّوا اللَّهَ شَيْـًٔا وَلَهُمْ عَذَابٌ أَلِيمٌ ﴿١٧٧﴾

178. ನಾವು ಸತ್ಯನಿಷೇಧಿಗಳಿಗೆ ಸಡಿಲು ಬಿಡುತ್ತ ಹೋಗುತ್ತಿರುವುದನ್ನು ಅವರು ತಮಗೆ ಹಿತಕರವೆಂದು ತಿಳಿಯದಿರಲಿ. ಅವರು ಪಾಪಗಳ ಮೂಟೆಯನ್ನು ಆದಷ್ಟು ಸಂಗ್ರಹಿಸಿಕೊಳ್ಳಲೆಂದೇ ನಾವು ಅವರಿಗೆ ಸಡಿಲು ಬಿಡುತ್ತಿದ್ದೇವೆ. ಮುಂದೆ ಅವರಿಗಾಗಿ ಅವಮಾನಕರ ಶಿಕ್ಷೆ ಕಾದಿದೆ.

وَلَا يَحْسَبَنَّ الَّذِينَ كَفَرُوٓا أَنَّمَا نُمْلِى
لَهُمْ خَيْرٌ لِّأَنفُسِهِمْ ۚ إِنَّمَا نُمْلِى لَهُمْ
لِيَزْدَادُوٓا إِثْمًا ۚ وَلَهُمْ عَذَابٌ مُّهِينٌ ﴿١٧٨﴾

179 ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಈಗ ನೀವು ಇರುವ ಸ್ಥಿತಿಯಲ್ಲಿ ಎಷ್ಟು ಮಾತ್ರಕ್ಕೂ ಇರಗೊಡಲಾರನು. ಅವನು ಶುದ್ಧರನ್ನು ಅಶುದ್ಧರಿಂದ ಬೇರ್ಪಡಿಸಿಯೇ ತೀರುವನು. ಆದರೆ ನಿಮಗೆ ಅಗೋಚರವನ್ನು ತಿಳಿಯಪಡಿಸುವುದು ಅಲ್ಲಾಹನ ಪದ್ಧತಿಯಲ್ಲ.[35] (ಪರೋಕ್ಷ ಜ್ಞಾನ ನೀಡುವುದಕ್ಕಾಗಿ) ಅಲ್ಲಾಹನು ತನ್ನ ಸಂದೇಶವಾಹಕರಲ್ಲಿ ಇಷ್ಟ ಬಂದವರನ್ನು ಆಯ್ದುಕೊಳ್ಳುತ್ತಾನೆ. ಆದುದರಿಂದ (ಪರೋಕ್ಷ ವಿಷಯಗಳ ಕುರಿತು) ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿರಿ, ನೀವು ಸತ್ಯವಿಶ್ವಾಸ ಮತ್ತು ದೇವನಿಷ್ಠೆಯಲ್ಲಿ ನಡೆದರೆ, ನಿಮಗೆ ಹಿರಿದಾದ ಪ್ರತಿಫಲ ಸಿಗುವುದು.

مَّا كَانَ اللَّهُ لِيَذَرَ الْمُؤْمِنِينَ عَلَىٰ مَآ أَنتُمْ
عَلَيْهِ حَتَّىٰ يَمِيزَ الْخَبِيثَ مِنَ الطَّيِّبِ ۗ وَمَا
كَانَ اللَّهُ لِيُطْلِعَكُمْ عَلَى الْغَيْبِ وَلَٰكِنَّ اللَّهَ
يَجْتَبِى مِن رُّسُلِهِۦ مَن يَشَآءُ ۖ فَـَٔامِنُوا بِاللَّهِ
وَرُسُلِهِۦ ۚ وَإِن تُؤْمِنُوا وَتَتَّقُوا فَلَكُمْ أَجْرٌ عَظِيمٌ ﴿١٧٩﴾

ಪ್ರವಾದಿ ಯಾರೂ ಯುದ್ಧಕ್ಕೆ ಅಣಿಯಾಗದಿದ್ದರೆ ನಾನೊಬ್ಬನೇ ಹೋಗುವೆ ಎಂದಾಗ ಹದಿನೈದು ನೂರು ನಿಷ್ಠಾವಂತರು ಅವರ ಜತೆಗೂಡಲು ಸಿದ್ಧರಾದರು. ಅವರನ್ನೇ ಕರೆದುಕೊಂಡು ಪ್ರವಾದಿವರ್ಯರು(ಸ) ಬದ್ರ್‌ಗೆ ಹೋದರು. ಅಬೂಸುಫ್‌ಯಾನ್ ಯುದ್ಧಕ್ಕೆ ಬರಲಿಲ್ಲ. ಮುಸ್ಲಿಮರು ಎಂಟು ದಿನಗಳ ಕಾಲ ಬದ್ರ್‌ನಲ್ಲಿ ತಂಗಿ ವ್ಯಾಪಾರ ವಹಿವಾಟು ನಡೆಸಿ ಸಾಕಷ್ಟು ಸಂಪಾದಿಸಿಕೊಂಡರು.

35. ಅರ್ಥಾತ್- ನಿಮ್ಮ ಪೈಕಿ ಯಾರು ಸತ್ಯವಿಶ್ವಾಸಿಗಳು ಮತ್ತು ಯಾರು ಕಪಟವಿಶ್ವಾಸಿಗಳು ಎಂದು ತಿಳಿಸುವುದು.

180. ಅಲ್ಲಾಹನು ತನ್ನ ಅನುಗ್ರಹ ಮಾಡಿದ ಅನಂತರವೂ ಜಿಪುಣತೆ ತೋರಿಸುವವರು- ಈ ಲೋಭವು ತಮ್ಮ ಪಾಲಿಗೆ ಶುಭಕರ ವೆಂದೆಣಿಸದಿರಲಿ. ಇದು ಅವರ ಮಟ್ಟಿಗೆ ಅತ್ಯಂತ ಅಶುಭಕರ ವಾಗಿರುವುದು. ಅವರು ತಮ್ಮ ಜಿಪುಣತೆಯಿಂದ ಸಂಗ್ರಹಿಸಿಡುವ ವಸ್ತುವೇ ಪುನರುತ್ಥಾನ ದಿನದಂದು ಅವರ ಕಂಠ ಕಡಗವಾಗು ವುದು. ಭೂಮಿ-ಆಕಾಶಗಳ ಅಂತಿಮ ಒಡೆತನ ಅಲ್ಲಾಹನಿಗಾಗಿಯೇ ಇದೆ. ನೀವು ಮಾಡುವುದನ್ನೆಲ್ಲ ಅಲ್ಲಾಹ್ ಬಲ್ಲವನಾಗಿರುತ್ತಾನೆ.

وَلَا يَحْسَبَنَّ الَّذِيْنَ يَبْخَلُوْنَ بِمَآ اٰتٰهُمُ
اللّٰهُ مِنْ فَضْلِهٖ هُوَ خَيْرًا لَّهُمْ ؕ بَلْ
هُوَ شَرٌّ لَّهُمْ ؕ سَيُطَوَّقُوْنَ مَا بَخِلُوْا
بِهٖ يَوْمَ الْقِيٰمَةِ ؕ وَلِلّٰهِ مِيْرَاثُ السَّمٰوٰتِ
وَالْاَرْضِ ؕ وَاللّٰهُ بِمَا تَعْمَلُوْنَ خَبِيْرٌ ﴿۱۸۰﴾ ع ۱۸

181. ಅಲ್ಲಾಹ್ ದರಿದ್ರನೆಂದೂ ನಾವು ಧನಿಕರೆಂದೂ ಹೇಳುವವರ ನುಡಿಯನ್ನು ಅಲ್ಲಾಹನು ಆಲಿಸಿದನು.[36] ನಾವು ಅವರ ಈ ಮಾತುಗಳನ್ನೂ ಬರೆದುಕೊಳ್ಳುವೆವು ಮತ್ತು ಇದಕ್ಕಿಂತ ಮುಂಚೆ ಅವರು ಪ್ರವಾದಿಗಳನ್ನು ನಿಷ್ಕಾರಣವಾಗಿ ವಧಿಸುತ್ತಿದ್ದುದೂ ಅವರ ಕರ್ಮಪತ್ರದಲ್ಲಿ ಉಲ್ಲೇಖಿತವಿದೆ. (ತೀರ್ಪಿನ ಸಮಯ ಬಂದಾಗ) ನಾವು ಅವರೊಡನೆ, "ಇದೋ ಈಗ ನರಕಯಾತನೆಯ ರುಚಿಯನ್ನು ಸವಿಯಿರಿ.

لَقَدْ سَمِعَ اللّٰهُ قَوْلَ الَّذِيْنَ قَالُوْٓا اِنَّ
اللّٰهَ فَقِيْرٌ وَّنَحْنُ اَغْنِيَآءُ ۘ سَنَكْتُبُ
مَا قَالُوْا وَقَتْلَهُمُ الْاَنْۢبِيَآءَ بِغَيْرِ حَقٍّ ۙ وقف لازم
وَّنَقُوْلُ ذُوْقُوْا عَذَابَ الْحَرِيْقِ ﴿۱۸۱﴾

182. ಇದು ನಿಮ್ಮ ಸ್ವಂತ ಕೈಗಳ ಗಳಿಕೆಯಾಗಿದೆ" ಎಂದು ಹೇಳುವೆವು. ಅಲ್ಲಾಹನು ತನ್ನ ದಾಸರ ಬಗ್ಗೆ ಅಕ್ರಮಿಯಲ್ಲ.

ذٰلِكَ بِمَا قَدَّمَتْ اَيْدِيْكُمْ وَاَنَّ اللّٰهَ
لَيْسَ بِظَلَّامٍ لِّلْعَبِيْدِ ﴿۱۸۲﴾ۚ

183. "ನಮ್ಮ ಮುಂದೆ ಒಂದು ಬಲಿಯನ್ನರ್ಪಿಸಿ, ಅದನ್ನು ಅಗ್ನಿಯು (ಪರೋಕ್ಷದಿಂದ ಬಂದು) ತಿನ್ನುವುದನ್ನು ತೋರಿಸಿ ಕೊಡದೆ ನಾವು ಯಾವನೇ ಸಂದೇಶವಾಹಕನ ಮೇಲೂ ವಿಶ್ವಾಸವಿಡಬಾರ ದೆಂದು ಅಲ್ಲಾಹ್ ನಮಗೆ ನಿರ್ದೇಶಿಸುತ್ತಾನೆ" ಎಂದು ಹೇಳು ತ್ತಿರುವವರೊಡನೆ ಹೇಳಿರಿ, "ನಿಮ್ಮ ಬಳಿಗೆ ನನಗಿಂತ ಮೊದಲು ಅನೇಕ ಸಂದೇಶವಾಹಕರು ಹಲವು ಪ್ರತ್ಯಕ್ಷ ಪ್ರಮಾಣಗಳನ್ನು ತಂದಿದ್ದರು ಮತ್ತು ನೀವೀಗ ಪ್ರಸ್ತಾಪಿಸುತ್ತಿರುವ ಪ್ರತ್ಯಕ್ಷ ಪ್ರಮಾಣವನ್ನೂ ತಂದಿದ್ದರು. (ವಿಶ್ವಾಸವಿಡಲಿಕ್ಕಾಗಿ ಈ ಶರತ್ತನ್ನು ಮುಂದಿರಿಸುವುದರಲ್ಲಿ) ನೀವು ಸತ್ಯವಾದಿಗಳಾಗಿದ್ದರೆ ಆ ಸಂದೇಶವಾಹಕರನ್ನೇಕೆ ವಧಿಸಿದಿರಿ?

اَلَّذِيْنَ قَالُوْٓا اِنَّ اللّٰهَ عَهِدَ اِلَيْنَآ اَلَّا
نُؤْمِنَ لِرَسُوْلٍ حَتّٰى يَاْتِيَنَا بِقُرْبَانٍ
تَاْكُلُهُ النَّارُ ؕ قُلْ قَدْ جَآءَكُمْ رُسُلٌ
مِّنْ قَبْلِيْ بِالْبَيِّنٰتِ وَبِالَّذِيْ قُلْتُمْ فَلِمَ
قَتَلْتُمُوْهُمْ اِنْ كُنْتُمْ صٰدِقِيْنَ ﴿۱۸۳﴾

36. ಇದು ಯಹೂದಿಗಳು ಹೇಳುವ ಮಾತು, "ಅಲ್ಲಾಹನಿಗೆ ಅತ್ಯುತ್ತಮ ಸಾಲ ನೀಡುವವರು ಯಾರಿದ್ದಾರೆ?" ಎಂಬ ಪವಿತ್ರ ಕುರ್‌ಆನಿನ ಸೂಕ್ತ ಅವತೀರ್ಣಗೊಂಡಾಗ ಯಹೂದಿಗಳು ಗೇಲಿ ಮಾಡಲಿಕ್ಕಾಗಿ, "ಹೌದು ಅಲ್ಲಾಹನೀಗ ದಿವಾಳಿಯಾಗಿದ್ದಾನೆ. ಆದ್ದರಿಂದ ಅವನೀಗ ತನ್ನ ದಾಸರಿಂದ ಸಾಲ ಕೇಳುತ್ತಿದ್ದಾನೆ" ಎನ್ನುತ್ತಿದ್ದರು.

184. ಈಗ ಓ ಪೈಗಂಬರರೇ, ಇವರು ನಿಮ್ಮನ್ನು ಸುಳ್ಳಾಗಿಸುತ್ತಿರುವರಾದರೆ, ನಿಮಗಿಂತ ಮೊದಲು ಸುಸ್ಪಷ್ಟ ಪ್ರಮಾಣಗಳನ್ನೂ ಕಿರುಗ್ರಂಥಗಳನ್ನೂ ಪ್ರಕಾಶ ನೀಡುವ ಗ್ರಂಥಗಳನ್ನೂ ತಂದಿದ್ದ ಹಲವಾರು ಸಂದೇಶವಾಹಕರು ಸುಳ್ಳಾಗಿಸಲ್ಪಟ್ಟಿದ್ದಾರೆ.

فَإِنْ كَذَّبُوكَ فَقَدْ كُذِّبَ رُسُلٌ مِّنْ
قَبْلِكَ جَآءُو بِالْبَيِّنٰتِ وَالزُّبُرِ وَالْكِتٰبِ الْمُنِيرِ ﴿١٨٤﴾

185. ಕಟ್ಟಕಡೆಗೆ ಪ್ರತಿಯೊಬ್ಬನಿಗೂ ಮರಣ ಹೊಂದಬೇಕಾಗಿದೆ ಮತ್ತು ನೀವೆಲ್ಲರೂ ನಿಮ್ಮ ನಿಮ್ಮ ಪ್ರತಿಫಲವನ್ನು ಪುನರುತ್ಥಾನ ದಿನದಂದು ಪಡೆಯುವವರಿದ್ದೀರಿ. ಅಲ್ಲಿ ನರಕಾಗ್ನಿಯಿಂದ ರಕ್ಷೆ ಹೊಂದುವವನೂ ಸ್ವರ್ಗದಲ್ಲಿ ದಾಖಲು ಮಾಡಲ್ಪಡುವವನೂ ನಿಜವಾದ ಕೃತಾರ್ಥನು. ಈ ಲೋಕದ ಜೀವನವಂತೂ ಕೇವಲ ಭ್ರಾಮಕ ಸಂಪತ್ತಾಗಿದೆ.

كُلُّ نَفْسٍ ذَآئِقَةُ الْمَوْتِ ۗ وَإِنَّمَا تُوَفَّوْنَ
أُجُورَكُمْ يَوْمَ الْقِيٰمَةِ ۖ فَمَنْ زُحْزِحَ عَنِ
النَّارِ وَأُدْخِلَ الْجَنَّةَ فَقَدْ فَازَ ۗ وَمَا
الْحَيٰوةُ الدُّنْيَآ إِلَّا مَتٰعُ الْغُرُورِ ﴿١٨٥﴾

186. ಮುಸ್ಲಿಮರೇ, ನಿಮಗೆ ಸಂಪತ್ತು ಮತ್ತು ಪ್ರಾಣ ಇವೆರಡರ ಪರೀಕ್ಷೆಗಳೂ ಮುಂದೆ ಬಂದೇ ತೀರುವುವು ಮತ್ತು ನೀವು ಗ್ರಂಥದವರಿಂದಲೂ ಬಹುದೇವ ವಿಶ್ವಾಸಿಗಳಿಂದಲೂ ಹಲವು ನೋಯಿಸುವ ಮಾತುಗಳನ್ನು ಕೇಳುವಿರಿ. ಈ ಸಂದರ್ಭಗಳಲ್ಲೆಲ್ಲ ನೀವು ಸಹನೆ ಮತ್ತು ಧರ್ಮನಿಷ್ಠೆಯ ಮಾರ್ಗದಲ್ಲಿ ಸ್ಥಿರವಾಗಿ ನಿಂತರೆ ಇದೊಂದು ಮಹಾ ಸಾಹಸಕಾರ್ಯವಾಗುವುದು.

لَتُبْلَوُنَّ فِيٓ أَمْوٰلِكُمْ وَأَنْفُسِكُمْ ۟ وَلَتَسْمَعُنَّ
مِنَ الَّذِينَ أُوتُوا الْكِتٰبَ مِنْ قَبْلِكُمْ وَمِنَ
الَّذِينَ أَشْرَكُوٓا أَذًى كَثِيرًا ۚ وَإِنْ تَصْبِرُوا
وَتَتَّقُوا فَإِنَّ ذٰلِكَ مِنْ عَزْمِ الْأُمُورِ ﴿١٨٦﴾

187. ಅಲ್ಲಾಹನು ಗ್ರಂಥದವರಿಂದ, "ನೀವು ಗ್ರಂಥದ ಬೋಧನೆಯನ್ನು ಜನರಿಗೆ ಪ್ರಸಾರಮಾಡಬೇಕಾದೀತು ಮತ್ತು ಅವುಗಳನ್ನು ಅಡಗಿಸಬಾರದು ಎಂಬ ಕರಾರನ್ನು ಪಡೆದ ಸಂದರ್ಭವನ್ನು ಅವರಿಗೆ ನೆನಪಿಸಿಕೊಡಿರಿ. ಆದರೆ ಅವರು ಗ್ರಂಥವನ್ನು ಕಡೆಗಣಿಸಿದರು ಮತ್ತು ಅದನ್ನು ಅಲ್ಪ ಬೆಲೆಗೆ ಮಾರಿದರು. ಇವರೆಂತಹ ಕೆಟ್ಟ ವ್ಯವಹಾರ ಮಾಡುತ್ತಿದ್ದಾರೆ!

وَإِذْ أَخَذَ اللّٰهُ مِيثٰقَ الَّذِينَ أُوتُوا الْكِتٰبَ
لَتُبَيِّنُنَّهُ لِلنَّاسِ وَلَا تَكْتُمُونَهُ فَنَبَذُوهُ
وَرَآءَ ظُهُورِهِمْ وَاشْتَرَوْا بِهِ ثَمَنًا قَلِيلًا ۖ
فَبِئْسَ مَا يَشْتَرُونَ ﴿١٨٧﴾

188. ತಮ್ಮ ಕೃತ್ಯಗಳಿಂದ ಸಂತುಷ್ಟರಾಗಿದ್ದು ನಿಜವಾಗಿ ತಾವು ಮಾಡದಿರುವ ಕಾರ್ಯಗಳ ಪ್ರಶಂಸೆ ತಮಗೆ ಸಲ್ಲಬೇಕೆಂದು ಬಯಸುವವರು ಯಾತನೆಯಿಂದ ಸುರಕ್ಷಿತರೆಂದು ನೀವೆಣಿಸಬೇಡಿರಿ. ವಾಸ್ತವದಲ್ಲಿ ಅವರಿಗೆ ವೇದನಾಯುಕ್ತ ಶಿಕ್ಷೆ ಸಿದ್ಧವಿದೆ.

لَا تَحْسَبَنَّ الَّذِينَ يَفْرَحُونَ بِمَآ أَتَوْا
وَّيُحِبُّونَ أَنْ يُّحْمَدُوا بِمَا لَمْ يَفْعَلُوا
فَلَا تَحْسَبَنَّهُمْ بِمَفَازَةٍ مِّنَ الْعَذَابِ ۚ
وَلَهُمْ عَذَابٌ أَلِيمٌ ﴿١٨٨﴾

189. ಅಲ್ಲಾಹನು ಭೂಮಿ-ಆಕಾಶಗಳ ಮಾಲಕನು ಮತ್ತು ಅವನ ಅಧಿಕಾರವು ಸರ್ವಸ್ವವನ್ನೂ ವ್ಯಾಪಿಸಿದೆ.

وَلِلّٰهِ مُلْكُ السَّمٰوٰتِ وَالْأَرْضِ ۗ وَاللّٰهُ
عَلٰى كُلِّ شَيْءٍ قَدِيرٌ ﴿١٨٩﴾ ١٩ ع ١٠

190. ಭೂಮಿ-ಆಕಾಶಗಳ ಸೃಷ್ಟಿಯಲ್ಲಿಯೂ ರಾತ್ರಿ ಹಗಲುಗಳು ಅನುಕ್ರಮವಾಗಿ ಬರುತ್ತಿರುವುದರಲ್ಲಿಯೂ ಬುದ್ಧಿಜೀವಿಗಳಿಗೆ ಸಾಕಷ್ಟು ನಿದರ್ಶನಗಳಿವೆ.

إِنَّ فِي خَلْقِ السَّمَاوَاتِ وَالْأَرْضِ وَاخْتِلَافِ
اللَّيْلِ وَالنَّهَارِ لَآيَاتٍ لِأُولِي الْأَلْبَابِ ﴿١٩٠﴾

191. ಅವರು ಎದ್ದಾಗಲೂ ಕುಳಿತಾಗಲೂ ಮಲಗಿದಾಗಲೂ ಎಲ್ಲ ಸ್ಥಿತಿಗಳಲ್ಲೂ ಅಲ್ಲಾಹನನ್ನು ಸ್ಮರಿಸುತ್ತಾರೆ ಮತ್ತು ಭೂಮಿ-ಆಕಾಶಗಳ ನಿರ್ಮಾಣದ ಬಗ್ಗೆ ಪರ್ಯಾಲೋಚಿಸುತ್ತಾರೆ. (ಅವರು ಪರವಶರಾಗಿ ಹೀಗೆನ್ನುತ್ತಾರೆ) "ಪ್ರಭೂ, ನೀನು ಇವುಗಳನ್ನೆಲ್ಲ ವ್ಯರ್ಥ ಹಾಗೂ ಉದ್ದೇಶರಹಿತವಾಗಿ ಸೃಷ್ಟಿಸಲಿಲ್ಲ. ನೀನು (ನಿರರ್ಥಕ ಕಾರ್ಯಗಳನ್ನೆಸಗುವುದರಿಂದ) ಪರಿಶುದ್ಧನು. ಆದುದರಿಂದ ಓ ನಮ್ಮ ಪ್ರಭೂ, ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು.

الَّذِينَ يَذْكُرُونَ اللَّهَ قِيَامًا وَقُعُودًا وَعَلَىٰ
جُنُوبِهِمْ وَيَتَفَكَّرُونَ فِي خَلْقِ السَّمَاوَاتِ
وَالْأَرْضِ رَبَّنَا مَا خَلَقْتَ هَٰذَا بَاطِلًا
سُبْحَانَكَ فَقِنَا عَذَابَ النَّارِ ﴿١٩١﴾

192. ನೀನು ಯಾರನ್ನು ನರಕದಲ್ಲಿ ಹಾಕಿದೆಯೋ ಅವನನ್ನು ಅತಿ ಅಪಮಾನಕಾರಕ ದುರ್ಗತಿಯಲ್ಲಿ ಹಾಕಿದೆ. ಇಂತಹ ಅಕ್ರಮಿಗಳಿಗೆ ಯಾರೂ ಸಹಾಯಕರಿರಲಾರರು.

رَبَّنَا إِنَّكَ مَنْ تُدْخِلِ النَّارَ فَقَدْ
أَخْزَيْتَهُ ۖ وَمَا لِلظَّالِمِينَ مِنْ أَنْصَارٍ ﴿١٩٢﴾

193. ಓ ನಮ್ಮ ಪ್ರಭೂ, ನಾವು ಸತ್ಯವಿಶ್ವಾಸದ ಕಡೆಗೆ ಆಹ್ವಾನಿಸುತ್ತಿದ್ದ ಮತ್ತು ನಿಮ್ಮ ಪ್ರಭುವನ್ನು ನಂಬಿರೆಂದು ಹೇಳುತ್ತಿದ್ದ ಓರ್ವ ಕರೆ ಕೊಡುವಾತನನ್ನು ಆಲಿಸಿದೆವು. ನಾವು ಅವನ ಆಹ್ವಾನವನ್ನು ಸ್ವೀಕರಿಸಿದೆವು. ಆದುದರಿಂದ ಓ ನಮ್ಮೊಡೆಯಾ, ನಮ್ಮಿಂದ ಸಂಭವಿಸಿ ಹೋಗಿದ್ದ ಅಪರಾಧಗಳನ್ನು ಕ್ಷಮಿಸು. ನಮ್ಮಲ್ಲಿರುವ ಕೆಡುಕುಗಳನ್ನು ದೂರೀಕರಿಸು ಮತ್ತು ನಮ್ಮ ಅವಸಾನವನ್ನು ಸಜ್ಜನರೊಂದಿಗೆ ಮಾಡು.

رَبَّنَا إِنَّنَا سَمِعْنَا مُنَادِيًا يُنَادِي لِلْإِيمَانِ
أَنْ آمِنُوا بِرَبِّكُمْ فَآمَنَّا ۚ رَبَّنَا فَاغْفِرْ لَنَا
ذُنُوبَنَا وَكَفِّرْ عَنَّا سَيِّئَاتِنَا وَتَوَفَّنَا مَعَ الْأَبْرَارِ ﴿١٩٣﴾

194. ಓ ನಮ್ಮ ಪ್ರಭೂ, ನೀನು ನಿನ್ನ ಸಂದೇಶವಾಹಕರ ಮೂಲಕ ಮಾಡಿರುವ ವಾಗ್ದಾನಗಳನ್ನು ನಮಗೆ ನೆರವೇರಿಸಿಕೊಡು ಮತ್ತು ಪುನರುತ್ಥಾನ ದಿನದಂದು ನಮ್ಮನ್ನು ಅವಮಾನಕ್ಕೊಳಪಡಿಸಬೇಡ. ನಿಶ್ಚಯವಾಗಿಯೂ ನೀನು ನಿನ್ನ ವಾಗ್ದಾನಕ್ಕೆ ವ್ಯತಿರಿಕ್ತವಾಗಿ ನಡೆಯುವವನಲ್ಲ."

رَبَّنَا وَآتِنَا مَا وَعَدْتَنَا عَلَىٰ رُسُلِكَ وَلَا
تُخْزِنَا يَوْمَ الْقِيَامَةِ ۗ إِنَّكَ لَا تُخْلِفُ الْمِيعَادَ ﴿١٩٤﴾

195. ಉತ್ತರವಾಗಿ ಅವರ ಪ್ರಭು ಹೇಳಿದನು, "ನಾನು ನಿಮ್ಮಲ್ಲಿ ಯಾರೊಬ್ಬನ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷರಾಗಲಿ ಸ್ತ್ರೀಯರಾಗಲಿ ನೀವೆಲ್ಲ ಒಂದೇ ವರ್ಗದವರು. ಆದುದರಿಂದ ಯಾರೂ ನನಗಾಗಿ ತಮ್ಮ ದೇಶ ತ್ಯಾಗ ಮಾಡಿದರೋ ನನ್ನ ಮಾರ್ಗದಲ್ಲಿ ಮನೆ-ಮಾರುಗಳಿಂದ

فَاسْتَجَابَ لَهُمْ رَبُّهُمْ أَنِّي لَا أُضِيعُ عَمَلَ
عَامِلٍ مِنْكُمْ مِنْ ذَكَرٍ أَوْ أُنْثَىٰ ۖ بَعْضُكُمْ
مِنْ بَعْضٍ ۖ فَالَّذِينَ هَاجَرُوا وَأُخْرِجُوا
مِنْ دِيَارِهِمْ وَأُوذُوا فِي سَبِيلِي وَقَاتَلُوا

ಹೊರಕ್ಕಟ್ಟಲ್ಪಟ್ಟರೋ, ಸತಾಯಿಸಲ್ಪಟ್ಟರೋ, ನನಗಾಗಿ ಹೋರಾಟ ನಡೆಸಿದರೋ ಮತ್ತು ವಧಿಸಲ್ಪಟ್ಟರೋ ಅವರೆಲ್ಲರ ಅಪರಾಧ ಗಳನ್ನು ನಾನು ಕ್ಷಮಿಸಿಬಿಡುವೆನು ಮತ್ತು ಅವರಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಲ್ಲಿ ಪ್ರವೇಶ ಕೊಡುವೆನು. ಇದು ಅವರಿಗೆ ಅಲ್ಲಾಹನ ಬಳಿ ಇರುವ ಪ್ರತಿಫಲ ಮತ್ತು ಅತ್ಯುತ್ತಮ ಪ್ರತಿಫಲ ಅಲ್ಲಾಹನ ಬಳಿಯಲ್ಲೇ ಇದೆ.

وَقُتِلُوْا لَاُكَفِّرَنَّ عَنْهُمْ سَيِّاٰتِهِمْ وَلَاُدْخِلَنَّهُمْ جَنّٰتٍ تَجْرِيْ مِنْ تَحْتِهَا الْاَنْهٰرُ ثَوَابًا مِّنْ عِنْدِ اللّٰهِ ؕ وَاللّٰهُ عِنْدَهٗ حُسْنُ الثَّوَابِ ۝١٩٥

196. ಓ ಪೈಗಂಬರರೇ, ನಾಡುಗಳಲ್ಲಿ ಅಲ್ಲಾಹನ ಅವಿಧೇಯ ದಾಸರ ಮೆರೆದಾಟವು ನಿಮ್ಮನ್ನು ವಂಚಿಸದಿರಲಿ.

لَا يَغُرَّنَّكَ تَقَلُّبُ الَّذِيْنَ كَفَرُوْا فِي الْبِلَادِ ؕ ۝١٩٦

197. ಇದು ಕೇವಲ ಕೆಲವೇ ದಿನಗಳ ಬಾಳುವೆಯ ಕಿಂಚಿತ್ ಸುಖಭೋಗ. ಅನಂತರ ಇವರೆಲ್ಲರೂ ಅತಿ ನಿಕೃಷ್ಟ ವಾಸಸ್ಥಾನವಾಗಿರುವ ನರಕಾಗ್ನಿಯನ್ನು ಸೇರುವರು.

مَتَاعٌ قَلِيْلٌ ۫ ثُمَّ مَاْوٰىهُمْ جَهَنَّمُ ؕ وَبِئْسَ الْمِهَادُ ۝١٩٧

198. ಇದಕ್ಕೆ ವ್ಯತಿರಿಕ್ತವಾಗಿ ತಮ್ಮ ಪ್ರಭುವನ್ನು ಭಯಪಡುತ್ತ ಜೀವನ ನಡೆಸುವವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಿದ್ದು ಅವುಗಳಲ್ಲಿ ಅವರು ಸದಾಕಾಲ ವಾಸಿಸುವರು. ಅವರಿಗೆ ಅಲ್ಲಾಹನ ವತಿಯಿಂದ ಆತಿಥ್ಯವಿದು ಮತ್ತು ಯಾವುದು ಅಲ್ಲಾಹನ ಬಳಿ ಇದೆಯೋ ಅದುವೇ ಸಜ್ಜನರಿಗೆ ಅತ್ಯುತ್ತಮ.

لٰكِنِ الَّذِيْنَ اتَّقَوْا رَبَّهُمْ لَهُمْ جَنّٰتٌ تَجْرِيْ مِنْ تَحْتِهَا الْاَنْهٰرُ خٰلِدِيْنَ فِيْهَا نُزُلًا مِّنْ عِنْدِ اللّٰهِ ؕ وَمَا عِنْدَ اللّٰهِ خَيْرٌ لِّلْاَبْرَارِ ۝١٩٨ الثلثة

199. ಗ್ರಂಥದವರಲ್ಲಿ ಕೆಲವರು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತಾರೆ. ನಿಮ್ಮ ಕಡೆಗೆ ಕಳುಹಿಸಲ್ಪಟ್ಟ ಗ್ರಂಥದ ಮೇಲೂ ಇದಕ್ಕಿಂತ ಮುಂಚೆ ಸ್ವತಃ ಅವರ ಕಡೆಗೆ ಕಳುಹಿಸಲ್ಪಟ್ಟ ಗ್ರಂಥದ ಮೇಲೂ ವಿಶ್ವಾಸವಿಡುತ್ತಾರೆ. ಅಲ್ಲಾಹನ ಮುಂದೆ ಬಾಗಿರುತ್ತಾರೆ ಮತ್ತು ಅಲ್ಲಾಹನ ಸೂಕ್ತಗಳನ್ನು ಅವರು ಅಲ್ಪ ಬೆಲೆಗೆ ಮಾರಿಬಿಡುವುದಿಲ್ಲ. ಅವರ ಪ್ರತಿಫಲ ಅವರ ಪ್ರಭುವಿನ ಬಳಿ ಇದೆ ಮತ್ತು ಅಲ್ಲಾಹ್ ಲೆಕ್ಕ ತೀರಿಸುವುದರಲ್ಲಿ ಅತಿ ಶೀಘ್ರನು.

وَاِنَّ مِنْ اَهْلِ الْكِتٰبِ لَمَنْ يُّؤْمِنُ بِاللّٰهِ وَمَآ اُنْزِلَ اِلَيْكُمْ وَمَآ اُنْزِلَ اِلَيْهِمْ خٰشِعِيْنَ لِلّٰهِ ۙ لَا يَشْتَرُوْنَ بِاٰيٰتِ اللّٰهِ ثَمَنًا قَلِيْلًا ؕ اُولٰٓئِكَ لَهُمْ اَجْرُهُمْ عِنْدَ رَبِّهِمْ ؕ اِنَّ اللّٰهَ سَرِيْعُ الْحِسَابِ ۝١٩٩

200. ಓ ಸತ್ಯವಿಶ್ವಾಸಿಗಳೇ, ಸಹನೆಯಿಂದ ವರ್ತಿಸಿರಿ. ಮಿಥ್ಯಾರಾಧಕರ ಎದುರು ಸ್ಥೈರ್ಯ ತೋರಿಸಿರಿ. ಸತ್ಯದ ಸೇವೆಗಾಗಿ ಟೊಂಕ ಕಟ್ಟಿಕೊಂಡಿರಿ ಮತ್ತು ಅಲ್ಲಾಹನನ್ನು ಭಯಪಡುತ್ತಲಿರಿ. ನೀವು ವಿಜಯಿಗಳಾಗುವಿರೆಂದು ನಿರೀಕ್ಷಿಸಬಹುದು.

يٰٓاَيُّهَا الَّذِيْنَ اٰمَنُوا اصْبِرُوْا وَصَابِرُوْا وَرَابِطُوْا ۫ وَاتَّقُوا اللّٰهَ لَعَلَّكُمْ تُفْلِحُوْنَ ۝٢٠٠ ع ٢٠
